ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 13 ಗುರುವಾರ 2025
ಸಂಪುಟ: 46 | ಸಂಚಿಕೆ: 205 | ಪುಟಗಳು: 12
₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹೈಕಮಾಂಡ್ ಅಂಗಳದಲ್ಲಿ ಪವರ್ ಪ್ಲೇ!
ನ.15ಕ್ಕೆ ದೆಹಲಿಗೆ ಸಿಎಂ, ಡಿಸಿಎಂ

ಬೆಂಗಳೂರು,ನ.12–ಬಿಹಾರ ಎಲೆಕ್ಷನ್ ಮುಗಿದ ಬೆನ್ನಲ್ಲೇ ಕರ್ನಾಟಕ ಗದ್ದುಗೆ ಗುದ್ದಾಟಕ್ಕೆ ಮತ್ತೆ ರೆಕ್ಕೆಪುಕ್ಕ ಬಂದಿದೆ. ಬಿಹಾರ ಚುನಾವಣೆಯಲ್ಲಿ ಬ್ಯುಸಿಯಾಗಿದ್ದ ಹೈಕಮಾಂಡ್ ಈಗ ರಾಜ್ಯದತ್ತ ಚಿತ್ತ ಹರಿಸಲು ಮುಂದಾಗಿದೆ. ನವೆಂಬರ್ 15ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದು, ಸಂಪುಟ ಪುನಾರಚನೆ ಚರ್ಚೆ ನೆಪದಲ್ಲಿ ನಾಯಕತ್ವ ಬದಲಾವಣೆ ಚರ್ಚೆಗೂ ಮುನ್ನುಡಿ ಬರೆಯುತ್ತಾರಾ ಎಂಬ ಭಾರೀ ಕುತೂಹಲ ಕೆರಳಿಸಿದೆ.

ಒಂದು ವೇಳೆ ರಾಹುಲ್ ಗಾಂಧಿ ಭೇಟಿಗೆ ಸಮಯ ಸಿಕ್ಕರೆ ರಾಜಕೀಯ ಗೊಂದಲಗಳಿಗೆ ತೆರೆ ಬೀಳುವ ಸಾಧ್ಯತೆ ಇದೆ. ಡಿಸಿಎಂ ಡಿ.ಕೆ.ಶಿವಕುಮಾರ್, ಕೂಡ ನವೆಂಬರ್ 15ರಂದೇ ದೆಹಲಿಗೆ ತೆರಳುತ್ತಿದ್ದಾರೆ. ಇತ್ತ ಸಚಿವ ಸ್ಥಾನ ಭದ್ರಪಡಿಸಿಕೊಳ್ಳಲು ಸಚಿವರು ಕೂಡ ಇನ್ನಿಲ್ಲದ ಸರ್ಕಸ್ ಮಾಡುತ್ತಿದ್ದಾರೆ. ಸಿಎಂ ದೆಹಲಿ ಭೇಟಿ ಹಿನ್ನೆಲೆಯಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯಕ್ಕೆ ಬಂದಿದ್ದು, ಸಚಿವರ ಮ್ಯಾರಥಾನ್ ಭೇಟಿ ಶುರುವಾಗಿದೆ.

ಬುಧವಾರ ಸಚಿವ ಜಮೀರ್ ಅಹ್ಮದ್, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಖರ್ಗೆಯವರನ್ನು ಭೇಟಿಯಾದರು. ಮಂಗಳವಾರ ದೆಹಲಿಯಲ್ಲಿ ಸತೀಶ್ ಜಾರಕಿಹೊಳಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಭೇಟಿಯಾಗಿದ್ದು, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ▶ 6ನೇ ಪುಟಕ್ಕೆ



ಸಿದ್ದರಾಮಯ್ಯ ಸಿಎಂ ಸ್ಥಾನದಲ್ಲಿ ಮುಂದುವರೆದರೆ ತಪ್ಪೇನು?

ಬೆಂಗಳೂರು: ತಾವು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಮುಖ್ಯಮಂತ್ರಿಯಾಗಿ ಮುಂದುವರಿದರೆ ಏನು ತಪ್ಪೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

2028ರಲ್ಲಿ ಸಿದ್ದರಾಮಯ್ಯ ಅವರ ಐದು ವರ್ಷಗಳ ಅವಧಿ ಪೂರ್ಣಗೊಂಡ ನಂತರ ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಬಹುದು ಎಂಬ ಸಚಿವ ಬಿ ಝಡ್ ಜಮೀರ್ ಅಹ್ಮದ್ ಖಾನ್ ಅವರ ಇತ್ತೀಚಿನ ▶ 6ನೇ ಪುಟಕ್ಕೆ

ಕೆಪಿಸಿಸಿ ಅಧ್ಯಕ್ಷ ಗಾದಿಗೆ ಸತೀಶ್ ಜಾರಕಿಹೊಳಿ ಮತ್ತೆ ಲಾಬಿ

ನವದೆಹಲಿ: 2028ರಲ್ಲಿ ಮುಖ್ಯಮಂತ್ರಿಯಾಗಬೇಕು ಎಂದು ಕನಸು ಹೊತ್ತಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕೆಪಿಸಿಸಿ ಅಧ್ಯಕ್ಷ ಗಾದಿಗೆ ಮತ್ತೆ ಪ್ರಯತ್ನ ನಡೆಸಿದ್ದಾರೆ.



ಸತೀಶ್ ಜಾರಕಿಹೊಳಿ

ನವದೆಹಲಿಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು, ಮಂಗಳವಾರ ರಾತ್ರಿ ಭೇಟಿ ಮಾಡಿ, ಸುಮಾರು ಅರ್ಧ ಗಂಟೆ ಚರ್ಚಿಸಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಿದರೆ ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ಸಂದರ್ಭದಲ್ಲೇ ಡಿ.ಕೆ.ಶಿವಕುಮಾರ್ ಅವರು ಲೋಕಸಭಾ ಚುನಾವಣೆಯವರೆಗೆ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಹೈಕಮಾಂಡ್ ತಿಳಿಸಿತ್ತು. ಎರಡೂವರೆ ವರ್ಷ ▶ 6ನೇ ಪುಟಕ್ಕೆ

ದೆಹಲಿ ಸ್ಫೋಟ ಭಯೋತ್ಪಾದಕ ಕೃತ್ಯ



ಕೇಂದ್ರದಿಂದ ಅಧಿಕೃತ ಘೋಷಣೆ

ನವದೆಹಲಿ: ದೆಹಲಿ ಕಾರು ಸ್ಫೋಟ ಪ್ರಕರಣದ ತನಿಖೆ ತೀವ್ರಗೊಂಡಿದೆ. ಶಂಕಿತ ಉಗ್ರರನ್ನು ಅರೆಸ್ಟ್ ಮಾಡಲಾಗುತ್ತಿದೆ. ಘಟನೆ ನಡೆದ ಎರಡು ದಿನಗಳ ಬಳಿಕ ಎಲ್ಲಾ ದಾಖಲೆ ಸಂಗ್ರಹಿಸಿರುವ ಕೇಂದ್ರ ಸರ್ಕಾರ ದೆಹಲಿ ಕಾರು ಸ್ಫೋಟ ಭಯೋತ್ಪಾದಕ ಕೃತ್ಯ ಎಂದು ಅಧಿಕೃತವಾಗಿ ಘೋಷಿಸಿದೆ.

ಕೇಂದ್ರ ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ದೆಹಲಿ ಕಾರು ಸ್ಫೋಟ ಅತ್ಯಂತ ಭೀಕರ ಭಯೋತ್ಪಾದಕ ಕೃತ್ಯ. ಇದಕ್ಕೆ ತಕ್ಕ ಶಾಸ್ತಿ ಮಾಡುತ್ತೇವೆ ಎಂದಿದ್ದಾರೆ. ಕ್ಯಾಬಿನೆಟ್ ಈ ಕೃತ್ಯವನ್ನು ಉಗ್ರವಾಗಿ ಖಂಡಿಸಿದೆ. ಭಯೋತ್ಪಾದನೆ, ಉಗ್ರರ ದಾಳಿ ವಿರುದ್ಧ ಭಾರತ ಶೂನ್ಯ ಸಹಿಷ್ಣುತೆ ಹೊಂದಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ದೆಹಲಿ ಕಾರು ಸ್ಫೋಟದ ಕುರಿತು ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹಲವು ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಮೊದಲಿಗೆ ಈ ಭಯೋತ್ಪಾದಕ ಕೃತ್ಯದಲ್ಲಿ ಮಡಿದವರಿಗೆ ಮೌನ ಶ್ರದ್ಧಾಂಜಲಿ ಸಲ್ಲಿಸಲಾಗಿದೆ. ಇದೇ ವೇಳೆ ಗಾಯಾಳುಗಳ ಶೀಘ್ರ ಚೇತರಿಕೆಗೆ ಪ್ರಾರ್ಥಿಸಲಾಯಿತು ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಘಟನೆಯ ಸಂತ್ರಸ್ತರಿಗೆ ಕೇಂದ್ರ ಸರ್ಕಾರ ಎಲ್ಲಾ ನೆರವು ನೀಡಲಿದೆ ಎಂದಿದ್ದಾರೆ. ಈ ಪ್ರಕರಣದ ತನಿಖೆ ನಡೆಯುತ್ತಿದೆ. ವಿಳಂಬವಿಲ್ಲದೆ ಸಂತ್ರಸ್ತರಿಗೆ ನ್ಯಾಯ ಒದಗಿಸುತ್ತೇವೆ. ಈ ಭಯೋತ್ಪಾದಕ ಕೃತ್ಯದ ಪಾಲುದಾರರು, ಭಾಗಿಯಾದವರು, ಕೈಜೋಡಿಸಿದವರು ಸೇರಿದಂತೆ ಇದರ ಹಿಂದಿನ ಕಾಣದ ಕೈಗಳಿಗೂ ತಕ್ಕ ಶಾಸ್ತಿ ಮಾಡುತ್ತೇವೆ. ಉನ್ನತ ಅಧಿಕಾರಿಗಳ ▶ 6ನೇ ಪುಟಕ್ಕೆ

ಬಂಧಿತ ವೈದ್ಯರು ಜನವರಿಯಲ್ಲಿ ಹಲವು ಬಾರಿ ಕೆಂಪು ಕೋಟೆ ಪ್ರದೇಶಕ್ಕೆ ಭೇಟಿ ನೀಡಿದ್ದರು

ನವದೆಹಲಿ: ದೆಹಲಿಯ ಕೆಂಪು ಕೋಟೆ ಮೆಟ್ರೋ ನಿಲ್ದಾಣ ಸ್ಫೋಟದ ಪ್ರಮುಖ ಶಂಕಿತರಲ್ಲಿ ಒಬ್ಬನಾದ ಡಾ. ಮುಜಮ್ಮಿಲ್ ಗನೈ ಈ ವರ್ಷದ ಆರಂಭದಲ್ಲಿ ಈ ಪ್ರದೇಶಕ್ಕೆ ಹಲವು ಬಾರಿ ಬಂದು ಹೋಗಿದ್ದನು ಎಂದು ಪೊಲೀಸರು ತಮ್ಮ ಮೊಬೈಲ್ ಡಂಪ್ ಡೇಟಾದಲ್ಲಿ ವಿಶ್ಲೇಷಿಸುತ್ತಿದ್ದಾರೆ.

ಜನವರಿ 26ರ ಗಣರಾಜ್ಯೋತ್ಸವ ಕಾರ್ಯಕ್ರಮ ನಡೆಯುವ ಐತಿಹಾಸಿಕ ಸ್ಥಳವನ್ನು ಗುರಿಯಾಗಿಸುವ ವಿಶಾಲವಾದ ಸಂಚಿನ ಭಾಗವಾಗಿ ಈ ಭೇಟಿಗಳು ನಡೆದಿವೆ ಎಂದು ತನಿಖಾಧಿಕಾರಿಗಳು ನಂಬಿದ್ದಾರೆ. ಆ ಸಮಯದಲ್ಲಿ ಹೆಚ್ಚಿನ ಭದ್ರತೆ ಇದ್ದ ಕಾರಣ ಸಂಚು ವಿಫಲವಾಗಿರಬಹುದು ಎಂದು ಹೇಳಲಾಗುತ್ತಿದೆ. ಮುಜಮ್ಮಿಲ್ ಮತ್ತು ಆತನ ಸಹಚರ ಡಾ.ಉಮರ್ ನಬಿ ಜನವರಿ ಆರಂಭದಲ್ಲಿ ಜನಸಂದಣಿಯ ▶ 6ನೇ ಪುಟಕ್ಕೆ

ಉಗ್ರರ ನಂಟು; ವಜಾ ಆಗಿದ್ದ ಪ್ರೊಫೆಸರ್ ನೇಮಿಸಿಕೊಂಡಿದ್ದ ಅಲ್ ಫಲಾಹ್ ವಿವಿ!

ನವದೆಹಲಿ: ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದಕ್ಕೆ ಈ ಹಿಂದೆ ವಜಾಗೊಂಡಿದ್ದ ಪ್ರಾಧ್ಯಾಪಕನೊಬ್ಬನನ್ನು ಅಲ್ ಫ಼ಲಾಹ್ ವಿಶ್ವವಿದ್ಯಾಲಯ ಮತ್ತೆ ನೇಮಕ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ.



ದೆಹಲಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಫರಿದಾಬಾದ್‌ನಲ್ಲಿರುವ ಅಲ್ ಫಲಾಹ್ ವಿವಿ ಕೂಡ ತನಿಖೆಗೆ ಒಳಪಟ್ಟಿದೆ. ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದಕ್ಕಾಗಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್‌ರಿಂದ ಪ್ರಾಧ್ಯಾಪಕನೊಬ್ಬ ವಜಾಗೊಂಡಿದ್ದ. ಆದರೆ, ಈ ವಿವಿ ಆತನನ್ನು ಮತ್ತೆ ನೇಮಕ ಮಾಡಿಕೊಂಡಿತ್ತು. ಅಲ್–ಫಲಾಹ್ ವಿಶ್ವವಿದ್ಯಾಲಯದ ▶ 6ನೇ ಪುಟಕ್ಕೆ

ಭೂತಾನ್ ಪ್ರವಾಸ ಮುಗಿಸಿ ನೇರವಾಗಿ ಆಸ್ಪತ್ರೆಗೆ ಭೇಟಿ ನೀಡಿದ ಪ್ರಧಾನಿ ಮೋದಿ!



ನವದೆದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ದೆಹಲಿ ಕಾರು ಬಾಂಬ್ ಸ್ಫೋಟದ ಗಾಯಾಳುಗಳನ್ನು ಭೇಟಿ ಮಾಡಿದರು. ಭೂತಾನ್ ಪ್ರವಾಸ ಮುಗಿಸಿ ನವದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿ ಮೋದಿ, ನೇರವಾಗಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಈ ವೇಳೆ ದು:ಖತಪ್ತ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಪ್ರಧಾನಿ ಮೋದಿ, ಬೇಗ ಗುಣಮುಖರಾಗುವಂತೆ ಹಾರೈಸಿದರು. ಭೇಟಿಯ ಹಿನ್ನೆಲೆಯಲ್ಲಿ ಆಸ್ಪತ್ರೆಯ ಹೊರಗೆ ಭದ್ರತೆಯನ್ನು ಹೆಚ್ಚಿಸಲಾಗಿತ್ತು. ಪ್ರತಿಯೊಬ್ಬ ಗಾಯಾಳುವನ್ನು ವೈಯಕ್ತಿಕವಾಗಿ ಭೇಟಿ ಮಾಡಿದ ಪ್ರಧಾನಿ ಮೋದಿ, ವೈದ್ಯರಿಂದ ಅವರ ಆರೋಗ್ಯದ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ವೇಳೆ ಪ್ರಧಾನಿ ಮೋದಿ ಅವರನ್ನು ನೋಡುತ್ತಲೇ ಕಣ್ಣೀರು ಹಾಕಿದ ಮಹಿಳಾ ಗಾಯಾಳುವೋರ್ವರನ್ನು ಮೋದಿ ಸಂತೈಸಿದರು. ಈ ವೇಳೆ ನರೇಂದ್ರ ಮೋದಿ ಅವರಿಗೆ ಕಾರು ಬಾಂಬ್ ಸ್ಫೋಟದ ಕ್ಷಣಗಳ ಬಗ್ಗೆ ವಿವರಣೆ ನೀಡಿದ ಗಾಯಾಳುಗಳು, ಸ್ಫೋಟದ ಭೀಕರತೆಯನ್ನು ತೆರೆದಿಟ್ಟರು. ಮೋದಿ ಅವರು ಎಲ್ಲಾ ಗಾಯಾಳುಗಳು ಬೇಗ ಗುಣಮುಖರಾಗಲಿ ಎಂದು ಹಾರೈಸಿದರು.

ಉಗ್ರರ ಟಾರ್ಗೆಟ್ ಕೆಂಪು ಕೋಟೆ ಅಲ್ಲ; ಅಯೋಧ್ಯೆ, ವಾರಣಾಸಿ!

ನವದೆಹಲಿ: ಕೆಂಪು ಕೋಟೆ ಬಳಿ ಕಾರು ಸ್ಫೋಟ ಪ್ರಕರಣದ ಕುರಿತ ತನಿಖೆ ವೇಳೆ ಈ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ. ಉಗ್ರರ ಗುರಿ ಅಸಲಿಗೆ ಕೆಂಪು ಕೋಟೆ ಆಗಿರಲಿಲ್ಲ. ಅವರ ಟಾರ್ಗೆಟ್ ಇದ್ದಿದ್ದು, ಉತ್ತರ ಪ್ರದೇಶದ ಪ್ರಸಿದ್ಧ ಧಾರ್ಮಿಕ ಸ್ಥಳಗಳು ಎಂಬುದು ಬಹಿರಂಗಗೊಂಡಿದೆ.

ಅಯೋಧ್ಯೆ, ವಾರಣಾಸಿ ಗುರಿಯಾಗಿಸಿ ಅಲ್ಲಿ ದೊಡ್ಡಮಟ್ಟದಲ್ಲಿ ಸ್ಫೋಟ ನಡೆಸಲು ಉದ್ದೇಶಿಸಲಾಗಿತ್ತು. ಅಲ್ಲದೆ, ರಕ್ತದಾನ ಶಿಬಿರಗಳು ಮತ್ತು ಜನಸಂದಣಿಯ ಸ್ಥಳಗಳನ್ನು ಸಹ ತಮ್ಮ ಗುರಿಯಾಗಿರಿಸಿಕೊಂಡು, ಸಂಚು ರೂಪಿಸಿದ್ದರು. ಅದಕ್ಕಾಗಿ ಡಾಕ್ಟರ್ ಶಾಹೀನ್ ಶಾಹಿದ್, ಸ್ಲೀಪರ್ ಸೆಲ್‌ಗಳನ್ನು ಸಕ್ರಿಯಗೊಳಿಸಿದ್ದಳು. ಆಸ್ಪತ್ರೆಗಳು, ಸಾರ್ವಜನಿಕ ಸ್ಥಳಗಳ ಪಟ್ಟಿ ಸಿದ್ದಪಡಿಸಲಾಗಿತ್ತು. ಹಲವು ಸ್ಥಳಗಳಿಗೆ ಭೇಟಿ ನೀಡಿ ವಿಧ್ವಂಸಕ ಕೃತ್ಯಕ್ಕೆ ನೀಲನಕ್ಷೆ ತಯಾರಿಸಲಾಗಿತ್ತು ಎಂದು ಡಾ.ಶಾಹೀನ್ ವಿಚಾರಣೆ ವೇಳೆ ತಿಳಿಸಿದ್ದಾಳೆ ಎಂದು ಮೂಲಗಳು ಹೇಳಿವೆ.



ಆದರೆ, ಉಗ್ರರು ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮೊದಲೇ ಭದ್ರತಾ ತಂಡಗಳು ▶ 6ನೇ ಪುಟಕ್ಕೆ

ಮಹಿಳಾ ನೌಕರರಿಗೆ ಋತುಚಕ್ರ ರಜೆ

ಸರ್ಕಾರದಿಂದ ಅಧಿಕೃತ ಆದೇಶ

ಬೆಂಗಳೂರು: ಮಹಿಳಾ ನೌಕರರಿಗೆ ಋತುಚಕ್ರ ರಜೆ ನೀಡಲು ಸರ್ಕಾರವು ಅಧಿಕೃತ ಆದೇಶ ಹೊರಡಿಸಿದೆ. ಸರ್ಕಾರಿ, ಅನುದಾನಿತ, ಖಾಸಗಿ ಎಲ್ಲಾ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ತಿಂಗಳಲ್ಲಿ 1 ದಿನ ಋತುಚಕ್ರ ರಜೆ ನೀಡಬೇಕು. ತಿಂಗಳಲ್ಲಿ 1 ದಿನ ವರ್ಷಕ್ಕೆ 12 ದಿನ ವೇತನ ಸಹಿತ ರಜೆ ನೀಡುವಂತೆ ಸರ್ಕಾರ ಆದೇಶಿಸಿದೆ.

ಷರತ್ತುಗಳೇನು: ಮಹಿಳಾ ನೌಕರರು ಆಯಾ ತಿಂಗಳ ಋತುಚಕ್ರ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಸಿಕೊಳ್ಳುವುದು. ಹಿಂದಿನ ತಿಂಗಳ ಋತುಚಕ್ರ ರಜೆಯನ್ನು ಮುಂದಿನ ತಿಂಗಳಿಗೆ ವಿಸ್ತರಿಸಲು ಅವಕಾಶವಿರುವುದಿಲ್ಲ. ಪ್ರತಿ ತಿಂಗಳು ಒಂದು ದಿನದ ಋತುಚಕ್ರ ರಜೆ ಪಡೆಯಲು ಮಹಿಳಾ ನೌಕರರು ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲ. 18 ವರ್ಷದಿಂದ 52 ವರ್ಷದ ಎಲ್ಲಾ ಮಹಿಳಾ ನೌಕರರಿಗೆ ಕಡ್ಡಾಯ ರಜೆ ನೀಡಬೇಕು.

20.50 ಲಕ್ಷ ಡಿಜಿಟಲ್ ಅರೆಸ್ಟ್ ವಂಚನೆ; ಮೈಸೂರಿನ ಯುವತಿ ಬಂಧನ

ಮುಂಬೈ ಪೊಲೀಸ್ ಅಧಿಕಾರಿ ಎಂದು ಪರಿಚಯಿಸಿಕೊಂಡು ಹಣ ಸುಲಿಗೆ ಮಾಡಿದ ಆರೋಪ; ಕೇರಳದ ಆಲಪ್ಪುಜ ಮೂಲದ ವ್ಯಕ್ತಿಯೊಬ್ಬರಿಂದ ಸುಲಿಗೆ

ಮೈಸೂರು,ನ.12(ಆರ್‌ಕೆ/ಪಿಎಂ)– ಮುಂಬೈ ಪೊಲೀಸ್ ಎಂದು ಹೇಳಿಕೊಂಡು ಡಿಜಿಟಲ್ ಅರೆಸ್ಟ್ ಸನ್ನಿವೇಶ ಸೃಷ್ಟಿಸಿ ಕೇರಳದ ಆಲಪ್ಪುಳ ಮೂಲದ ವ್ಯಕ್ತಿಯೊಬ್ಬರಿಂದ 20.50 ಲಕ್ಷ ರೂ. ಸುಲಿಗೆ ಮಾಡಿದ ಪ್ರಕರಣದಲ್ಲಿ ಮೈಸೂರಿನ 21 ವರ್ಷದ ಯುವತಿಯನ್ನು ಆಲಪ್ಪುಜ ಸೈಬರ್ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಯುವತಿಯನ್ನು ಚಂದ್ರಿಕಾ ಎಂದು ಗುರುತಿಸಲಾಗಿದ್ದು, ಆಕೆಯನ್ನು ನ.10ರಂದು ಮೈಸೂರಿನ ಅಶೋಕಪುರಂನಲ್ಲಿ ಬಂಧಿಸಲಾಗಿದೆ. ಈಕೆಯ ಬಂಧನವನ್ನು ಅಶೋಕಪುರಂ ಠಾಣೆ ಇನ್ಸ್‌ಪೆಕ್ಟರ್ ಸಿ.ರೋಹಿತ್ 'ಮೈಸೂರು ಮಿತ್ರ'ನಿಗೆ ದೃಢಪಡಿಸಿದ್ದು, ಆಲಪ್ಪುಜ ಸೈಬರ್ ಅಪರಾಧ ವಿಭಾಗದ ಪೊಲೀಸರು, ಆಕೆಯ ನಿವಾಸ ಪತ್ತೆಹಚ್ಚಲು ಮತ್ತು ಬಂಧಿಸಲು ನಮ್ಮ ಸಹಕಾರ ಪಡೆದರು ಎಂದು ಅವರು ತಿಳಿಸಿದ್ದಾರೆ.

ಚಂದ್ರಿಕಾ, ಆಲಪ್ಪುಜ ಸೈಬರ್ ಪೊಲೀಸ್ ಅಪರಾಧ ವಿಭಾಗ ನೀಡಿದ ಹಲವು ಸಮನ್ಸ್‌ಗಳನ್ನು ನಿರ್ಲಕ್ಷ್ಯ ಮಾಡಿ, ತನಿಖಾಧಿಕಾರಿಗಳ ಮುಂದೆ ಹಾಜರಾಗಿರಲಿಲ್ಲ. ಹೀಗಾಗಿ ಕೇರಳ ಪೊಲೀಸರು ಬಂಧಿಸಿದ್ದಾರೆ ಎಂದು ಸ್ಥಳೀಯ ಅಶೋಕಪುರಂ ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಆಲಪ್ಪುಜ ಸಮೀಪದ ಖಾಸಗಿ ಕಂಪನಿ ಉದ್ಯೋಗಿ ಜೊತೆಯಲ್ಲಿ ಮುಂಬೈ ಪೊಲೀಸ್ ಅಧಿಕಾರಿಗಳಂತೆ ನಟಿಸಿ ವಂಚನೆ ಮಾಡಲಾಗಿದೆ. ಬಂಧಿತ ಆರೋಪಿಯು ವಾಟ್ಸಾಪ್ ಮೂಲಕ ಕೇರಳದ ▶ 6ನೇ ಪುಟಕ್ಕೆ

ಗೋವಾದಲ್ಲಿ ವಿದೇಶಿ ಮಹಿಳೆಗೆ ಕಿರುಕುಳ: ಪಿರಿಯಾಪಟ್ಟಣ ತಾಲೂಕಿನ ಮೂವರ ಬಂಧನ



ಯುವಕರು ವಿದೇಶಿ ಮಹಿಳೆಗೆ ಕಿರುಕುಳ ನೀಡಿದ ದೃಶ್ಯ ವೈರಲ್ ಆಗಿರುವುದು.

ಪಣಜಿ: ಸಮುದ್ರ ತೀರದಲ್ಲಿ ವಿಹರಿಸುತ್ತಿದ್ದ ವಿದೇಶದ ಮಹಿಳಾ ಪ್ರವಾಸಿಗರಿಬ್ಬರಿಗೆ ಕಿರುಕುಳ ನೀಡುತ್ತಿರುವ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಬೆನ್ನಿಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಮೂವರನ್ನು ಗೋವಾ ಪೊಲೀಸರು ಬಂಧಿಸಿದ್ದಾರೆ.

ರಾವಂದೂರು ಹೋಬಳಿ ಬೋಗನಹಳ್ಳಿಯ ಕಾರ್ತಿಕ್ ಬಿ.ಆರ್. (28), ಬಿ.ಎನ್. ಸಂತೋಷ್ (33), ರವಿ ಬಿ.ಎನ್. ಬಂಧಿತರು ಎಂದು ತಿಳಿಸಿದ್ದಾರೆ. ಉತ್ತರ ಗೋವಾದ ಅರಂಬೋಲ್ ಬೀಚ್‌ನಲ್ಲಿ ವಿಹರಿಸುತ್ತಿದ್ದ ವಿದೇಶಿ ಮಹಿಳಾ ಪ್ರವಾಸಿಗರೊಟ್ಟಿಗೆ ಫೋಟೊಗಳನ್ನು ತೆಗೆಸಿಕೊಳ್ಳಲು ಈ ಮೂವರು ಯತ್ನಿಸಿದ್ದು, ತಮ್ಮ ಭುಜಗಳ ಮೇಲೆ ಕೈಇಟ್ಟು ಪೋಸ್ ಕೊಡುವಂತೆ ಒತ್ತಾಯಿಸಿದ್ದಾರೆ. ಈ ವೀಡಿಯೊ ಸಾಮಾಜಿಕ ತಾಣದಲ್ಲಿ ಹರಿದಾಡಿದೆ. ಪ್ರಕರಣದ ಸೂಕ್ಷ್ಮತೆ ಹಾಗೂ ರಾಜ್ಯಕ್ಕೆ ಭೇಟಿ ನೀಡುವ ವಿದೇಶಿ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಗೋವಾ ಪ್ರವಾಸಿ ಪೊಲೀಸರು, ವೀಡಿಯೊ ಕ್ಲಿಪ್ಪಿಂಗ್ ಆಧಾರದಡಿ ದೂರು ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ತಾಂತ್ರಿಕ ಕಣ್ಗಾವಲು ಮತ್ತು ಸ್ಥಳೀಯ ಮೂಲಗಳ ಸಹಕಾರದಿಂದ ಮಾಂಡ್ರೆಮ್ ಪೊಲೀಸರು ಆರೋಪಿಗಳನ್ನು ಕರ್ನಾಟಕದ ಬೆಂಗಳೂರು, ಮೈಸೂರಲ್ಲಿ ಪತ್ತೆ ಹಚ್ಚಿ ಬಂಧಿಸಿದ್ದಾರೆ. ಇದನ್ನು ಸ್ಥಳೀಯ ಪೊಲೀಸರು ಖಚಿತಪಡಿಸಿದ್ದಾರೆ.

ಮೈಸೂರಲ್ಲಿ ಆಟೋ ಪ್ರಯಾಣ ದರ ಕನಿಷ್ಠ
36 ರೂ., ಹೆಚ್ಚುವರಿ ಕಿಮೀಗೆ 18 ರೂ.ಗೆ ಹೆಚ್ಚಳ



ಜ.1ರಿಂದ ಪರಿಷ್ಕೃತ ದರ ಜಾರಿ; ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ನಿರ್ಧಾರ

- ಕನಿಷ್ಠ ದರ ರೂ. 30ರಿಂದ 36, ಹೆಚ್ಚುವರಿ ಪ್ರತಿ ಕಿಮೀಗೆ ರೂ. 15ರಿಂದ 18ಕ್ಕೆ ಏರಿಕೆ
- ಹೊರ ರಾಜ್ಯದ ಆಟೋ ಪತ್ತೆಗಾಗಿ ತಪಾಸಣೆ ಅಭಿಯಾನ
- ಆಸ್ಪತ್ರೆಗಳ ಬಳಿ ಪ್ರೀ ಪೇಯ್ಡ್ ಆಟೋ ಕೇಂದ್ರದ ಭರವಸೆ

ಮೈಸೂರು,ನ.12(ಎಂಟಿವೈ)– ಮೈಸೂರಲ್ಲಿ ಆಟೋರಿಕ್ಷಾ ಪ್ರಯಾಣ ದರ ಜನವರಿ 1ರಿಂದ ಕನಿಷ್ಠ ದರ 36 ರೂ. ಹಾಗೂ ನಂತರದ ಪ್ರತಿ ಕಿ.ಮಿ 18 ರೂ. ನಿಗದಿಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ನಿರ್ಧರಿಸಿದೆ. ಹಾಲಿ ಕನಿಷ್ಠ ದರ 30ರೂ. ಹಾಗೂ ನಂತರದ ಪ್ರತಿ ಕಿಮೀಗೆ 15 ರೂ. ದರವಿದೆ.

ಮೈಸೂರಿನ ಸಿದ್ಧಾರ್ಥನಗರದ ಹೊಸ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವಿಧ ಆಟೋರಿಕ್ಷಾ ಚಾಲಕ, ಮಾಲೀಕರ ಸಂಘದ ಪದಾಧಿಕಾರಿಗಳ ಮನವಿಯಂತೆ ದರ ಹೆಚ್ಚಳ ಮಾಡಲು ನಿರ್ಧರಿಸಲಾಗಿದೆ. ಇದಕ್ಕೂ ಮುನ್ನ ಪದಾಧಿಕಾರಿಗಳು, ಮೈಸೂರಲ್ಲಿ ಕಳೆದ ನಾಲ್ಕು ವರ್ಷದಿಂದ ದರ ಹೆಚ್ಚಳ ಮಾಡಿಲ್ಲ, ಅಗತ್ಯ ವಸ್ತುಗಳ ದರ ಹೆಚ್ಚಾಗಿದೆ. ಮನೆ ಬಾಡಿಗೆ ಪಾವತಿಸಲು ಸಾಧ್ಯವಾಗುತ್ತಿಲ್ಲ. ಆಟೋ ರಿಕ್ಷಾ ಬಿಡಿಭಾಗಗಳ ಬೆಲೆಯೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ದರ ಹೆಚ್ಚಳ ಮಾಡುವಂತೆ ಮನವಿ ಮಾಡಿದ್ದರು. ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಈಶ್ವರ್ ಚೌಹಾಣ್ ಅವರಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು, ಬೆಂಗಳೂರು ಮಾದರಿಯಲ್ಲಿ ದರ ಪರಿಷ್ಕರಣೆಗೆ ಆದೇಶಿಸಿದರು.

ಫೇರ್ ರೆಗ್ಯುಲೇಟರಿ ಬೋರ್ಡ್ ವತಿಯಿಂದ 'ಒಂದು ರಾಜ್ಯ–ಒಂದು ದರ' ಕಾರ್ಯಕ್ರಮದಡಿ ರಾಜ್ಯದಾದ್ಯಂತ ಅನ್ವಯವಾಗುವಂತೆ ಏಕದರ ನಿಗದಿ ಮಾಡಲು ಉದ್ದೇಶಿಸಲಾಗಿದೆ. ಅದು ಜಾರಿಗೆ ಬರುವವರೆಗೆ ಜನವರಿಗೆ 1ರಿಂದ ಅನ್ವಯವಾಗುವಂತೆ ಬೆಂಗಳೂರಲ್ಲಿರುವಂತೆ ಕನಿಷ್ಠ ದರ 36 ರೂ., ನಂತರ ಕಿ.ಮಿಗೆ 18 ರೂ. ದರ ಪರಿಷ್ಕರಣೆ ಮಾಡಿ ಆದೇಶಿಸಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ವಿವಿಧ ಆಟೋ ಚಾಲಕರ ಸಂಘಟನೆಗಳ ಮುಖಂಡರೊಂದಿಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ನಡೆಸಿದರು.

ಹೊಸ ಆಟೋರಿಕ್ಷಾಗಳಿಗೆ ಪರ್ಮಿಟ್ ನೀಡಬೇಡಿ: ಸಭೆಯಲ್ಲಿ ಆಟೋ ಚಾಲಕರು, ಮಾಲೀಕರು ಮಾತನಾಡಿ, ಮೈಸೂರಿನ ಜನಸಂಖ್ಯೆ ಅಗತ್ಯಕ್ಕಿಂತ ಹೆಚ್ಚಿನ ಆಟೋ ರಿಕ್ಷಾ ಸಂಚಾರವಿದೆ. ಆಟೋರಿಕ್ಷಾವನ್ನೇ ನಂಬಿಕೊಂಡು ದಶಕಗಳಿಂದ ಜೀವನ ನಡೆಸುತ್ತಿರುವ ಆಟೋ ಚಾಲಕರು, ಮಾಲೀಕರು ಸಂಕಷ್ಟಕ್ಕೀಡಾಗಿದ್ದಾರೆ. ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಹಾಗಾಗಿ ಹೊಸ ಆಟೋ ರಿಕ್ಷಾಗಳಿಗೆ ಪರ್ಮಿಟ್ ನೀಡಬಾರದು ಎಂದು ಮನವಿ ಮಾಡಿದರು. ರ್‍ಯಾಪಿಡೋ ಬೈಕ್, ವೈಟ್ ಬೋರ್ಡ್ ಟ್ಯಾಕ್ಸಿ ಹಾಗೂ ಕೇರಳ, ಮಹಾರಾಷ್ಟ್ರದ ಆಟೋರಿಕ್ಷಾಗಳ ಹಾವಳಿ ಹೆಚ್ಚಾಗಿದೆ. ಇವುಗಳಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ▶ 6ನೇ ಪುಟಕ್ಕೆ

ಶೋಕಿಲಾಲ ಚಾಲಕರಿಗೆ ಕಡಿವಾಣ ಹಾಕಿ

"ಕೆಲವು ಯುವಕರು ಸಮವಸ್ತ್ರ ಧರಿಸದೆ, ಚಡ್ಡಿ ಹಾಕಿಕೊಂಡು ಶೋಕಿಗಾಗಿ ಆಟೋ ಚಾಲನೆ ಮಾಡುತ್ತಿದ್ದಾರೆ. ಪ್ರಯಾಣಿಕರೊಂದಿಗೆ ಅವರ ವರ್ತನೆ ಕೆಟ್ಟದಾಗಿರುತ್ತದೆ. ಅದಕ್ಕೆ ಕಡಿವಾಣ ಹಾಕಬೇಕು. ಅಲ್ಲದೆ, ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಆಟೋ ನಿಲ್ದಾಣದಲ್ಲಿ ನಿಲ್ಲುವ ರಿಕ್ಷಾ ಹೊರತು ಪಡಿಸಿ, ರಸ್ತೆಯಲ್ಲಿ ಪ್ರಯಾಣಿಕರಿಗಾಗಿ ಕಾಯುತ್ತಿರುವ ಆಟೋ ಚಾಲಕರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. –ಆಟೋ ಮಾಲೀಕರು

ವರ್ಲ್ಡ್ ಮಾಸ್ಟರ್ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಸಿ.ಜೆ.ಸತೀಶ್‌ಗೆ ಬಹುಮಾನ



ಸಿ.ಜೆ.ಸತೀಶ್

ಮೈಸೂರು,ನ.12–ಸೌತ್ ಆಫ್ರಿಕಾದ ಕೇಫ್ ಟೌನ್‌ನಲ್ಲಿ ನಡೆದ ವರ್ಲ್ಡ್ ಮಾಸ್ಟರ್ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಸಿದ್ಧಾರ್ಥನಗರದ ಪ್ರೊ ಫಿಟ್‌ನೆಸ್ ಹೆಲ್ತ್ ಕ್ಲಬ್‌ನ ಸಿ.ಜೆ.ಸತೀಶ್ ಭಾರತವನ್ನು ಪ್ರತಿನಿಧಿಸಿ (ಮಾಸ್ಟರ್ 2 ವಿಭಾಗ, 59 ಕೆಜಿ ಕ್ಲಾಸ್ (ಕ್ಲಾಸಿಕ್ ವಿಭಾಗದಲ್ಲಿ ಸ್ಕ್ವಾಟ್, ಬೆಂಚ್ ಪ್ರೆಸ್, ಡೆಡ್ ಲಿಫ್ಟ್) ಓವರ್ ಆಲ್ ಐದನೇ ಸ್ಥಾನ ಪಡೆದುಕೊಂಡಿದ್ದಾರೆ. ಕರ್ನಾಟಕ ರಾಜ್ಯಪವರ್ ಲಿಫ್ಟಿಂಗ್ ಅಸೋಸಿಯೇಷನ್, ಮಂಗಳೂರು ಮತ್ತು ದಕ್ಷಿಣ ಕನ್ನಡ ಪವರ್ ಲಿಫ್ಟಿಂಗ್ ಅಸೋಸಿಯೇಷನ್, ಮಂಗಳೂರು ವತಿಯಿಂದ ನಡೆದ ಕರ್ನಾಟಕ ರಾಜ್ಯ ಸಬ್ ಜೂನಿಯರ್, ಜೂನಿಯರ್, ಸೀನಿಯರ್ ಮತ್ತು ಮಾಸ್ಟರ್ಸ್ ಪುರುಷರ ಹಾಗೂ ಮಹಿಳೆಯರ ಬೆಂಚ್ ಪ್ರೆಸ್ ಚಾಂಪಿಯನ್‌ಶಿಪ್‌ನಲ್ಲಿ (ಮಾಸ್ಟರ್ 2 ವಿಭಾಗ, 59 ಕೆಜಿ ಕ್ಲಾಸ್ (ಕ್ಲಾಸಿಕ್ ವಿಭಾಗದಲ್ಲಿ) ಎರಡನೇ ಸ್ಥಾನ ಪಡೆದಿದ್ದಾರೆ.

ಮೂರು ದಿನಗಳ ಮೈಸೂರು ಜಿಲ್ಲಾ ಪೊಲೀಸರ ಕ್ರೀಡಾಕೂಟ ಆರಂಭ





ಮೈಸೂರಿನ ಡಿಎಆರ್ ಮೈದಾನದಲ್ಲಿ ನಡೆದ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಖೋ ಖೋ ರಾಷ್ಟ್ರೀಯ ಆಟಗಾರ್ತಿ ಬಿ.ಚೈತ್ರ ಕ್ರೀಡಾಜ್ಯೋತಿಯನ್ನು ಸ್ವೀಕರಿಸಿದರು. ಎಸ್ಪಿ ಡಾ.ಎನ್.ವಿಷ್ಣುವರ್ಧನ್, ಸೆಸ್ಕ್ ಎಸ್ಪಿ ಸವಿತಾ ಹೂಗಾರ್, ಎಎಸ್ಪಿ ಸಿ.ಮಲ್ಲಿಕ್, ಎಎಸ್ಪಿ ಎ.ಎಲ್.ನಾಗಯ್ಯ, ಡಿಎಆರ್ ಡಿವೈಎಸ್ಪಿ ವೀರಣ್ಣ ಸೇರಿದಂತೆ ಇತರರಿದ್ದರು. ಬಲಚಿತ್ರದಲ್ಲಿ ಕ್ರೀಡಾಕೂಟದಲ್ಲಿ ಭಾಗಿಯಾಗಿರುವ ಪೊಲೀಸ್ ಸಿಬ್ಬಂದಿಗಳ ತಂಡ.

ರಾಷ್ಟ್ರೀಯ ಖೋ ಖೋ ಆಟಗಾರ್ತಿ ಬಿ.ಚೈತ್ರರಿಂದ ಚಾಲನೆ

ಮೈಸೂರು,ನ.12(ಎಂಟಿವೈ)–ಮೈಸೂರು ಪೊಲೀಸರು ಇಂದಿನಿಂದ ಆರಂಭವಾದ ಮೂರು ದಿನಗಳ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಮೆರೆದರು. ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್ ಮೈದಾನದಲ್ಲಿ ಬುಧವಾರ ಬೆಳಗ್ಗೆ ಮೈಸೂರು ಜಿಲ್ಲಾ ಪೊಲೀಸ್ ಇಲಾಖೆ ಆಯೋಜಿಸಿದ್ದ ಕ್ರೀಡಾಕೂಟವನ್ನು ರಾಷ್ಟ್ರೀಯ ಖೋ–ಖೋ ಪಟು ಬಿ.ಚೈತ್ರ(ಕುರುಬೂರು) ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಕಾನೂನು ಸುವ್ಯವಸ್ಥೆ ಕಾಪಾಡುವ, ಭದ್ರತೆ ಒದಗಿಸುವ, ಗಣ್ಯರಿಗೆ ಪ್ರೊಟೋಕಾಲ್ ಕರ್ತವ್ಯ ನಿಭಾಯಿಸುವ ಪೊಲೀಸರು ಇಂದು ವಿವಿಧ ಕ್ರೀಡಾಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಒಂದೆಡೆ ಸೇರಿರುವುದು ಶ್ಲಾಘನೀಯ. ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಗಡಿಯಲ್ಲಿ ಭಾರತೀಯ ಯೋಧರು ದೇಶಕ್ಕೆ ರಕ್ಷಣೆ ನೀಡಿದರೆ, ದೇಶದ ಒಳಗೆ ಪೊಲೀಸರು ಜನರಿಗೆ ಭದ್ರತೆ ನೀಡುತ್ತಿದ್ದಾರೆ. ಪೊಲೀಸರು ಕಾನೂನು ಸುವ್ಯವಸ್ಥೆ ಕಾಪಾಡುತ್ತಿರುವುದರಿಂದಲೇ ಸಮಾಜದಲ್ಲಿ ಶಾಂತಿ ನೆಲೆಸಿದೆ. ಹೆಣ್ಣು ಮಕ್ಕಳು ನಿರ್ಭಯದಿಂದ ವಿವಿಧ ವೃತ್ತಿಗಳಿಗೆ ಹೋಗಿ ಬರಲು ಸಾಧ್ಯವಾಗುತ್ತಿದೆ ಎಂದರು.

ಕುಗ್ರಾಮ ಕುರುಬೂರಿನಿಂದ ಬಂದ ನಾನು ಇದುವರೆಗೂ ಐದಾರು ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಪಾಲ್ಗೊಂಡಿದ್ದೇನೆ. ನನ್ನಂತೆ ನಮ್ಮೂರಿನ ಐದಾರು ಮಂದಿ ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಆಡಿದ್ದಾರೆ. ಕ್ರೀಡಾ ಕೋಟಾದಲ್ಲಿ ಕುರುಬೂರಿನ ಕೆಲವರು ಅಂಚೆ ಹಾಗೂ ರೈಲ್ವೆ ಇಲಾಖೆಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆ ನೇಮಕಾತಿ ವೇಳೆ ಕ್ರೀಡಾ ಕೋಟಾದಲ್ಲಿ ಖೋ ಖೋ ಆಟಗಾರರನ್ನು ಪರಿಗಣಿಸಲು ಕ್ರಮ ಕೈಗೊಳ್ಳಬೇಕು. ಕ್ರೀಡಾಸಕ್ತ ಪೊಲೀಸರು ಸಹ ಖೋ ಖೋ ಆಡುವ ಮೂಲಕ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಕ್ರೀಡಾಪಟು(ಪೊಲೀಸ್) ರಾಘವೇಂದ್ರ ಅವರು ಕ್ರೀಡಾ ಜ್ಯೋತಿಯನ್ನು ಗಣ್ಯರಿಗೆ ಹಸ್ತಾಂತರಿಸಿದರು. ಬಳಿಕ ವಿವಿಧ ತಾಲೂಕಿನಿಂದ ಕ್ರೀಡಾಕೂಟಕ್ಕೆ ಆಗಮಿಸಿದ್ದ ಪೊಲೀಸರು ಆಕರ್ಷಕ ಪಥಸಂಚಲನ ನಡೆಸಿ, ಗೌರವ ವಂದನೆ ಸಲ್ಲಿಸಿದರು.

ಸಭಾ ಕಾರ್ಯಕ್ರಮದ ಬಳಿಕ ವಿವಿಧ ಕ್ರೀಡಾ ಸ್ಪರ್ಧೆ ಜರುಗಿತು. ಓಟ, ಗುಂಡು ಎಸೆತ, ಹಗ್ಗಾಜಗ್ಗಾಟ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಜಿಲ್ಲಾ ಪೊಲೀಸರು ಸಕ್ರಿಯವಾಗಿ ಪಾಲ್ಗೊಂಡು, ಗಮನ ಸೆಳೆದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎನ್.ವಿಷ್ಣುವರ್ಧನ್, ಸೆಸ್ಕ್ ಎಸ್ಪಿ ಸವಿತಾ ಹೂಗಾರ್, ಎಎಸ್ಪಿ ಸಿ.ಮಲ್ಲಿಕ್, ಎಎಸ್ಪಿ ಎ.ಎಲ್.ನಾಗಯ್ಯ, ಡಿಎಆರ್ ಡಿವೈಎಸ್ಪಿ ವೀರಣ್ಣ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಇಂದಿನಿಂದ ಮೂರು ದಿನಗಳ ಅಂತರರಾಷ್ಟ್ರೀಯ ಕೃಷಿ ಸಮ್ಮೇಳನ

ಮೈಸೂರು,12(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಕೃಷಿ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆ(ಎಟಿಡಿಎಸ್) ಸಹಯೋಗದೊಂದಿಗೆ 'ಸುಸ್ಥಿರ ಅಭಿವೃದ್ಧಿಗಾಗಿ ಕೃಷಿ, ಜೈವಿಕ ಮತ್ತು ಜೀವವೈವಿಧ್ಯ ಸಂರಕ್ಷಣೆಯಲ್ಲಿನ ಪ್ರಗತಿಗಳು' ವಿಷಯದಡಿ ನ.13ರಿಂದ 15ರವರೆಗೆ ಮೂರು ದಿನಗಳ 9ನೇ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಕೆ.ಎನ್.ಅಮೃತೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದ್ದು, ನ.13ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ ಎಂದರು.

ಕೃಷಿ, ಜೈವಿಕ ವಿಜ್ಞಾನ ಮತ್ತು ಜೀವವೈವಿಧ್ಯತೆಯಲ್ಲಿನ ಸಂರಕ್ಷಣೆ ಕುರಿತ ಇತ್ತೀಚಿನ ಪ್ರಗತಿಗಳು, ನಾವೀನ್ಯತೆ, ಸವಾಲು ಕುರಿತು ಸಮ್ಮೇಳನದಲ್ಲಿ ಚರ್ಚೆಗಳು ನಡೆಯಲಿದ್ದು, ಜಾಗತಿಕ ಕೃಷಿ ಮತ್ತು ಪರಿಸರ ಸಮಸ್ಯೆ ಬಗೆಹರಿಸಲು ವೈಜ್ಞಾನಿಕ ಜ್ಞಾನ ನವೀನ ತಂತ್ರಜ್ಞಾನ, ಸುಸ್ಥಿರ ವಿಧಾನಗಳ ಮೇಲೆ ಬೆಳಕು ಚೆಲ್ಲಲಾಗುವುದು. ದೇಶದ ವಿವಿಧ ವಿವಿಗಳಿಂದ, ಸಂಶೋಧನಾ ಸಂಸ್ಥೆಗಳಿಂದ, ರಾಷ್ಟ್ರೀಯ ಪ್ರಯೋಗಾಲಯಗಳನ್ನು ಪ್ರತಿನಿಧಿಸುವ 350ಕ್ಕೂ ಹೆಚ್ಚು ಪ್ರತಿನಿಧಿಗಳು, 15 ಮಂದಿ ಪ್ರಮುಖ ಭಾಷಣಕಾರರು, 14 ಮಂದಿ ಅಂತರರಾಷ್ಟ್ರೀಯ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎ.ಹೆಚ್.ರಾಜಾಸಾಬ್ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಮೈವಿವಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ರಾಜ್‌ಕುಮಾರ್ ಹೆಚ್.ಗಾರಂಪಳ್ಳಿ, ಹಿರಿಯ ಪ್ರಾಧ್ಯಾಪಕ ಪ್ರೊ.ಜಿ.ಆರ್.ಜನಾರ್ದನ, ಸಮ್ಮೇಳನದ ವ್ಯವಸ್ಥಾಪಕ ಅಧ್ಯಕ್ಷ ಪ್ರೊ.ಹೆಚ್.ಶಿವಾನಂದಮೂರ್ತಿ, ಸಮ್ಮೇಳನ ಸಂಘಟನಾ ಕಾರ್ಯದರ್ಶಿ ಡಾ.ಜೋಗಿಂದರ್ ಸಿಂಗ್ ಉಪಸ್ಥಿತರಿದ್ದರು.



ಪ್ರಶಸ್ತಿ ಸ್ವೀಕಾರ...

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ರಾಜ್ಯ ಮಟ್ಟದ ಗಮಕ, ಗಾಯನ ಸ್ಪರ್ಧೆಯಲ್ಲಿ ಕೌಟಿಲ್ಯ ವಿದ್ಯಾಲಯದಲ್ಲಿ 9ನೇ ತರಗತಿಯ, ಗಮಕ ಗುರು ಶುಭ ರಾಘವೇಂದ್ರರ ಶಿಷ್ಯೆ ಚಾರ್ವಿ ಸತೀಶ್, ಬೆಂಗಳೂರಲ್ಲಿ ನಡೆದ ಕನಕದಾಸರ ಜಯಂತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಪ್ರಶಸ್ತಿ ಸ್ವೀಕರಿಸಿದರು. ಈಕೆ ಸತೀಶ್ ಕೃಷ್ಣಸ್ವಾಮಿ, ಅರುಂಧತಿ ಸತೀಶ್ ದಂಪತಿ ಪುತ್ರಿ.

ಮೈಸೂರು ವಿವಿ ಅಂತರ ಕಾಲೇಜು ಅಥ್ಲೆಟಿಕ್ಸ್‌ಗೆ ಚಾಲನೆ




ಮೈಸೂರು ವಿಶ್ವವಿದ್ಯಾನಿಲಯದ 96ನೇ ಅಂತರ ಕಾಲೇಜುಗಳ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಮೈಸೂರು ಓವೆಲ್ ಮೈದಾನದಲ್ಲಿ ಚಾಲನೆ ನೀಡಲಾಯಿತು.

ಮೈಸೂರು,ನ.12–ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2025–26ನೇ ಸಾಲಿನ ವಿಶ್ವವಿದ್ಯಾನಿಲಯದ 96ನೇ ಅಂತರ ಕಾಲೇಜುಗಳ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಚಾಲನೆ ನೀಡಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಪ್ರೊ.ಬಿ.ನಿರಂಜನ ಮೂರ್ತಿ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯ ಕ್ರೀಡಾಕೂಟ ಇತಿಹಾಸವನ್ನು ಹೊಂದಿದೆ. ಕ್ರೀಡೆಯಲ್ಲಿ ಹಲವಾರು ಪ್ರಯೋಜನಗಳಿದ್ದು, ಅದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ರೇಖಾ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಿದ್ದರು.

ನ.17ಕ್ಕೆ ಚಾಮುಂಡಿಬೆಟ್ಟದ ಶ್ರೀನಂದಿಗೆ ಮಹಾಭಿಷೇಕ, ಪೂಜಾ ಮಹೋತ್ಸವ



ಮೈಸೂರು,ನ.12–ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ನ.17ರಂದು ಬೆಳಗ್ಗೆ 8.30ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿಗಳು, ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮಿಗಳು, ಶ್ರೀ ಸೋಮನಾಥ ಸ್ವಾಮೀಜಿಗಳ ದಿವ್ಯ ಸಮ್ಮುಖದಲ್ಲಿ ಚಾಮುಂಡಿಬೆಟ್ಟದ ಶ್ರೀನಂದಿಗೆ ಮಹಾಭಿಷೇಕ, ಪೂಜಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಟ್ರಸ್ಟ್‌ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಶ್ವೇತ ರೈಗೆ ಚಿನ್ನದ ಪದಕ



ಇತ್ತೀಚೆಗೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಶ್ರೀ ಶಿವರಾತ್ರೀಶ್ವರನಗರ, ಮೈಸೂರು ಇಲ್ಲಿ ನಡೆದ 16ನೆಯ ಘಟಿಕೋತ್ಸವದಲ್ಲಿ ವಿದ್ಯಾರ್ಥಿನಿ ಶ್ವೇತ ರೈ ಬಿ ಅವರು ಎಂಎಸ್ಸಿ (ಮೆಡಿಕಲ್ ಫಿಸಿಯಾಲಜಿ)ಯಲ್ಲಿ ಚಿನ್ನದ ಪದಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇವರ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ. ಇವರು ಬಾಲಕೃಷ್ಣ ರೈ ಮತ್ತು ಶುಭ ಬಾಲಕೃಷ್ಣ ರೈ ದಂಪತಿಯ ಹಿರಿಯ ಪುತ್ರಿ.

ನ.15ಕ್ಕೆ ಮಧುಮೇಹ ಜಾಗೃತಿಗಾಗಿ ವಾಕಥಾನ್

ಮೈಸೂರು,12(ಎಂಕೆ)–ನ್ಯೂ ಡಯಾಕೇರ್ ಸೆಂಟರ್, ಪಾಲಿಕ್ಲಿನಿಕ್, ನವಾಯು ಫೌಂಡೇಷನ್, ನವಾಯು ಕೇರ್ ಸೆಂಟರ್ ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ವಿಶ್ವ ಮಧುಮೇಹ ದಿನದ ಅಂಗವಾಗಿ ನ.15ರಂದು ಬೆಳಗ್ಗೆ 7 ಗಂಟೆಗೆ 'ವಾಕಥಾನ್ (ಮಧುಮೇಹ ಜಾಗೃತಿಗಾಗಿ ಕಾಲ್ನಡಿಗೆ)' ಹಮ್ಮಿಕೊಳ್ಳಲಾಗಿದೆ ಎಂದು ನ್ಯೂ ಡಯಾಕೇರ್ ಸೆಂಟರ್‌ನ ವೈದ್ಯ ಡಾ.ಎ.ಆರ್.ರೇಣುಕಾಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜಪುರಂನಲ್ಲಿರುವ ನ್ಯೂ ಡಯಾಕೇರ್ ಸೆಂಟರ್‌ನಿಂದ ಆರಂಭವಾಗುವ ವಾಕಥಾನ್, ಫ್ಯಾಷನ್ ಫ್ಯಾಕ್ಟರಿ, ಹಳೆ ಕೋರ್ಟ್ ಎದುರು ಸಾಗಿ ಆರ್‌ಟಿಓ ಸರ್ಕಲ್ ನಂತರ ಬಲ್ಲಾಳ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಬಳಿಕ ವಾಪಸ್ ಸೆಂಟರ್‌ವರೆಗೆ ಸಾಗಲಿದೆ. ವಾಕಥಾನ್‌ಗೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ, ಮಧುಮೇಹ ತಜ್ಞ ಡಾ.ಎಂ.ಎ.ಶೇಖರ್ ಭಾಗವಹಿಸಲಿದ್ದಾರೆ ಎಂದರು. ಡಾ.ಎಚ್.ಎಂ.ಮಹೇಶ್‌ಕುಮಾರ್, ಆರ್ಯನ್ ಗಂಧದಗುಡಿ ಉಪಸ್ಥಿತರಿದ್ದರು.

ಶಿಕ್ಷಣ ವ್ಯಕ್ತಿಯ ಆಲೋಚನೆಯ ದಿಗಂತವನ್ನು ವಿಸ್ತರಿಸುತ್ತದೆ



ಜೆಎಸ್‌ಎಸ್ ಮಹಿಳಾ ಕಾಲೇಜಲ್ಲಿ 'ರಾಷ್ಟ್ರೀಯ ಶಿಕ್ಷಣ ದಿನವನ್ನು' ಆಚರಿಸಲಾಯಿತು.

ಮೈಸೂರು,ನ.12–ಇಂದಿನ ವರ್ತಮಾನದಲ್ಲಿ ಶಿಕ್ಷಣ ಎಂಬುದು ವ್ಯಕ್ತಿಯ ಆಲೋಚನೆಯ ದಿಗಂತವನ್ನು ವಿಸ್ತರಿಸುತ್ತದೆ ಎಂದು ಚಾಮರಾಜನಗರದ ಜೆಎಸ್‌ಎಸ್ ಪ್ರಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ.ಬಸವಣ್ಣ ಕೆ.ಸಿ. ತಿಳಿಸಿದರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಯೂತ್ ರೆಡ್ ಕ್ರಾಸ್‌ನ ವತಿಯಿಂದ 'ರಾಷ್ಟ್ರೀಯ ಶಿಕ್ಷಣ ದಿನವನ್ನು' ಆಚರಿಸಲಾಯಿತು. 'ಕೃತಕ ಬುದ್ಧಿಮತ್ತೆ ಮತ್ತು ಶಿಕ್ಷಣ' ವಿಷಯ ಕುರಿತಂತೆ ಡಾ.ಬಸವಣ್ಣ ಮಾತನಾಡಿ, ಪ್ರಸ್ತುತ ವರ್ತಮಾನಕ್ಕೆ ತಕ್ಕಂತೆ ಶಿಕ್ಷಣ ವ್ಯವಸ್ಥೆ ಬೆಳವಣಿಗೆ ಕಂಡಿದೆ. ಶಿಕ್ಷಣ ದಿನವು ಎರಡನೇ ವಿಶ್ವ ಮಹಾಯುದ್ಧ ಅಂತ್ಯಗೊಂಡ ದಿನವಾದ್ದರಿಂದ ಹುತಾತ್ಮರ(ಶಾಂತಿ) ದಿನ ಆಗಿರುವಂತದ್ದು ವಿಶೇಷ. ನಾವು ಯುದ್ಧದಿಂದ ಶಾಂತಿಯ ಕಡೆಗೆ, ಶಾಂತಿಯಿಂದ ಉತ್ತಮ ಶಿಕ್ಷಣದ ಕಡೆಗೆ ಸಾಗಬೇಕಿದೆ ಎಂದರು. ಮೌಲಾನ ಅಬ್ದುಲ್ ಕಲಾಂ ಆಜಾದ್ ಅವರು ಶಿಕ್ಷಣ ವ್ಯವಸ್ಥೆಗೆ ನೀಡಿರುವ ಕೊಡುಗೆಗಳನ್ನು ತಿಳಿಸುತ್ತಾ, ಇವರು ಸ್ವಾತಂತ್ರ್ಯ ಹೋರಾಟಗಾರರು, ಬರಹಗಾರರು ಮತ್ತು ಶಿಕ್ಷಣ ಪ್ರೇಮಿಯಾಗಿದ್ದರು. ಶಿಕ್ಷಣ ದೊಡ್ಡ ಶಕ್ತಿ ಎಂಬುದನ್ನು ಅರಿತುಕೊಂಡು ವಿದ್ಯಾರ್ಥಿಗಳು ಉತ್ಪಾದಕ ಕೈಗಳಾಗಬೇಕು ಎಂದರು.

ವೇದಿಕೆಯಲ್ಲಿ ಪರೀಕ್ಷಾ ನಿಯಂತ್ರಣ ಅಧಿಕಾರಿ ಸ್ವಾಮಿ, ಯೂತ್ ರೆಡ್‌ಕ್ರಾಸ್ ಸಂಚಾಲಕರು ಉಪಸ್ಥಿತರಿದ್ದರು. ಧಾತ್ರಿ ತಂಡದವರು ಪ್ರಾರ್ಥಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಸೋಮಣ್ಣ ಸ್ವಾಗತಿಸಿದರು. ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥೆ ನಾಗಲಾಂಬಿಕೆ ವಂದಿಸಿದರು. ಗಣಕ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ರೂಪಶ್ರೀ ನಿರೂಪಿಸಿದರು.

ಜಿಲ್ಲಾ ಬ್ರಾಹ್ಮಣ ಮಹಾಸಭಾದ ನೂತನ ಪದಾಧಿಕಾರಿಗಳು

ಮೈಸೂರು: 2025ರಿಂದ 2028ನೇ ಸಾಲಿಗೆ ಜಿಲ್ಲಾ ಬ್ರಾಹ್ಮಣ ಮಹಾಸಭಾದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಡಾ.ರಘುರಾಂ ವಾಜಪೇಯಿ, ಶ್ರೀಮತಿ ಪುಷ್ಪ ಅಯ್ಯಂಗಾರ್–ಗೌರವಾಧ್ಯಕ್ಷರು, ಡಾ. ಬಿ.ಆರ್.ನಟರಾಜ ಜೋಯಿಸ್–ಅಧ್ಯಕ್ಷರು, ಬ್ಯಾಂಕ್ ಅಶೋಕ್–ಪ್ರಧಾನ ಕಾರ್ಯದರ್ಶಿ, ಸುರೇಶ್ ಯಡಹಳ್ಳಿ–ಕಾರ್ಯದರ್ಶಿ, ಶೇಷಾದ್ರಿ ವೆಂಕಟೇಶ್ವರ ಧ್ಯಾನ ಕೇಂದ್ರದ ಶ್ರೀಮತಿ ವಿಜಯ ವೆಂಕಟೇಶ್–ಸಹ ಕಾರ್ಯದರ್ಶಿ, ಶ್ರೀಮತಿ ಮಂಗಳ–ಖಜಾಂಚಿ.

ಜಿಲ್ಲಾ ಬ್ರಾಹ್ಮಣ ಮಹಿಳಾ ಮಹಾಸಭಾ ಪದಾಧಿಕಾರಿಗಳು

ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀಮತಿ ಮಂಗಳಾ–ಗೌರವಾಧ್ಯಕ್ಷರು, ಶ್ರೀಮತಿ ಉಷಾ–ಅಧ್ಯಕ್ಷರು, ಶ್ರೀಮತಿ ಉಮಾಮಣಿ ಅಶೋಕ್–ಕಾರ್ಯದರ್ಶಿ, ಶ್ರೀಮತಿ ಜಲಜಾಕ್ಷಿ, ಶ್ರೀಮತಿ ಚಂಚಲಾಕ್ಷಿ–ಸಂಘಟನಾ ಕಾರ್ಯದರ್ಶಿ, ಶ್ರೀಮತಿ ವಿಜಯ ವೆಂಕಟೇಶ್ ಮತ್ತು ಶ್ರೀಮತಿ ಭಾಗ್ಯಲಕ್ಷ್ಮಿ – ಸಹ ಕಾರ್ಯದರ್ಶಿ.

ವರಲಕ್ಷ್ಮೀ ಮಂಜುನಾಥಗೆ ಕುವೆಂಪು ಸ್ಮಾರಕ ಪ್ರಶಸ್ತಿ



ಮೈಸೂರು,ನ.12–ಮೈಸೂರಿನ ಲೇಖಕಿ ಎಸ್.ಎಲ್.ವರಲಕ್ಷ್ಮೀ ಮಂಜುನಾಥ್ ಅವರು ಬೆಂಗಳೂರಿನ ಮೈಕೊ ಕನ್ನಡ ಬಳಗ ನೀಡುವ ಪ್ರತಿಷ್ಠಿತ ರಾಷ್ಟ್ರಕವಿ ಕುವೆಂಪು ಸ್ಮಾರಕ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ರೂ. 10 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಈ ಪ್ರಶಸ್ತಿ ಪ್ರದಾನ ಸಮಾರಂಭ ನವೆಂಬರ್ 19ರಂದು ಬಿಡದಿಯ ಮೈಕೊ ಕಾರ್ಖಾನೆ ಆವರಣದಲ್ಲಿ ಆಯೋಜಿಸಿರುವ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ನಡೆಯಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.11.2025 ಗುರುವಾರ, ಮಳೆ ನಕ್ಷತ್ರ: ವಿಶಾಖ, 6.11.2025ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊ.ಸಿ.ನಾಗಣ್ಣ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡದ ಕಸ್ತೂರಿ–ನಾ ಕಸ್ತೂರಿ ನೆನಪುಗಳ ಮಾಲಿಕೆ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ತರಕಾರಿ ಬೇಸಾಯ ಕುರಿತು ಸಂವಾದ, ಭಾಗವಹಿಸುತ್ತಾರೆ–ಮೈಸೂರು ತಾಲ್ಲೂಕು ಹಂಚ್ಯಾ ಗ್ರಾಮದ ಕೃಷಿಕ ದಂಪತಿ ಬಿ. ಮಹದೇವಸ್ವಾಮಿ ಮತ್ತು ಎನ್. ಅಕ್ಷತಾ, ಪ್ರಸ್ತುತಿ–ಎನ್.ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ

- **ಕಾವೇರಿ ಆಯುರ್ವೇದ ಆಸ್ಪತ್ರೆ:** ಅಸ್ತಮಾ, ಉಬ್ಬಸಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಗೆ.
- **ಮೈಸೂರು ವಿಶ್ವವಿದ್ಯಾನಿಲಯ, ಬಿ.ಎನ್. ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ :** ಗಾಂಧಿ ಜಯಂತಿ ಮತ್ತು ಕನ್ನಡ ರಾಜ್ಯೋತ್ಸವ, ಪ್ರಾಸ್ತಾವಿಕ ನುಡಿ : ಹಿರಿಯ ಪ್ರಾಧ್ಯಾಪಕ ಪ್ರೊ. ಡಿ. ಆನಂದ್, ಶಿಕ್ಷಣ ಚಿಂತಕ ಪ್ರೊ. ಜಿ.ಎಸ್. ಜಯದೇವ ಅವರಿಂದ ಗಾಂಧೀ ತತ್ವಗಳ ಪ್ರಸ್ತುತತೆ ಕುರಿತು ಉಪನ್ಯಾಸ, ಪ್ರೊ. ಸಿ. ನಾಗಣ್ಣ ಅವರಿಂದ ಕನ್ನಡ ರಾಜ್ಯೋತ್ಸವ ಕುರಿತು ಭಾಷಣ, ಅಧ್ಯಕ್ಷತೆ : ಹಿರಿಯ ಪ್ರಾಧ್ಯಾಪಕ ಪ್ರೊ. ಆರ್. ಮಹೇಶ್, ಉಪಸ್ಥಿತರು : ಹಿರಿಯ ಪ್ರಾಧ್ಯಾಪಕ ಪ್ರೊ. ಎಸ್.ಜೆ. ಮಂಜುನಾಥ್, ಪ್ರೊ. ಎಂ. ಅಮೂಲ್ಯ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ
- **ಶ್ರೀ ಛಾಯಾದೇವಿ ಬಿ.ಎಡ್. ಕಾಲೇಜು :** ಪದವಿ ಪ್ರದಾನ ಹಾಗೂ ಬಿ.ಇಡಿ ಪ್ರಶಿಕ್ಷಣಾರ್ಥಿಗಳ ಬೀಳ್ಕೊಡುಗೆ ಸಮಾರಂಭ, ಆಯುರ್ವೇದ ಆರೋಗ್ಯ ಮಿತ್ರ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಹಿರಿಯ ಪ್ರಾಧ್ಯಾಪಕ ಡಾ. ಜಿ. ಸೋಮಶೇಖರ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ರಾಜ್‌ಗೋಪಾಲ್, ಡಾ. ಭಾನುಪ್ರಕಾಶ್, ಡಾ. ಅಂತೋಣಿ ಪಾಲ್‌ರಾಜ್, ಡಾ. ಲಕ್ಷ್ಮೀನಾರಾಯಣ್ ಶೆಣೈ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬಾದ ರಾಮಣಾಚಾರ್ಯ ಅವರಿಂದ 'ಶ್ರೀಮತ್ ಭಾಗವತ್' ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

ಬೆಟ್ಟದಪುರದಲ್ಲಿಂದು, ಪಿರಿಯಾಪಟ್ಟಣ ತಾಲೂಕು

- **ಒಕ್ಕಲಿಗ ಯುವ ಬ್ರಿಗೇಡ್ :** ಕುವೆಂಪು ಆಶಯದ ಮಂತ್ರ ಮಾಂಗಲ್ಯ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ. ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ : ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ, ಅಧ್ಯಕ್ಷತೆ : ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಉಪಸ್ಥಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಪ್ರಿಯಕೃಷ್ಣ, ಸಮೃದ್ಧಿ ಮಂಜುನಾಥ್, ಸ್ಥಳ:ಸಲೀಲಾಖ್ಯಾ ಮತ್ತು ಕನ್ನಡ ಮಠ, ಬೆಟ್ಟದಪುರ, ಬೆಳಗ್ಗೆ 10.30ಕ್ಕೆ.



ಮೈಸೂರು, ಚಾಮರಾಜನಗರದಲ್ಲಿ ಏರೋ ಸ್ಪೇಸ್, ಡಿಫೆನ್ಸ್ ಪಾರ್ಕ್ ನಿರ್ಮಾಣ

ರಾಜ್ಯ ಸರ್ಕಾರದ ಮಹತ್ವದ ತೀರ್ಮಾನ

- ವಿಶ್ವ ದರ್ಜೆಯಲ್ಲಿ ನಿರ್ಮಾಣವಾಗುವ ಪಾರ್ಕ್
- ಎರಡು ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ನಾಂದಿ
- ಪಾರ್ಕ್ ನಿರ್ಮಾಣಕ್ಕೆ ಸೂಕ್ತ ಸ್ಥಳಾವಕಾಶ ಭರವಸೆ
- ಬಂಡವಾಳ ಹೂಡಿಕೆಗೆ ಕಂಪನಿಗಳ ಉತ್ಸುಕತೆ
- ಸಾವಿರಾರು ಜನರಿಗೆ ಉದ್ಯೋಗಾವಕಾಶ



ಬೆಂಗಳೂರಿನ ಬಾಗಲೂರಿನ ಏರೋ ಸ್ಪೇಸ್ ಪಾರ್ಕ್‌ನಲ್ಲಿರುವ ಕಾಲಿನ್ಸ್ ಇಂಡಿಯಾ ಆಪರೇಷನ್ ಸೆಂಟರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಮೈಸೂರು, ನ.12(ಬಿಎಲ್‌ಯು)– ಮೈಸೂರು, ಚಾಮರಾಜನಗರದಲ್ಲಿ ವಿಶ್ವ ದರ್ಜೆಯ ಏರೋ ಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ ನಿರ್ಮಾಣ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಸೆಮಿ ಕಂಡಕ್ಟರ್ ಪಾರ್ಕ್ ಜೊತೆಗೆ ಮೈಸೂರಿನಲ್ಲಿ ಏರೋ ಸ್ಪೇಸ್ ಪಾರ್ಕ್ ಕೂಡ ನಿರ್ಮಾಣವಾಗುತ್ತಿದ್ದು, ಇದು ಮೈಸೂರಿನ ಕೈಗಾರಿಕಾ ಬೆಳವಣಿಗೆಗೆ ನಾಂದಿ ಹಾಡಲಿದೆ. ಅಲ್ಲದೆ ಸಾವಿರಾರು ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.

ಮೈಸೂರು, ಚಾಮರಾಜನಗರ, ಬೆಳಗಾವಿ, ತುಮಕೂರು ಹಾಗೂ ಬೆಂಗಳೂರಿನಲ್ಲಿ ವಿಶ್ವ ದರ್ಜೆಯ ಏರೋ ಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಬೆಂಗಳೂರಿನ ಬಾಗಲೂರಿನ ಏರೋ ಸ್ಪೇಸ್ ಪಾರ್ಕ್‌ನಲ್ಲಿ ಕ್ವಾಲಿನ್ಸ್ ಏರೋಸ್ಪೇಸ್ ಕಂಪನಿ ಅಭಿವೃದ್ಧಿಪಡಿಸಿರುವ ಕಾಲಿನ್ಸ್ ಇಂಡಿಯಾ ಆಪರೇಷನ್ ಸೆಂಟರ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ಮೈಸೂರು ಹಾಗೂ ಬೆಂಗಳೂರಿನಲ್ಲಿ ಏರೋ ಸ್ಪೇಸ್ ಉದ್ಯಮಗಳಿವೆ. ಈಗ ಏರ್ ಸ್ಪೇಸ್ ಉದ್ಯಮದ ಬೆಳವಣಿಗೆಗೆ ಪ್ರತ್ಯೇಕ ಪಾರ್ಕ್ ನಿರ್ಮಾಣ ಮಾಡಲಾಗುವುದು ಎಂದರು.

ಸದ್ಯ ಮೈಸೂರಿನ ನಂಜನಗೂಡು ಬಳಿಯ ಕಡಕೊಳ ಬಳಿ ಸೆಮಿ ಕಂಡಕ್ಟರ್ ಪಾರ್ಕ್ ಇದೆ. ಅಲ್ಲದೆ ಚಾಮರಾಜನಗರದಲ್ಲಿ 1,600 ಎಕರೆ ಪ್ರದೇಶದಲ್ಲಿ ಕೇನ್ಸ್ ಟೆಕ್ನಾಲಜಿ ಸೇರಿದಂತೆ ವಿವಿಧ ಉದ್ಯಮಗಳಿವೆ.

ಇದರ ಮಧ್ಯೆ ಮೈಸೂರು ಮತ್ತು ಚಾಮರಾಜನಗರದಲ್ಲಿ ಪ್ರತ್ಯೇಕವಾದ ಏರೋ ಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ ನಿರ್ಮಾಣ ಮಾಡಲು ಸರ್ಕಾರ ನಿರ್ಧಾರ ಮಾಡಿದೆ. ಇದರಿಂದ ಎರಡೂ ಜಿಲ್ಲೆಯ ಕೈಗಾರಿಕಾ ಬೆಳವಣಿಗೆ ಮತ್ತಷ್ಟು ವೇಗ ಪಡೆಯಲಿದೆ. ಹಾಗಾಗಿ ಎರಡು ಜಿಲ್ಲೆಯಲ್ಲಿ ಕೌಶಲ್ಯಪೂರ್ಣ ಉದ್ಯೋಗ ಸೃಷ್ಟಿಯಾಗಲಿದೆ.

ಮೈಸೂರು ವಿಮಾನ ನಿಲ್ದಾಣ, ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ, ಕಡಕೊಳ ಬಳಿ ನಿರ್ಮಾಣವಾಗಿರುವ ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ರೈಲ್ವೆ ಮೂಲಕ ರಫ್ತು, ಸಮರ್ಪಕ ಕುಡಿಯುವ ನೀರು, ಅನಿಯಮಿತ ವಿದ್ಯುತ್ ಸರಬರಾಜು ಸೇರಿದಂತೆ ಹಲವು ಸೌಲಭ್ಯಗಳು ಎರಡು ಜಿಲ್ಲೆಯಲ್ಲಿವೆ. ಏರೋ ಸ್ಪೇಸ್ ಪಾರ್ಕ್ ನಿರ್ಮಾಣ ಮಾಡಿದರೆ ಯಾವುದಕ್ಕೂ ಕೊರತೆ ಆಗುವುದಿಲ್ಲ. ಅಲ್ಲದೆ ಮೈಸೂರಿನಲ್ಲಿ ಉತ್ತಮ ಹವಾಗುಣ ಇರುವ ಹಿನ್ನೆಲೆಯಲ್ಲಿ ಏರೋ ಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಸೂಕ್ತ ಜಾಗವಾಗಿದೆ.

ಮೈಸೂರಿನಲ್ಲಿ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಿದ್ದು, ಸಾವಿರಾರು ಕೌಶಲ್ಯ ಪೂರ್ಣ ಇಂಜಿನಿಯರಿಂಗ್ ಪದವಿ ಪಡೆದವರು ಇದ್ದಾರೆ. ಈ ಹಿನ್ನೆಲೆಯಲ್ಲಿ ಏರೋ ಸ್ಪೇಸ್ ಪಾರ್ಕ್ ನಿರ್ಮಾಣ ಮಾಡಿದರೆ ಅಗತ್ಯ ಕೌಶಲ್ಯ ಪೂರ್ಣ ನೌಕರರು ದೊರೆಯುತ್ತಾರೆ. ಈ ಹಿನ್ನೆಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರದಲ್ಲಿ ಏರೋ ಸ್ಪೇಸ್ ಮತ್ತು ಡಿಫೆನ್ಸ್ ಕಂಪನಿಗಳು ಬಂಡವಾಳ ಹೂಡಲಿವೆ.

ಸದ್ಯ ಏರೋ ಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಮೈಸೂರು ಮತ್ತು ಚಾಮರಾಜನಗರ ಕೈಗಾರಿಕಾ ವಲಯದಲ್ಲಿ ಭೂಮಿ ಇಲ್ಲ. ಆದರೆ ಈಗ ಹೊಸದಾಗಿ ಭೂ ಸ್ವಾಧೀನ ಮಾಡಿಕೊಂಡು ಏರೋ ಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಸರ್ಕಾರ ತೀರ್ಮಾನ ಮಾಡಿದೆ.

ಕೇಂದ್ರ ಸರ್ಕಾರದಿಂದ 25 ಕೋಟಿ ಅನುದಾನ ದೊರೆಯುತ್ತದೆ

ಏರೋ ಸ್ಪೇಸ್ ಅಥವಾ ಡಿಫೆನ್ಸ್ ಕ್ಲಸ್ಟರ್ ನಿರ್ಮಾಣ ಮಾಡಿದರೆ ಕೇಂದ್ರ ಸರ್ಕಾರ 25 ಕೋಟಿ ರೂಪಾಯಿ ಅನುದಾನ ನೀಡುತ್ತದೆ. ಈ ಹಣವನ್ನು ಕೇಂದ್ರ ಸರ್ಕಾರ ನೇರವಾಗಿ ಕೆಐಎಡಿಬಿಗೆ ನೀಡಲಿದೆ. ಈ ಅನುದಾನದಿಂದ ಕ್ಲಸ್ಟರ್ ನಿರ್ಮಾಣ ಮಾಡಲು ಅನುಕೂಲವಾಗಲಿದೆ. ಕೇಂದ್ರ ಸರ್ಕಾರದಿಂದ ಕ್ಲಸ್ಟರ್ ನಿರ್ಮಾಣಕ್ಕೆ ನೀಡುತ್ತಿರುವ 25 ಕೋಟಿ ಸೌಲಭ್ಯವನ್ನು ಮೈಸೂರು ಬಳಸಿಕೊಳ್ಳುತ್ತಿಲ್ಲ. ಪ್ರತಿ ವರ್ಷ ಬಂದ ಹಣ ಹಾಗೆ ವಾಪಸ್ಸು ಹೋಗುತ್ತಿದೆ. ಈಗ ಕ್ಲಸ್ಟರ್ ನಿರ್ಮಾಣ ಮಾಡಿದರೆ ನಯಾ ಪೈಸೆ ಕಡಿಮೆ ಇಲ್ಲದೆ ಕೇಂದ್ರ ಸರ್ಕಾರದ ಅನುದಾನ ದೊರೆಯಲಿದೆ. ರಾಜ್ಯ ಸರ್ಕಾರ ತೀರ್ಮಾನ ಮಾಡಿದಂತೆ ಈಗ ಏರೋ ಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ ನಿರ್ಮಾಣವಾದರೆ ಸ್ಥಳಿಯರಿಗೆ ಉದ್ಯೋಗಾವಕಾಶ ದೊರೆಯಲಿದೆ. ಅಲ್ಲದೆ ಮೈಸೂರು ಮತ್ತು ಚಾಮರಾಜನಗರದ ಆರ್ಥಿಕ ಬೆಳವಣಿಗೆ ಮತ್ತಷ್ಟು ಹೆಚ್ಚಾಗಲಿದೆ.

- ಸುರೇಶ್ ಕುಮಾರ್ ಜೈನ್.
ಪ್ರಧಾನ ಕಾರ್ಯದರ್ಶಿ, ಮೈಸೂರು ಕೈಗಾರಿಕೆಗಳ ಸಂಘ

ಸರ್ಕಾರದ ಉನ್ನತ ಮಟ್ಟದಲ್ಲಿ ತೀರ್ಮಾನ

ಮೈಸೂರು ಮತ್ತು ಚಾಮರಾಜನಗರದಲ್ಲಿ ಏರೋ ಸ್ಪೇಸ್ ಪಾರ್ಕ್ ನಿರ್ಮಾಣ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಹೇಳಿದ್ದಾರೆ. ಸದ್ಯ ಮೈಸೂರು ಮತ್ತು ಚಾಮರಾಜನಗರದಲ್ಲಿ ಕೆಐಎಡಿಬಿ ಬಳಿ ಭೂಮಿ ಇಲ್ಲ. ಯಾವುದೇ ಕೈಗಾರಿಕೆಗೆ ನಾವು ಭೂಮಿ ಮೀಸಲಿಡುವುದಿಲ್ಲ. ಸರ್ಕಾರ ಸೂಚಿಸಿದ ಮೇಲೆ ಭೂ ಸ್ವಾಧೀನ ಮಾಡಿಕೊಂಡು ಅಭಿವೃದ್ಧಿ ಮಾಡುತ್ತೇವೆ. ಏರೋ ಸ್ಪೇಸ್ ಪಾರ್ಕ್ ನಿರ್ಮಾಣ ಮಾಡಲು ಭೂಮಿ ಬೇಕೆಂದು ಸರ್ಕಾರ ಸೂಚನೆ ನೀಡಿದರೆ ಭೂ ಸ್ವಾಧೀನಾಧಿಕಾರಿಗಳು ಭೂಮಿ ಹುಡುಕುತ್ತಾರೆ. ಅವರು ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಅದನ್ನು ನಮಗೆ ನೀಡಿದರೆ, ನಾವು ಅದನ್ನು ಅಭಿವೃದ್ಧಿಗೊಳಿಸಿ ಸರ್ಕಾರ ಸೂಚನೆ ನೀಡಿದ ಕಂಪನಿಗಳಿಗೆ ನೀಡುತ್ತೇವೆ.

- ಮಾದೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಕೆಐಎಡಿಬಿ

ಎನ್.ಆರ್.ಕ್ಷೇತ್ರದಲ್ಲಿ ಒಂದು ಸಾವಿರ ಎಕರೆ ಭೂಮಿ ಲಭ್ಯ

ಮೈಸೂರಿನ ನರಸಿಂಹರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಸುಮಾರು ಒಂದು ಸಾವಿರ ಎಕರೆ ಭೂಮಿ ಲಭ್ಯವಿದೆ. ಇದರಲ್ಲಿ ಅಗತ್ಯವಿರುವಷ್ಟು ಜಾಗವನ್ನು ಏರೋ ಸ್ಪೇಸ್ ಪಾರ್ಕ್ ಮಾಡಲು ಸರ್ಕಾರ ಚಿಂತನೆ ನಡೆಸಿದೆ ಎನ್ನಲಾಗಿದೆ.

ನರಸಿಂಹರಾಜ ಕ್ಷೇತ್ರದಲ್ಲಿ ಬೆರಳಣಿಕೆಯಷ್ಟು ಮಾತ್ರ ಸಣ್ಣ ಪುಟ್ಟ ಕೈಗಾರಿಕೆಗಳಿವೆ. ಏರೋ ಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ ನಿರ್ಮಾಣವಾದರೆ ಕ್ಷೇತ್ರದಲ್ಲಿ ಕೈಗಾರಿಕಾ ಬೆಳವಣಿಗೆ ಆಗುತ್ತದೆ. ಅಲ್ಲದೆ ಸ್ಥಳಿಯರಿಗೂ ಉದ್ಯೋಗಾವಕಾಶ ದೊರೆಯಲಿದೆ. ಈ ಸಂಬಂಧ ಎನ್.ಆರ್. ಕ್ಷೇತ್ರದಲ್ಲಿ ಕೈಗಾರಿಕೆ ಸ್ಥಾಪನೆಗೆ ಶಾಸಕ ತನ್ವೀರ್ ಸೇಠ್ ಕೂಡ ಉತ್ಸುಕತೆ ತೋರಿದ್ದಾರೆ ಎಂದು ತಿಳಿದು ಬಂದಿದೆ.

ಕೃಷ್ಣಗಿರಿ ಪೀಠಾಧಿಪತಿಗಳ ಕಷ್ಟ ಭಂಜನ ಮಹಾಯಜ್ಞ; ನೈವೇದ್ಯ ವಿತರಣೆ ವಿಶ್ವ ದಾಖಲೆ

ಮೈಸೂರು, ನ.12(ಎಸ್‌ಪಿಎನ್)– ಮೈಸೂರಿನ ಪುರಭವನದ ಆವರಣದಲ್ಲಿ ತಮಿಳುನಾಡು ಕೃಷ್ಣಗಿರಿಯ ಪೀಠಾಧಿಪತಿ ಶ್ರೀ ವಸಂತ ವಿಜಯಾನಂದ ಗಿರಿಜೀ ಮಹಾರಾಜ್ ನೇತೃತ್ವದಲ್ಲಿ ನ.5ರಿಂದ 12ರವರೆಗೆ ನಡೆದ 'ಕಷ್ಟ ಭಂಜನ ಮಹಾಯಜ್ಞ ಹಾಗೂ ಬಗೆಬಗೆಯ 2025 ನೈವೇದ್ಯವನ್ನು ಭಕ್ತರಿಗೆ ವಿತರಣೆ' ಮಾಡಲಾಗಿದ್ದು, ಇದು 'ವರ್ಲ್ಡ್ ಬುಕ್ ಆಫ್ ರೇಕಾರ್ಡ್ಸ್‌ನಲ್ಲಿ ದಾಖಲಾಗಿ ವಿಶ್ವ ದಾಖಲೆ ನಿರ್ಮಿಸಿದೆ.

ವಿಶ್ವ ದಾಖಲೆ ಪಡೆದ 'ವರ್ಲ್ಡ್ ಬುಕ್ ಆಫ್ ರೇಕಾರ್ಡ್ಸ್' ಪ್ರಮಾಣಪತ್ರವನ್ನು ಸಂಸದ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶ್ರೀ ವಸಂತ ವಿಜಯಾನಂದ ಗಿರಿಜೀ ಮಹಾರಾಜ್ ಅವರಿಗೆ ವಿತರಿಸಿದರು.



ವಿಶ್ವ ದಾಖಲೆ ಪಡೆದ 'ವರ್ಲ್ಡ್ ಬುಕ್ ಆಫ್ ರೇಕಾರ್ಡ್ಸ್' ಪ್ರಮಾಣಪತ್ರವನ್ನು ಸಂಸದ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶ್ರೀ ವಸಂತ ವಿಜಯಾನಂದ ಗಿರಿಜೀ ಮಹಾರಾಜ್ ಅವರಿಗೆ ವಿತರಿಸಿದರು.

ಬಳಿಕ ಮಾತನಾಡಿದ ಸಂಸದರು, ನಮ್ಮ ಭಾರತೀಯ ಪರಂಪರೆಯಲ್ಲಿ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಬಹುದು. ಕೃಷ್ಣಗಿರಿ ಪೀಠಾಪತಿ ಶ್ರೀ ವಸಂತ ವಿಜಯಾನಂದ ಗಿರಿಜೀ ಮಹಾರಾಜ್ ಅವರು, ನ.5ರಿಂದ ಬುಧವಾರದವರೆಗೆ ಮಹಾಗಣಪತಿ ಪೂಜೆ, ಮಹಾಲಕ್ಷ್ಮೀ ಪೂಜೆ, ಸರಸ್ವತಿ ಪೂಜೆ, ಚಾಮುಂಡೇಶ್ವರಿ ಪೂಜೆ, ಲೋಕಾ ಕಲ್ಯಾಣಕ್ಕಾಗಿ ಧನ್ವಂತರಿ ಹೋಮ, ಹನುಮಂತನ ಪೂಜೆ ಸೇರಿದಂತೆ ಇತರೆ ದೇವತೆಗಳನ್ನು ನೆರವೇರಿಸಿ, ಕೊನೆಯ ದಿನವಾದ ಇಂದು ಪ್ರಧಾನ ಹೋಮಕ್ಕೆ ಪೂರ್ಣಾಹುತಿ ನೀಡಿ, ಕಷ್ಟಭಂಜನ ಮಹಾಯಜ್ಞವನ್ನು ಸಮಾಪ್ತಿಗೊಳಿಸಿದ್ದಾರೆ. ನಾನು ಕೊನೆಯ ದಿನದ ಪೂಜೆಯಲ್ಲಿ ಪಾಲ್ಗೊಳ್ಳುತ್ತಿರುವುದು ಸಂತೋಷ ತಂದಿದೆ ಎಂದರು.

ಕಳೆದ ವರ್ಷ 2024 ನೈವೇದ್ಯಗಳನ್ನು ಭೈರವನಿಗೆ ಸಮರ್ಪಿಸಿ, ವಿತರಿಸಲಾಗಿತ್ತು. ಈ ಹಿನ್ನಲೆಯಲ್ಲಿ ಏಷ್ಯಾ ಬುಕ್ಸ್ ಆಫ್ ರೆಕಾರ್ಡ್ಸ್, ಇಂಡಿಯಾ ಬುಕ್ಸ್ ಆಫ್ ರೆಕಾರ್ಡ್ಸ್ ಸೇರಿದಂತೆ 40 ದಾಖಲೆಗಳನ್ನು ಪಡೆದಿರುವುದು ಸ್ವಾಗತಾರ್ಹ. ಈಗಾಗಲೇ 600ಕ್ಕೂ ಹೆಚ್ಚು ವಿಶ್ವ ದಾಖಲೆಗಳನ್ನು ವಿವಿಧ ಸಂದರ್ಭದಲ್ಲಿ ಪಡೆದಿರುವ ಶ್ರೀ ವಸಂತ ವಿಜಯಾನಂದ ಗಿರಿಜೀ ಅವರು, ಈ ಬಾರಿ ಭೈರವನಿಗೆ 'ಕಷ್ಟ ಭಂಜನ ಮಹಾಯಜ್ಞ ಹಾಗೂ 2025 ಬಗೆಬಗೆಯ ನೈವೇದ್ಯ'ವನ್ನು ಸಮರ್ಪಿಸಿ, ವಿಶ್ವ ದಾಖಲೆ ಮಾಡಿರುವುದು ಸಂತೋಷ ಸಂಗತಿ ಎಂದರು.

ಈ ವೇಳೆ ಬಿ.ಕೆ.ದೀಪಕ್ ಜೈನ್, ಬಿ.ಕೆ. ಅಜಯ್‌ಕುಮಾರ್ ಜೈನ್, ಶಂಕೇಶ್ ಜೈನ್ ಸೇರಿದಂತೆ ಇತರರಿದ್ದರು.

ಹುಲಿ ಬಂತು ಹುಲಿ: ಎಐ ವೀಡಿಯೊ ಹಾವಳಿಗೆ ಅರಣ್ಯ ಇಲಾಖೆ ತತ್ತರ



ಮೈಸೂರು, ನ.12 (ಎಂಟಿವೈ)– ಸರಗೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹುಲಿ ದಾಳಿ ಪ್ರಕರಣದಿಂದ ಕಂಗೆಟ್ಟಿರುವ ಅರಣ್ಯ ಇಲಾಖೆಗೆ ಇದೀಗ ಕೃತಕ ಬುದ್ಧಿಮತ್ತೆ(ಎಐ) ವೀಡಿಯೊ ಹಾಗೂ ಚಿತ್ರಗಳು ವೈರಲ್ ಆಗಿ ಜನರನ್ನು ಭಯಭೀತರಾಗಿಸುತ್ತಿರುವುದು ಮತ್ತಷ್ಟು ಚಿಂತಾಕ್ರಾಂತವನ್ನಾಗಿಸಿದೆ. ಸರಗೂರು ತಾಲೂಕಿನ ವಿವಿಧ ಗ್ರಾಮ ವ್ಯಾಪ್ತಿಯಲ್ಲಿ ಈಗಾಗಲೇ ಆರು ಹುಲಿ, ಬಂಡೀಪುರ ಬಫರ್‌ಜೋನ್‌ನಲ್ಲಿ ಮೂರು ಮರಿಗಳೊಂದಿಗೆ ತಾಯಿ ಹುಲಿ ಸೇರಿದಂತೆ 10 ಹುಲಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದಿರುವ ಅರಣ್ಯ ಇಲಾಖೆ ಮಾನವ–ವನ್ಯಜೀವಿ ಸಂಘರ್ಷ ನಡೆದ ಕಾಡಂಚಿನ ಗ್ರಾಮಗಳಲ್ಲಿ ಗುರುತಿಸಲ್ಪಟ್ಟ ಹಾಗೂ ಶಂಕಿತ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿದೆ. ಈ ನಡುವೆ ವಿವಿಧ ಗ್ರಾಮಗಳಲ್ಲಿ ಹುಲಿ ಪ್ರತ್ಯಕ್ಷ ಎಂಬ ಎಐ ನಿರ್ಮಿತ ವೀಡಿಯೊ ಹಾಗೂ ಫೋಟೊವನ್ನು ಕಿಡಿಗೇಡಿಗಳು ವೈರಲ್ ಮಾಡುತ್ತಿರುವುದು ಕೂಂಬಿಂಗ್ ಕಾಯಾಚರಣೆಯಲ್ಲಿ ತೊಡಗಿರುವ ಅರಣ್ಯ ಸಿಬ್ಬಂದಿಗಳನ್ನು ದಿಕ್ಕು ತಪ್ಪಿಸುತ್ತಿವೆ.

ಕಳೆದ ರಾತ್ರಿ ಹೆಡಿಯಾಲ ಬಸ್ ನಿಲ್ದಾಣದ ಬಳಿ ಹುಲಿ ಪ್ರತ್ಯಕ್ಷವಾಗಿದೆ ಎಂಬ ಎಐ ಫೋಟೊ ವೈರಲ್ ಆಗಿದೆ. ಆದರೆ, ಆ ಚಿತ್ರದ ನೈಜತೆ ಪರಿಶೀಲಿಸದ ಗ್ರಾಮಸ್ಥರು ಹುಲಿ ಬಂದಿದೆ ಎಂದು ಆತಂಕಕ್ಕೀಡಾಗಿದ್ದಾರೆ. ಅಲ್ಲದೆ, ಗ್ರಾಮಕ್ಕೆ ಹುಲಿ ಬಂದಿರುವುದಾಗಿ ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಕೂಡಲೆ ಬಂದ ಅರಣ್ಯ ಸಿಬ್ಬಂದಿ ತಂಡ ಪರಿಶೀಲಿಸಿದಾಗ ಹುಲಿ ಬಂದಿರುವ ಕುರುಹು ಪತ್ತೆಯಾಗಿಲ್ಲ. ಹುಲಿ ಬಂದಿರುವ ಮಾಹಿತಿ ಯಾರಿಂದ ಬಂದಿದೆ ಎಂದು ನೋಡಿದಾಗ ಆ ಭಾಗದ ವಾಟ್ಸಪ್ ಗ್ರೂಪ್‌ಗಳಲ್ಲಿ ಎಐ ಫೋಟೊ, ವೀಡಿಯೊ ಹರಿದಾಡಿದೆ. ಅದನ್ನು ಕೆಲವರು ಸ್ಟೇಟಸ್‌ಗೆ ಹಾಕಿಕೊಂಡು ಮತ್ತಷ್ಟು ಜನರನ್ನು ಗಾಬರಿಗೊಳಿಸಿದ್ದಾರೆ.

ಕ್ರಮ ಕೈಗೊಳ್ಳುತ್ತೇವೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿ ಸೆರೆಗೆ ಸಿಬ್ಬಂದಿಗಳ ತಂಡ ಶ್ರಮಿಸುತ್ತಿದೆ. ಕಡಿಮೆ ಅವಧಿಯಲ್ಲಿಯೇ ಸರಗೂರು ಭಾಗದಲ್ಲಿ 6 ಹುಲಿ ಸೆರೆ ಹಿಡಿಯಲಾಗಿದೆ. ರೈತರ ರಕ್ಷಣೆ ನಮ್ಮ ಹೊಣೆಯಾಗಿದ್ದು, ಆ ನಿಟ್ಟಿನಲ್ಲಿ ಕಾರ್ಯಾಚರಣೆ ಮಾಡಿ ಹುಲಿ ಸೆರೆಗೆ ಶ್ರಮಿಸುತ್ತಿರುವಾಗಲೇ ಎಐ ವಿಡಿಯೋ ಹಾಗೂ ಫೋಟೋ ವೈರಲ್ ಮಾಡಿ ದಿಕ್ಕು ತಪ್ಪಿಸಲಾಗುತ್ತಿದೆ ಇದು ಅಕ್ಷಮ್ಯ ಅಪರಾಧವೂ ಆಗಿದೆ. ತಪ್ಪು ಮಾಹಿತಿ ನೀಡುವವರ ವಿರುದ್ಧ ಶಿಕ್ಷಾರ್ಹ ಅಪರಾಧವಾಗಿರುವುದರಿಂದ ಎಐ ಫೋಟೊ, ವೀಡಿಯೋ ವೈರಲ್ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ರಾಜ್ಯ ಸರ್ಕಾರದಿಂದ ಮತ್ತೊಂದು ತೆರಿಗೆ ಶೋಧನೆ

ಪೆಟ್ರೋಲ್, ಡೀಸೆಲ್, ಎಥೆನಾಲ್ ದರ 1 ರೂ. ಹೆಚ್ಚಳ ನಿರ್ಧಾರ

- ಇಂದು ನಡೆಯುವ ಸಂಪುಟ ಸಭೆಯಲ್ಲಿ ತೀರ್ಮಾನ ಸಾಧ್ಯತೆ
- ಕೇಂದ್ರದ ಜಿಎಸ್‌ಟಿ ಇಳಿಕೆಯ ಆದಾಯ ಭರಿಸುವ ಯತ್ನ

ಬೆಂಗಳೂರು, ನ.12(ಕೆಎಂಶಿ)– ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ಹಾಗೂ ಎಥೆನಾಲ್ ಮೇಲೆ ಒಂದು ರೂ. ದರ ಹೆಚ್ಚಳ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಗಣನೀಯವಾಗಿ ಇಳಿಕೆ ಮಾಡಿದ ಬೆನ್ನಲ್ಲೇ ರಾಜ್ಯ ಸರ್ಕಾರ ತನ್ನ ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಪರೋಕ್ಷ ಮಾರ್ಗಗಳನ್ನು ಕಂಡುಕೊಳ್ಳುತ್ತಿದೆ. ತಲಾ ಒಂದು ರೂ. ತೆರಿಗೆ ಹೆಚ್ಚಳದಿಂದ ವಾರ್ಷಿಕ 2,120 ಕೋಟಿ ರೂ. ಸಂಗ್ರಹಣೆ ಗುರಿ ಹೊಂದಿದೆ.



ಪೆಟ್ರೋಲ್, ಡೀಸೆಲ್ ದರ ಹೆಚ್ಚಳಕ್ಕೂ ಮುನ್ನ ಅಬಕಾರಿ ಇಲಾಖೆಯಿಂದ ಹೆಚ್ಚುವರಿ ಯಾಗಿ 10,000 ಕೋಟಿ ರೂ. ಸಂಗ್ರಹಿಸುವ ಉದ್ದೇಶದಿಂದ ಮಧ್ಯಮ ವರ್ಗದವರು ಸೇವಿಸುವ ಪಾನೀಯಗಳ ದರ ಪರಿಷ್ಕರಣೆ ಮಾಡಿರುವುದಲ್ಲದೆ, ಇದೀಗ ಹರಾಜಿನ ಮೂಲಕ 500ಕ್ಕೂ ಹೆಚ್ಚು ಹೊಸ ವೈನ್ಸ್ ಶಾಪ್, ಬಾರ್‌ಗಳಿಗೆ ಲೈಸೆನ್ಸ್ ನೀಡಲು ಈಗಾಗಲೇ ಸಂಬಂಧಪಟ್ಟ ಸಚಿವರು ದರ ನಿಗದಿ ಮಾಡಿದ್ದಾರೆ.

ಪಂಚ ಗ್ಯಾರಂಟಿಗಳಿಗೆ ಹಣ ಕ್ರೋಢೀಕರಿಸುವುದು ಮತ್ತು ಶಾಸಕರ ಕ್ಷೇತ್ರಗಳಲ್ಲಿ ಅಭಿವೃದ್ಧಿಗಾಗಿ 50 ರಿಂದ 100 ಕೋಟಿ ರೂ. ನೀಡಲು ಈ ಹೆಚ್ಚುವರಿ ಹಣ ಸಂಗ್ರಹ ಮಾಡಲಾಗುತ್ತಿದೆ. ನಾಳೆ (ಗುರುವಾರ) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಎಥೆನಾಲ್ ದರ ಏರಿಕೆ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ತೈಲ ಬೆಲೆ ಹೆಚ್ಚಳ ಸುಳಿವನ್ನು ಕಾರ್ಮಿಕ ಸಚಿವ ಸಂತೋಷ್ ಲಾಡ್ ಇಂದಿಲ್ಲಿ ಸುದ್ದಿಗಾರರಿಗೆ ನೀಡಿದ್ದಾರೆ.

ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕಾಗಿ ಹೆಚ್ಚುವರಿ ಸೆಸ್ ಸಂಗ್ರಹಕ್ಕೆ ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ ಎಂದರು. ಈ ಮೂಲಕ 1.30 ಕೋಟಿ ಅಸಂಘಟಿತ ಕಾರ್ಮಿಕರಿಗೆ ನೆರವಾಗುವ ಉದ್ದೇಶ ಇದಾಗಿದೆ. ಪೆಟ್ರೋಲ್, ಡೀಸೆಲ್, ಎಥೆನಾಲ್ ಉತ್ಪನ್ನಗಳ ಮೇಲೆ ಒಂದು ರೂ. ಸೆಸ್ ವಿಧಿಸುವ ಬಗ್ಗೆ ಚರ್ಚೆ ನಡೆದಿದ್ದು, ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ಅನುಮೋದನೆ ದೊರಕಿದರೆ ಕೋಟ್ಯಾಂತರ ಕಾರ್ಮಿಕರಿಗೆ ಅನುಕೂಲವಾಗಲಿದೆ. ಕೇವಲ ಒಂದು ರೂ. ಹೆಚ್ಚಳದಿಂದ 62 ಲಕ್ಷ ಕುಟುಂಬಗಳಿಗೆ ಆರೋಗ್ಯ ಸೌಲಭ್ಯ, ಅಪಘಾತ ಪರಿಹಾರ, ಶೈಕ್ಷಣಿಕ ಸಹಾಯಧನ ನೀಡಲು ಈ ಹಣ ಬಳಕೆ ಮಾಡಿಕೊಳ್ಳುತ್ತೇವೆ ಎಂದರು.

ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ನಿರ್ದಿಷ್ಟವಾದ 'ಸೆಸ್' ಪ್ರಮಾಣವು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಪ್ರಸ್ತುತ, 'ಮಾರಾಟ ತೆರಿಗೆ' ವಿಧಿಸುತ್ತದೆ, ಇದರ ಜೊತೆಗೆ ಇತರ ಸಣ್ಣ ಸೆಸ್‌ಗಳು ಇರುತ್ತವೆ. ಪೆಟ್ರೋಲ್ ಮೇಲೆ 29.84%ರಷ್ಟು ಮಾರಾಟ ತೆರಿಗೆ, ಡೀಸೆಲ್ ಮೇಲೆ 18.44%ರಷ್ಟು ಮಾರಾಟ ತೆರಿಗೆ ವಿಧಿಸಲಾಗುತ್ತದೆ. ರಾಜ್ಯ ಮಟ್ಟದಲ್ಲಿ, ಬೆಂಗಳೂರಿನಂತಹ ಕೆಲವು ಸ್ಥಳಗಳಲ್ಲಿ ಕಸ ಸಂಗ್ರಹಣೆ, ನಿರ್ವಹಣೆಗಾಗಿ ಸಣ್ಣ ಪ್ರಮಾಣದ ಸೆಸ್ ವಿಧಿಸಿದೆ.

ಸಂಗೀತ, ಸಾಹಿತ್ಯಕ್ಕೆ ಮೈಸೂರೇ ತವರೂರು

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಬಣ್ಣನೆ

ಮೈಸೂರು, ನ.12(ವಿವಿಹೆಚ್)– ಕನ್ನಡ ನಾಡಿನ ಸಂಸ್ಕೃತಿ ಉಳಿಸುವುದಕ್ಕಾಗಿ, ಈ ನೆಲ, ಜಲ, ಭಾಷೆ ಎಲ್ಲವನ್ನು ಎತ್ತರಕ್ಕೆ ಕೊಂಡೊಯ್ಯಲು ಸಂಗೀತ ಉತ್ತಮ ಸಾಧನ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಪ್ರಾಯಪಟ್ಟರು.

ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ನಗರದ ನಾದಬ್ರಹ್ಮ ಸಂಗೀತಾ ಸಭಾದಲ್ಲಿ ಆಯೋಜಿಸಿದ್ದ ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್‌ನ 11ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ, ಹಳೇ ಕನ್ನಡ ಹಾಡುಗಳ 'ಬರೆಯುವೆ ನಿನಗಾಗಿ' ಗೀತಗಾಯನ ಮತ್ತು ಅಭಿನಂದಾ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದರು.



ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ಗಣ್ಯರನ್ನು ಸನ್ಮಾನಿಸಲಾಯಿತು.

ಮೈಸೂರು ಕಲೆ, ಸಾಹಿತ್ಯದ ಸ್ವರ್ಗ ಸ್ಥಾನವಾಗಿದೆ. ಅದರಲ್ಲೂ ನಂಜುಮಾಳಿಗೆ ಸುತ್ತಮುತ್ತಲ ಪ್ರದೇಶದಲ್ಲಿ ಸಂಗೀತ, ಸಾಹಿತ್ಯವನ್ನು ಪ್ರೋತ್ಸಾಹಿಸುವ ಕಲಾ ಪೋಷಕರೇ ಇಲ್ಲಿದ್ದಾರೆ. ಆಸಕ್ತಿಯಿಂದ ಕುಳಿತು ಕಾರ್ಯಕ್ರಮ ವೀಕ್ಷಿಸಿ, ಅದಕ್ಕೆ ಬೆನ್ನೆಲುಬಾಗಿ ನಿಲ್ಲುವ ಬಹುದೊಡ್ಡ ವರ್ಗವೇ ಮೈಸೂರಿನಲ್ಲಿದೆ ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಅಧ್ಯಕ್ಷ ನಾಗರಾಜ್ ಭೈರಿ ಅವರು ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿ, ಕಲೆ, ಸಾಹಿತ್ಯ ನೃತ್ಯ ನಮ್ಮನ್ನು ಕಾಪಾಡಿಕೊಂಡು ಬಂದಿದೆ. ಭಾಷೆ ನಮ್ಮನ್ನು ಸಾಕಿದೆ. ಅದರಿಂದ ನಾವು ಬದುಕ್ಕಿದ್ದೇವೆ. ನಮ್ಮನ್ನು ಕಾಪಾಡಿಕೊಂಡ ಕರ್ನಾಟಕವನ್ನು ನಾವು ಇಂದು ಜವಾಬ್ದಾರಿ ನೋಡಿಕೊಳ್ಳಬೇಕಿದೆ ಎಂದರು.

ಹೊಯ್ಸಳ, ಕದಂಬ, ವಿಜಯನಗರ ಎಂಬಂತಹ ಮಹಾನ್ ಸಾಮ್ರಾಜ್ಯಗಳನ್ನು ಕೊಟ್ಟಂತಹ ಕರ್ನಾಟಕವನ್ನು ನೂರಾರು ವರ್ಷಗಳ ಪರಿಶ್ರಮದಿಂದ ಅಖಂಡ ಕರ್ನಾಟಕವನ್ನಾಗಿ ಮಾಡಿದ್ದೇವೆ. ಆದರೆ ಕೇವಲ 70 ವರ್ಷಗಳ ಕಾಲ ಕಾಪಾಡಿಕೊಂಡು ಬರಲಾಗುತ್ತಿಲ್ಲ ಎಂದಾದರೆ ಅದಕ್ಕಿಂತ ವಿಷಾದನೀಯ ವಿಚಾರ ಮತ್ತೊಂದಿಲ್ಲ ಎಂದು ಬೇಸರಿಸಿದರು. ಇದೇ ವೇಳೆ ಗಾಯಕ ಪ್ರಮಥ ಮಂಜುನಾಥ್ ಅವರನ್ನು ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಅಧ್ಯಕ್ಷ ಹೆಚ್.ಡಿ.ಗಣೇಶ್, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಸಮಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಜೆಮದ್ದುರಾಜ್, ಗಾಯಕ ರೇವಣ್ಣ, ಬಿ.ಎಸ್.ಶ್ರೀಕಂಠರಾವ್ ಉಪಸ್ಥಿತರಿದ್ದರು.

ಬೀದಿನಾಯಿಗಳ ಹಾವಳಿ ತಡೆಯುವಲ್ಲಿ ಪಾಲಿಕೆ ನಿರ್ಲಕ್ಷ್ಯತೆ; ಸಾರ್ವಜನಿಕರ ಅಸಮಾಧಾನ

ಮೈಸೂರು, ನ.12(ಎಸ್‌ಪಿಎನ್)– ಬೀದಿ ನಾಯಿಗಳಿಗೆ ಆಶ್ರಯ ಕಲ್ಪಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿದ್ದರೂ ಮೈಸೂರು ನಗರ ಪಾಲಿಕೆ ಆಯುಕ್ತರಾಗಲೀ ಮತ್ತು ಆರೋಗ್ಯಾಧಿಕಾರಿಗಳಾಗಲೀ ಈ ಸಂಬಂಧ ಗಮನಹರಿಸುತ್ತಿಲ್ಲ ಎಂದು ಸಾರ್ವಜನಿಕ ವಲಯದಲ್ಲಿ ಅಸಮಾಧಾನ ಕೇಳಿ ಬರುತ್ತಿದೆ.

ಮೈಸೂರು ನಗರ ಪಾಲಿಕೆ ವ್ಯಾಪ್ತಿ ಮತ್ತು ಹೊರವಲಯದ ಶಾಲಾ–ಕಾಲೇಜುಗಳು, ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ಕ್ರೀಡಾ ಸಂಕೀರ್ಣಗಳು/ಮೈದಾನಗಳ ಮಾಹಿತಿಯನ್ನು ಸಂಗ್ರಹಿಸಿ, ಅಲ್ಲಿನ ಬೀದಿ ನಾಯಿಗಳನ್ನು ಹಿಡಿದು ಆಶ್ರಯ ತಾಣಗಳಲ್ಲಿರಿಸಬೇಕೆಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ. ಆದರೆ, ಇದರ ಬಗ್ಗೆ ನಗರ ಪಾಲಿಕೆ ಅಧಿಕಾರಿಗಳು ಚಕಾರ ಎತ್ತುತ್ತಿಲ್ಲ ಎಂದು ಎಂಜಿಪಿ ಸದಸ್ಯ, ಸಾಮಾಜಿಕ ಕಾರ್ಯಕರ್ತ ಬಾನು ಪ್ರಶಾಂತ್, ಅಧಿಕಾರಿಗಳ ಕಾರ್ಯ ವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸ್ಥಳಾಂತರಿಸಬೇಕಾದ ನಾಯಿಗಳ ಅಂದಾಜು, ಆಶ್ರಯ ತಾಣಗಳ ನಿರ್ಮಾಣ, ನಿರ್ವಹಣೆ ಹಾಗೂ ನಾಯಿಗಳನ್ನು ಹಿಡಿಯಲು ಮತ್ತು ನಿರ್ವಹಿಸಲು ಎನ್‌ಜಿಒಗಳನ್ನು ಗುರುತಿಸುವುದು. ನಾಯಿಗಳನ್ನು ಹಿಡಿದು ಅವುಗಳಿಗೆ ಲಸಿಕೆ ಹಾಕುವುದು ಮತ್ತು ಅವುಗಳನ್ನು ಪೋಷಿಸುವುದು, ಆಹಾರ ಮತ್ತು ಪಶುವೈದ್ಯಕೀಯ ಆರೈಕೆಗೆ ಕ್ರಮ ಕುರಿತು ಆಸಕ್ತ ಸರ್ಕಾರೇತರ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸುವ ಪ್ರಕ್ರಿಯೆ ಆರಂಭಿಸಿಲ್ಲ.



ಕಳೆದ ಮೂರು ತಿಂಗಳಿಂದ ಕುಕ್ಕರಹಳ್ಳಿ ಕೆರೆಯಲ್ಲಿ ವಾಯುವಿಹಾರಕ್ಕೆ ಹೋಗುವ ವೃದ್ಧರು, ಮಹಿಳೆಯರು, ಮಕ್ಕಳ ಮೇಲೆ ಇಲ್ಲಿನ ಬೀದಿನಾಯಿಗಳು ದಾಳಿ ನಡೆಸುತ್ತಿವೆ. ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕುವುದು ಹಾಗೂ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಾಯಿಗಳಿಗೆ ಆಹಾರ ಹಾಕುವುದನ್ನು ತಡೆಯುವಂತೆ ಮೈಸೂರು ವಿವಿ ಕುಲಪತಿಗಳಿಗೆ ಈ ಹಿಂದೆ ಮನವಿ ಸಲ್ಲಿಸಲಾಗಿತ್ತು ಆದರೆ, ಪ್ರಾಣಿಪ್ರಿಯರೆಂದು ಹೇಳಿಕೊಳ್ಳುವ ಕೆಲವರು ರಾಜ್ಯಪಾಲರಿಗೆ ಮನವಿ ಸಲ್ಲಿಸಿ, ಮೈಸೂರು ವಿವಿ ಹೊರಡಿಸಿದ್ದ ಆದೇಶವನ್ನು ತಡೆದಿದ್ದರು. ಅಂದಿನಿಂದ ಇಂದಿನವರೆಗೆ ಕುಕ್ಕರಹಳ್ಳಿ ಕೆರೆಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದೆ. ಇದರಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳದಿರುವುದು ಬೇಸರದ ಸಂಗತಿ ಎಂದು ಆರೋಪಿಸಿದರು.

ನಗರದಲ್ಲಿ ಬೀದಿ ನಾಯಿಗಳ ನಿಖರ ಸಂಖ್ಯೆ, ಸ್ಥಳ ಹಾಗೂ ಅವುಗಳ ಆರೋಗ್ಯ ಸ್ಥಿತಿಯ ಮಾಹಿತಿಯನ್ನು ಸಂಗ್ರಹಿಸುತ್ತಿಲ್ಲ. ಆರೋಗ್ಯ, ಶಿಕ್ಷಣ, ಸಾರಿಗೆ, ಯೋಜನೆ ಹಾಗೂ ರೈಲ್ವೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಬೀದಿ ನಾಯಿಗಳ ಆಶ್ರಯತಾಣಗಳಿಗೆ ಬಿಡಲು ಕ್ರಮ ಕೈಗೊಳ್ಳಬೇಕು. ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಆರೈಕೆಗೆ ಸೂಕ್ತವಾದ ಸ್ಥಳವನ್ನು ಗುರುತಿಸಬೇಕು. ಪ್ರಾಣಿ ಕಲ್ಯಾಣ ಸಂಸ್ಥೆಗಳು ಹಾಗೂ ಪಶುಸಂಗೋಪನಾ ಇಲಾಖೆಯ ಸಹಯೋಗದೊಂದಿಗೆ ಉದ್ದೇಶಿತ ಸ್ಥಳಾಂತರ ಮಾಡಲಾಗುವ ಬೀದಿ ನಾಯಿಗಳ ಆಶ್ರಯ ತಾಣಗಳು/ಕೇಂದ್ರ ನಿರ್ವಹಣೆಗಾಗಿ ಆಸಕ್ತರನ್ನು ಆಹ್ವಾನಿಸಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ರಾಯನಕೆರೆ ಆವರಣದ 2 ಎಕರೆ ಜಾಗದಲ್ಲಿ ಅಂದಾಜು 2 ಕೋಟಿ ವೆಚ್ಚದಲ್ಲಿ ಆಶ್ರಯತಾಣ ನಿರ್ಮಿಸಲಾಗುತ್ತಿದೆ. ಆದರೆ, ಇನ್ನು ಈ ಕಟ್ಟಡ ಪಾಲಿಕೆಗೆ ಹಸ್ತಾಂತರವಾಗಿಲ್ಲ. ಅದೇ ರೀತಿ ನಗರದ ಇತರೆಡೆ ಬೀದಿನಾಯಿಗಳ ಆಶ್ರಯತಾಣ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದರು.

> ಬೀದಿನಾಯಿಗಳಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಮೈಸೂರು ನಗರ ವ್ಯಾಪ್ತಿಗೂ ಅನ್ವಯವಾಗುತ್ತದೆ. ಈಗಾಗಲೇ ರಾಯನಕೆರೆ ಆವರಣದ ಎರಡು ಎಕರೆ ಜಾಗದಲ್ಲಿ ಬೀದಿನಾಯಿಗಳ ಆಶ್ರಯತಾಣ ನಿರ್ಮಾಣವಾಗುತ್ತಿದೆ. ಆದರೆ, ಇದರ ನಿರ್ವಹಣೆಗೆ 2–3 ಬಾರಿ ಟೆಂಡರ್ ಕರೆದಿದ್ದರೂ ಯಾವುದೇ ಎನ್‌ಜಿಓ ಟೆಂಡರ್‌ನಲ್ಲಿ ಭಾಗವಹಿಸಲು ಮುಂದೆ ಬರುತ್ತಿಲ್ಲ. ಹಾಗಾಗಿ ಈ ಯೋಜನೆಗೆ ಹಿನ್ನಡೆಯಾಗುತ್ತಿದೆ. ಅಂತೆಯೇ ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ. ಅಲ್ಲಲ್ಲಿ ನಾಯಿಗಳ ಹಿಡಿಯುವಂತೆ ನಾಗರಿಕರಿಂದ ಒತ್ತಡ ಬಂದರೂ ಕ್ರಮವಹಿಸಲು ಸಿಬ್ಬಂದಿ ಕೊರತೆ ಇದೆ.
>
> - ಡಾ.ವೆಂಕಟೇಶ್, ಪಾಲಿಕೆ ಆರೋಗ್ಯಾಧಿಕಾರಿ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಒಂದೇ ಸಲ ನಾಲ್ಕು ಹಲ್ಲುಗಳು ಹೇಗೆ ಬಿದ್ದವು?
ರೋಗಿ : ನನ್ನ ಹೆಂಡತಿ ಮಾಡಿದ ಚಕ್ಕುಲಿಯಿಂದ.
ಡಾಕ್ಟರ್ : ಬೇಡ ಅನ್ನಬೇಕಿತ್ತು?
ರೋಗಿ : ತಿಂದಿದ್ದಕ್ಕೆ ಒಂದು ಹಲ್ಲು ಹೋಯಿತು.
ಬೇಡ ಅಂದಿದ್ದಕ್ಕೆ ಮತ್ತೆ ಮೂರು ಹಲ್ಲು ಹೋಯಿತು.

ಮೈಸೂರು ಮಿತ್ರ

ಗುರುವಾರ, 13 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಎದೆ ತಟ್ಟಿ ಹೇಳು ನಾ ಭಾರತೀಯನೆಂದು, ಗರ್ವದಿಂದ ಬಾಳು ನಾ ಕನ್ನಡಿಗನೆಂದು
ಸಾವಿರ ಭಾಷೆ ನಾಲಿಗೆಯಲ್ಲಿರಲಿ, ಕನ್ನಡ ಭಾಷೆ ಹೃದಯದಲ್ಲಿರಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಚ್ಚರ ತಪ್ಪಿ ಮಾತನಾಡಬಾರದು, ಹುಚ್ಚನಂತೆ ವರ್ತಿಸಬಾರದು.

ನಿಮ್ಮ ಪತ್ರಗಳು

ಮೆಟ್ರೋಗಳಲ್ಲಿ ಆಂಟಿ-ಡ್ರ್ಯಾಗ್ ತಂತ್ರಜ್ಞಾನ ಅಗತ್ಯ

ಮಾನ್ಯರೆ,

ಕೊಲ್ಕತ್ತಾ ಮೆಟ್ರೋದಲ್ಲಿ ಸಂಭವಿಸಿದ ಆ ದುರ್ಘಟನೆಯು ದೇಶದ ನಗರ ಸಾರಿಗೆ ಸುರಕ್ಷತೆ ಕುರಿತ ಗಂಭೀರ ಚರ್ಚೆಗೆ ಕಾರಣವಾಯಿತು. 2024ರ ಸೆಪ್ಟೆಂಬರ್ ತಿಂಗಳಲ್ಲಿ ಕೊಲ್ಕತ್ತಾ ಮೆಟ್ರೋದಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಮೆಟ್ರೋ ರೈಲಿಗೆ ಏರಲು ಪ್ರಯತ್ನಿಸುತ್ತಿದ್ದಾಗ ಅವರ ಸೀರೆ ಬಾಗಿಲಿನ ನಡುವೆ ಸಿಕ್ಕಿಕೊಂಡಿತು. ಮೆಟ್ರೋ ರೈಲು ಚಾಲನೆಗೊಂಡ ನಂತರ ಬಾಗಿಲು ಸಂಪೂರ್ಣವಾಗಿ ಮುಚ್ಚಿದರೂ ವ್ಯವಸ್ಥೆ ಆ ಅಡ್ಡಿಯನ್ನೆ ಗುರುತಿಸಲಿಲ್ಲ. ಪರಿಣಾಮವಾಗಿ ಮಹಿಳೆ ಪ್ಲಾಟ್‌ಫಾರ್ಮ್ ಮತ್ತು ರೈಲು ನಡುವಿನ ಅಂತರದಲ್ಲಿ ಎಳೆಯಲ್ಪಟ್ಟು, ಗಂಭೀರ ಗಾಯಗಳಿಂದ ಸ್ಥಳದಲ್ಲೇ ಮೃತಪಟ್ಟರು. ಇನ್ನೊಂದು ಘಟನೆ ದೆಹಲಿಯ ಮೆಟ್ರೋದಲ್ಲಿಯೂ ಸಂಭವಿಸಿ ಅಲ್ಲಿ ಸಹ ಪ್ರಯಾಣಿಕರ ಉಡುಪು ಮತ್ತು ಬ್ಯಾಗ್ ಬಾಗಿಲಿನಲ್ಲಿ ಸಿಕ್ಕಿಕೊಂಡು ಎಳೆಯಲ್ಪಟ್ಟು ಇನ್ನೋರ್ವ ಮಹಿಳೆ ಮೃತಪಟ್ಟರು. ಕೊಲ್ಕತ್ತಾ ಮತ್ತು ದೆಹಲಿಯ ಮೆಟ್ರೋಗಳಲ್ಲಿ ಸಂಭವಿಸಿದ ಇಂತಹ ಘಟನೆಗಳು ನಗರ ಸಾರಿಗೆ ವ್ಯವಸ್ಥೆಗಳಲ್ಲಿ ವಿಶೇಷವಾಗಿ ಬೆಂಗಳೂರು ಮೆಟ್ರೋ (ಬಿಎಂಆರ್‌ಸಿಎಲ್)ದಲ್ಲಿ ಆಂಟಿ-ಡ್ರ್ಯಾಗ್ ತಂತ್ರಜ್ಞಾನ ಅಳವಡಿಸುವ ತುರ್ತು ಅಗತ್ಯವನ್ನು ಸ್ಪಷ್ಟಪಡಿಸುತ್ತವೆ. ಈ ತಂತ್ರಜ್ಞಾನವು ಪ್ರಯಾಣಿಕರ ಸುರಕ್ಷತೆಯ ಅಸ್ತ್ರವಾಗಿದ್ದರೂ, ಅದರ ಮಹತ್ವ ಅದಕ್ಕಿಂತ ಹೆಚ್ಚಿನದು. ಇದು ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದರ ಜೊತೆಗೆ ಕಾರ್ಯಾಚರಣೆಯ ಬುದ್ಧಿವಂತಿಕೆಯನ್ನು ಉತ್ತೇಜಿಸುತ್ತದೆ. ಬಾಗಿಲಿನ ಒತ್ತಡವನ್ನು ಅಳೆಯುವ ಸ್ಮಾರ್ಟ್ ಪ್ರೆಷರ್ ಸೆನ್ಸಾರ್‌ಗಳು, ಅಡ್ಡಿಪಡಿಸುವ ವಸ್ತುಗಳನ್ನು ಗುರುತಿಸುವ ಇನ್ಫ್ರಾರೆಡ್ ಡಿಟೆಕ್ಟರ್‌ಗಳು ಹಾಗೂ ಬಾಗಿಲುಗಳು ಎಲ್ಲ ಪರಿಸ್ಥಿತಿಗಳಲ್ಲಿಯೂ ನಿಖರವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುತ್ತವೆ. ಇದರಿಂದ ಅಪಘಾತಗಳ ಸಂಭವವನ್ನು ಪರಿಣಾಮಕಾರಿಯಾಗಿ ತಡೆಯಬಹುದು. ಈ ವ್ಯವಸ್ಥೆಯನ್ನು ಮೆಟ್ರೋ ರೈಲಿನ ಕೇಂದ್ರ ನಿಗಾ ದಳದೊಂದಿಗೆ ಸಂಪರ್ಕಿಸಿದರೆ ಯಾವುದೇ ಅಸಾಮಾನ್ಯ ಘಟನೆ ಸಂಭವಿಸಿದ ಕ್ಷಣದಲ್ಲಿ ಚಾಲಕರಿಗೆ ತಕ್ಷಣದ ಎಚ್ಚರಿಕೆ ನೀಡಬಹುದು. ಇದರಿಂದ ಮಾನವೀಯ ತಪ್ಪುಗಳ ಪ್ರಮಾಣ ಕಡಿಮೆಯಾಗುತ್ತದೆ ಮತ್ತು ಪ್ರತಿಕ್ರಿಯೆಯ ವೇಗ ಹೆಚ್ಚುತ್ತದೆ. ಇಂತಹ ಬುದ್ಧಿವಂತ ಸುರಕ್ಷತಾ ವ್ಯವಸ್ಥೆಯು ಕೇವಲ ಜೀವ ರಕ್ಷಣೆಗಷ್ಟೇ ಸೀಮಿತವಲ್ಲ. ಇದು ಮೆಟ್ರೋ ಸೇವೆಯ ಮೇಲಿನ ಜನರ ನಂಬಿಕೆ ಮತ್ತು ವಿಶ್ವಾಸವನ್ನು ಗಟ್ಟಿಗೊಳಿಸುತ್ತದೆ. ಬಿಎಂಆರ್‌ಸಿಎಲ್ ಈ ತಂತ್ರಜ್ಞಾನವನ್ನು ಹಂತ ಹಂತವಾಗಿ ಎಲ್ಲ ಮೆಟ್ರೋ ರೈಲುಗಳಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕು, ಸಿಬ್ಬಂದಿಗೆ ನವೀಕೃತ ತರಬೇತಿ ನೀಡಬೇಕು ಹಾಗೂ ಜನರಲ್ಲಿ ಸುರಕ್ಷತಾ ಜಾಗೃತಿಯನ್ನು ವಿಸ್ತರಿಸಲು ಅಭಿಯಾನಗಳನ್ನು ಆರಂಭಿಸಬೇಕು.

-ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಮೈಸೂರಿಗೆ ಫ್ಲೈ ಓವರ್‌ಗಳ ಅವಶ್ಯಕತೆ ಇಲ್ಲ

ಮಾನ್ಯರೆ,

ದೇಶದಲ್ಲೇ ಪಾರಂಪರಿಕ ಹಾಗೂ ಸುಂದರ ನಗರವೆಂದೇ ಹೇಳಲಾಗುವ ಮೈಸೂರು ನಗರದ ವಿನೋಬಾ ರಸ್ತೆಯಿಂದ ಹಿನಕಲ್‌ವರೆಗೆ ಹಾಗೂ ರೈಲ್ವೆ ನಿಲ್ದಾಣದಿಂದ ಜೆ.ಎಲ್.ಬಿ ರಸ್ತೆಯ ಮುಖಾಂತರ ನಂಜನಗೂಡು ಮುಖ್ಯ ರಸ್ತೆಯವರೆಗೆ ಮೇಲ್ಸೇತುವೆ (ಫ್ಲೈ ಓವರ್) ಅನ್ನು ನಿರ್ಮಾಣ ಮಾಡಲು ಹೊರಟಿರುವುದು ಸರ್ಕಾರದ ತೀವ್ರ ಅವೈಜ್ಞಾನಿಕ ನಿರ್ಧಾರ.

ಸದ್ಯಕ್ಕಂತೂ ಮೈಸೂರು ನಗರದಲ್ಲಿ ಈ ಫ್ಲೈ ಓವರ್‌ಗಳ ಅವಶ್ಯಕತೆ ಇಲ್ಲವೆಂದು ಸುಂದರ ನಗರವನ್ನು ಕಾಂಕ್ರೀಟ್ ಚಾವಣಿಯನ್ನಾಗಿ ಮಾಡಬಾರದು ಎಂದು ಸ್ಥಳೀಯ ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಮೈಸೂರಿನ ಅನೇಕ ಪ್ರಮುಖರು ಈ ಫ್ಲೈ ಓವರ್ ನಿರ್ಮಾಣಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಹಲವಾರು ಪ್ರಗತಿಪರ ಸಂಘಟನೆಗಳು ಸಹ ಮೈಸೂರು ಮೈಸೂರಾಗಿರಲಿ ಎಂಬ ಅಭಿಯಾನವನ್ನೇ ಪ್ರಾರಂಭ ಮಾಡಿದ್ದಾರೆ. ಇಷ್ಟೆಲ್ಲದರ ನಡುವೆಯೂ ಜಿಲ್ಲಾಡಳಿತ ಈ ಭಾಗದ ರಸ್ತೆಗಳ ಮಣ್ಣು ಪರೀಕ್ಷೆ ನಡೆಸುತ್ತಿರುವುದು ಜನಪ್ರತಿನಿಧಿಗಳ ಮತ್ತು ಸಾರ್ವಜನಿಕರ ಅಭಿಪ್ರಾಯಕ್ಕೆ ಬೆಲೆ ಇಲ್ಲದಂತಾಗಿದೆ. ಸರ್ಕಾರ ಜನಪ್ರತಿನಿಧಿಗಳ ಮತ್ತು ಸಾರ್ವಜನಿಕರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಈ ಫ್ಲೈ ಓವರ್‌ಗಳ ನಿರ್ಮಾಣವನ್ನು ಕೈಬಿಟ್ಟು ಮೈಸೂರು ಮೈಸೂರಾಗಿರುವಂತೆ ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸ್ಮಶಾನದ ಒತ್ತುವರಿ ಜಾಗ ತೆರವುಗೊಳಿಸಿ

ಮಾನ್ಯರೆ,

ಮೈಸೂರು ಜಿಲ್ಲೆ ಎಚ್ ಡಿ ಕೋಟೆ ತಾಲೂಕಿಗೆ ಸೇರಿದ ಹೈರಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಮಲಾರ ಕಾಲೋನಿ ಗ್ರಾಮವು ಒಂದು ಸ್ವಚ್ಛಭರಿತ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರು ಹೆಚ್ಚಾಗಿ ವಾಸ ಮಾಡುತ್ತಿದ್ದಾರೆ. ಸರ್ವೇ ನಂಬರ್ 1ರಲ್ಲಿ ಬೆಳಗನಹಳ್ಳಿ ಕಾವಲ್ 2010-11ರಲ್ಲಿ RTC ಸ್ಕೆಚ್ ಆಗಿದೆ. ಸುಮಾರು 1 ಎಕರೆ ಐದು ಗುಂಟೆ ಸ್ಮಶಾನದ ಜಾಗವಿದ್ದು, ಅಕ್ಕ ಪಕ್ಕದವರು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಗ್ರಾಮದ ಸಾರ್ವಜನಿಕರಿಗೆ ಸಾವುಗಳು ಬಂದರೆ ಶವಸಂಸ್ಕಾರ ಮಾಡಲು ಜಾಗವಿಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗ್ರಾಮದಲ್ಲಿ ಬಡ ಕುಟುಂಬದ ಜನರು ಹೆಚ್ಚಾಗಿ ವಾಸ ಮಾಡುತ್ತಿದ್ದಾರೆ. ಕೆಲವು ಜನರಿಗೆ ಜಮೀನು ಇದ್ದು ಇವರು ತಮ್ಮ ಜಮೀನಿನಲ್ಲಿ ಶವ ಸಂಸ್ಕಾರ ಮಾಡುತ್ತಾರೆ. ಇನ್ನು ಕೆಲವು ಜನರಿಗೆ ಜಮೀನು ಇಲ್ಲದೆ ಶವ ಸಂಸ್ಕಾರ ಮಾಡಲು ಜಾಗವಿಲ್ಲದೆ ಪರದಾಡುತ್ತಿದ್ದಾರೆ. ಈ ವಿಚಾರವನ್ನು ಸಂಬಂಧಪಟ್ಟ ತಾಲೂಕು ಕಚೇರಿಗೆ ಗ್ರಾಮಸ್ಥರು ಮನವಿ ಮಾಡಿದರೂ ಇನ್ನು ಯಾವುದೇ ಕೆಲಸ ಕಾರ್ಯ ಆಗಿಲ್ಲ. ಆದುದರಿಂದ ಈ ವಿಚಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರು, ಸಂಸದರು, ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಗಂಭೀರವಾಗಿ ಪರಿಗಣಿಸಿ ಮಲಾರಾ ಕಾಲೋನಿ ಗ್ರಾಮಕ್ಕೆ ಶವಸಂಸ್ಕಾರ ಮಾಡಲು ಒತ್ತುವರಿ ಆಗಿರುವ ಜಾಗವನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

-ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್. ಡಿ. ಕೋಟೆ ತಾ.

ರೈತರ ಸಂಕಷ್ಟಗಳಿಗೆ ಸರ್ಕಾರಗಳು ಸ್ಪಂದಿಸಲಿ

ಮಾನ್ಯರೆ,

ರೈತ ನಮ್ಮೆಲ್ಲರಿಗೂ ಅನ್ನ ಹಾಕುವ ಅನ್ನದಾತ. ರೈತನ ಆತ್ಮಹತ್ಯೆಗೆ ಬೆಲೆ ಇಲ್ಲದಂತಾಗಿದೆ. ಕಾಡಂಚಿನ ಗ್ರಾಮಗಳ ರೈತ ಮತ್ತು ಪ್ರಾಣಿಗಳ ಸಂಘರ್ಷಗಳಿಂದ ಸಾವುಗಳು ಸಂಭವಿಸುತ್ತಲೇ ಇವೆ. ಮಂಡ್ಯದಲ್ಲಿ ರೈತನೊಬ್ಬ, ಅಧಿಕಾರಿಗಳು ಜಮೀನಿನ ವಿವಾದವನ್ನು ಬಗೆಹರಿಸಲಿಲ್ಲವೆಂದು ಆತ್ಮಹತ್ಯೆಗೆ ಯತ್ನಿಸಿ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ. ಬಾಳೆಗೆ ಬೆಂಕಿ ರೋಗ ತಗುಲಿದೆ ಎಂದು ಬಾಳೆಗೆ ಸಿಂಪಡಿಸುವ ರಾಸಾಯನಿಕ ಕಾಳುಗಳನ್ನು ಸೇವಿಸಿ ಆತ್ಮಹತ್ಯೆಗೆತ್ನಿಸಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಸೂಕ್ತ ಬೆಲೆ ಸಿಗಲಿಲ್ಲವೆಂದು 7ನೇ ದಿನವೂ ರೈತರ ಹೋರಾಟ ಮುಂದುವರಿದಿದೆ. ರಾಜ್ಯದ ಮೂಲೆ ಮೂಲೆಯಲ್ಲೂ ಇಂತಹ ಘಟನೆಗಳು ನಡೆಯುತ್ತಲೇ ಇದ್ದರೂ ಸರ್ಕಾರಗಳು ಸ್ಪಂದಿಸುತ್ತಿಲ್ಲ.

-ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಪುಸ್ತಕಲೋಕಕ್ಕೆ ಬಾ ಪುಟಾಣಿ

ನಾವು ಮಲೆನಾಡಿನ ಒಂದು ಪುಟ್ಟ ಹಳ್ಳಿಯಲ್ಲಿ ವಾಸವಾಗಿದ್ದೆವು. ಹೋಬಳಿ ಮಟ್ಟದ ಊರಾಗಿದ್ದ ಅಲ್ಲಿ ಇದ್ದದ್ದು ಒಂದೇ ಪುಸ್ತಕದ ಅಂಗಡಿ. ಬಾಳಿಗರ ಪುಸ್ತಕದ ಅಂಗಡಿ ಎಂದರೆ ನೀವು ಕಲ್ಪಿಸಿಕೊಳ್ಳುವ Book Store ಅಲ್ಲ! ಅದೊಂದು ಸ್ಟೇಷನರಿ ಅಂಗಡಿ!. ಆದರೆ ಅಲ್ಲಿ ಮಾತ್ರ ನಮಗೆ ಚಂದಮಾಮ, ಬಾಲಮಿತ್ರ, ಬಾಲಮಂಗಳ, ಮಯೂರ, ತುಷಾರ ದೊರೆಯುತ್ತಿದ್ದವು. ಊರಲ್ಲಿ ಗ್ರಂಥಾಲಯ ಇತ್ತಾದರೂ, ಅಲ್ಲಿಗೆ ಮಕ್ಕಳ ಪತ್ರಿಕೆಗಳು ಬರುತ್ತಿರಲಿಲ್ಲ.

ಆದರೆ ಆ ಪುಸ್ತಕಗಳ ಬರುವಿಕೆಗಾಗಿ ನಾವು ತಪಸ್ಸನ್ನೇ ಮಾಡುತ್ತಿದ್ದೆವು ಎಂದರೆ ತಪ್ಪಾಗಲಾರದು. ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದ್ದ ಊರಾದರೂ, ಯಾವ ಪತ್ರಿಕೆಗಳೂ ಸರಿಯಾದ ಸಮಯಕ್ಕೆ ಬರುತ್ತಿರಲಿಲ್ಲ. ತಿಂಗಳ ಕೊನೆಯ ವಾರದಿಂದ ಅವರ ಅಂಗಡಿಗೆ ದಾಳಿ ಇಡಲು ಮೊದಲು ಮಾಡುತ್ತಿದ್ದೆವು. ತಿಂಗಳಲ್ಲಿ ಎರಡು ಬಾರಿ ಬರುತ್ತಿದ್ದ ಬಾಲಮಂಗಳಕ್ಕಾಗಿ ನಮ್ಮದು ಬೇರೆಯದೇ ಭೇಟಿಯ ಸಮಯವಿದ್ದರೆ, ಮಾಸ ಪತ್ರಿಕೆಗಳಾದ ಮಯೂರ, ತುಷಾರ, ಚಂದಮಾಮ, ಬಾಲಮಿತ್ರಗಳಿಗೆ ಬೇರೆಯದೇ ಕಾಡುವ ಸಮಯ!

ಶಾಲೆಗೆ ಹೊರಟಾಗ, ಊಟದ ವಿರಾಮವಿದ್ದಾಗ. ಶಾಲೆ ಬಿಟ್ಟಾಗ, ಸಂಜೆ ಒಮ್ಮೆ ಹೀಗೆ ಬಾಳಿಗರನ್ನು ಕಾಡಿ ಬಿಡುತ್ತಿದ್ದೆವು. ನಮ್ಮ ಕಾಟವನ್ನು ಪ್ರೀತಿಯಿಂದಲೇ ಸೈರಿಸಿಕೊಂಡು ನಗುಮೊಗದಿಂದ ನಮ್ಮನ್ನು ಸಂಭಾಳಿಸುತ್ತಿದ್ದ ಅವರನ್ನು ನೆನೆಸಿಕೊಂಡರೆ ಈಗಲೂ ಒಂದು ಮಧುರ ಭಾವ. ಮಯೂರದಲ್ಲಿ ಪುಟ್ಟ-ಪುಟ್ಟ ಮಕ್ಕಳ ಕತೆ ಇರುತ್ತಿದ್ದರಿಂದ ತುಷಾರಕ್ಕಿಂತಾ ಅದಕ್ಕೆ ಹೆಚ್ಚು ಬೇಡಿಕೆ ನಮ್ಮದು. ಇನ್ನು ಬಾಲಮಂಗಳದ ಡಿಂಗ, ಲಂಬೋದರ, ಫಕ್ರು ಹಿಡಿಸಿದ್ದ ಹುಚ್ಚೇ ಬೇರೆ. ಇವೆಲ್ಲವಕ್ಕಿಂತಾ ಒಂದು ಕೈ ಮೇಲೆ, ಚಂದಮಾಮದ ಸ್ಥಾನ!

ಅದರಲ್ಲಿನ ಬೇತಾಳದ ಕತೆಗಳು, ನಿಮಗಿದು ತಿಳಿದಿರಲಿ, ಧಾರಾವಾಹಿಗಳು, ಪುಟ್ಟಕತೆಗಳು ಜೊತೆಗೆ ಸುಂದರ ಚಿತ್ರಗಳು ನಮ್ಮನ್ನು ಕೊಂಡೊಯ್ಯುತ್ತಿದ್ದ ಲೋಕದೆಡೆಗಿನ ಪ್ರಯಾಣ ಮಧುರಾತಿಮಧುರ. ತುಂತುರು ಚಂಪಕಗಳು ನಮಗೆ ಅಷ್ಟಾಗಿ ಸಿಗುತ್ತಿರಲಿಲ್ಲ.

ಕೆಲವು ವರ್ಷಗಳ ಹಿಂದೆ ಚಂದಮಾಮ, ಬಾಲಮಿತ್ರ, ಬಾಲಮಂಗಳ ಪತ್ರಿಕೆಗಳು ನಿಂತುಹೋದಾಗ, ಅನುಭವಿಸಿದ ನೋವನ್ನು ವರ್ಣಿಸಲು ಪದಗಳಿಲ್ಲ. ಒಂದು ಮನೋಹರ ರಮ್ಯ ಯುಗದ ಅಂತ್ಯವಾಯಿತಲ್ಲ ಎಂಬ ಖೇದ ಬಹಳ ಕಾಡಿತು.

ಕನ್ನಡದ ಓದು ಪ್ರಪಂಚದಲ್ಲಿ ಹಾಗೆಯೇ ಒಂದು ಸುತ್ತು ಹಾಕಿದಾಗ, ಮಕ್ಕಳ ಪತ್ರಿಕೆಗಳ ಸ್ಥಿತಿಗತಿ ಶೋಚನೀಯವಾಗಿರುವುದು ನೋಡಿ ಬಹಳ ಬೇಸರವಾಯಿತು. ಕೋವಿಡ್‌ವರೆಗೂ ಹೇಗೋ ದಮ್ಮುಗಟ್ಟಿ ಉಸಿರಾಡುತ್ತಿದ್ದ ಬಹಳಷ್ಟು ಕನ್ನಡ ಮಕ್ಕಳಪತ್ರಿಕೆಗಳು, ನಂತರ ಕೊನೆಯುಸಿರೆಳೆದವು. ಕೋವಿಡ್‌ನ ಸಮಯದಲ್ಲಿ ಅನಿವಾರ್ಯವಾಗಿ ಫೋನ್‌ಗಳು ಮಕ್ಕಳ ಕೈಗೆ ಬಂದದ್ದಷ್ಟೇ ಅಲ್ಲ, ಮಕ್ಕಳಿಗೇ ಒಡೆತನ ಸಿಕ್ಕಿದ್ದು ಓದು ಸಂಸ್ಕೃತಿಯ ಮೇಲೆ ಆದ ವಜ್ರಾಘಾತ.

ಆದರೆ ಕನ್ನಡದಲ್ಲಿ ಮಕ್ಕಳ ಪತ್ರಿಕೆಗೆ ಒಂದು ಇತಿಹಾಸವೇ ಇದೆ, ಕನ್ನಡ ಸಾಹಿತ್ಯ ಪ್ರಭೃತಿಗಳು ಅದಕ್ಕಾಗಿ ತಮ್ಮ ನಿಸ್ಪೃಹ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾದೀತು.

ಹೌದು, ಅನಕೃ ಅವರು ಮಕ್ಕಳ ಸಾಹಿತ್ಯದ ಬಗ್ಗೆ ಅದು ಬೇರೆಯೇ ಡಿಪಾರ್ಟ್ಮೆಂಟ್ ಎಂದು ಹೇಳಿದ್ದರಾದರೂ, ಮುಂದೆ ಗಂಭೀರ ಸಾಹಿತ್ಯದ ಓದಿಗೆ ತೊಡಗಬಲ್ಲ ಓದುಗನನ್ನು ಮೊಳಕೆಯ ಮಟ್ಟದಲ್ಲಿಯೇ ಗುರುತಿಸಿ, ನೀರೆರೆದು ಪೋಷಿಸಬೇಕು ಎಂದು, ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ ಆ ನಿಟ್ಟಿನಲ್ಲಿ ದುಡಿದ ಮಹನೀಯರು ಬಹಳಷ್ಟಿದ್ದಾರೆ. ಮಕ್ಕಳಲ್ಲಿ ಸಹೃದಯತೆ, ಕರುಣೆ, ಗೌರವ, ಸೃಜನಶೀಲತೆ, ಸೌಜನ್ಯಗಳಂತಹ ಅತಿಮುಖ್ಯ ಮೌಲ್ಯಗಳನ್ನು ಬೆಳೆಸಲು ಸಾಹಿತ್ಯದ ಓದಿಗಿಂತಾ ಉತ್ತಮ ಮಾರ್ಗ ಮತ್ತೊಂದಿಲ್ಲ.

ಮುದ್ರಣದ ಆವಿಷ್ಕಾರವಾಗಿ ಅದು ಭಾರತಕ್ಕೂ ಕಾಲಿಟ್ಟು; ಕತೆ, ಕಾದಂಬರಿ, ವೃತ್ತಪತ್ರಿಕೆಗಳು ಬರಲಾರಂಭಿಸಿದ ಮೇಲೆ ಮಕ್ಕಳಿಗೂ ಓದುವಂಥದ್ದೇನಾದರನ್ನು ಕೊಡಬೇಕೆಂದು ಯೋಚಿಸಿದ ಕೆಲವು ಮೊದಲಿಗರಲ್ಲಿ, ದೇವುಡು ಅವರೂ ಒಬ್ಬರು. ಹೌದು! ಮಹಾದರ್ಶನ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಅಂತಹ ಸಾರ್ವಕಾಲಿಕ ಶ್ರೇಷ್ಠ ಉತ್ಕೃಷ್ಟ ಕೃತಿಗಳನ್ನು ಬರೆದ ದೇವುಡು ಅವರೇ! ಮಕ್ಕಳಿಗಾಗಿ ಪುರಾಣದ ಕತೆಗಳ ಸಾರ ಸಂಗ್ರಹ ಪುಸ್ತಕಗಳನ್ನೂ ಹೊರತಂದರು.

1935ರಲ್ಲಿ ಅವರು ಪ್ರಾರಂಭಿಸಿದ ನಮ್ಮ ಪುಸ್ತಕ ಅತ್ಯಂತ ಜನಪ್ರಿಯವಾಗಿತ್ತು. ನಾಲ್ಕಾಣೆಯಿಂದ ಪ್ರಾರಂಭವಾಗಿ 3 ರೂಪಾಯಿವರೆಗೂ ಬೆಲೆ ಏರಿಕೆ ಕಂಡ ಈ ಪತ್ರಿಕೆ, ಮಕ್ಕಳನ್ನು ಸದ್ಗುಣಶೀಲರನ್ನಾಗಿ ಮಾಡಲು ಸಹಾಯಕವಾಗುವಂತಹ ಎಲ್ಲವನ್ನೂ ಒಳಗೊಂಡಿತ್ತು. ಸಚಿತ್ರಕಥೆ, ಚುಕ್ಕಿ ಚಿತ್ರ, ವಿಜ್ಞಾನ, ವ್ಯಕ್ತಿ ಪರಿಚಯ ಮಾತ್ರವಲ್ಲದೆ, ಮಕ್ಕಳ ತಾಯಂದಿರಿಗೆ ಮತ್ತು ಉಪಾಧ್ಯಾಯರಿಗೂ ಕಿವಿಮಾತುಗಳಿರುತ್ತಿದ್ದವು. 5 ಕನ್ನಡದ ಅಕ್ಷರಗಳನ್ನು ಬಳಸಿಕೊಂಡು ಎಲ್ಲ ಅಕ್ಷರಗಳನ್ನೂ ಬರೆಯುವ ನೂತನ ವಿಧಾನವೊಂದನ್ನು ಆವಿಷ್ಕರಿಸಿ, ತಾವೇ ಸ್ವತಃ ಶಾಲೆಗಳಿಗೆ ಭೇಟಿನೀಡಿ ವಿದ್ಯಾರ್ಥಿವೃಂದ ಮತ್ತು ಶಿಕ್ಷಕರಲ್ಲಿ ಆಸಕ್ತಿ ಮೂಡಿಸಲು ಶ್ರಮಿಸಿದರು. 25 ಸುದೀರ್ಘ ವರ್ಷಗಳ ಕಾಲ ಈ ಮಕ್ಕಳ ಪತ್ರಿಕೆಯನ್ನು ನಡೆಸಿದ ಕೀರ್ತಿ ದೇವುಡು ಅವರಿಗೆ ಸಲ್ಲಬೇಕು.



> ಓದು ಮನುಷ್ಯನಿಗೆ ಏಕೆ ಬೇಕು ಎಂಬುದನ್ನು ಹೊಸದಾಗಿ ಮತ್ತೆ ಹೇಳುವ ಅಗತ್ಯವಿಲ್ಲ. ಮಕ್ಕಳ ದಿನಾಚರಣೆಗೆ ಮಕ್ಕಳಿಗೆ ಉಡುಗೊರೆ ಕೊಡುವುದೇ ಆದರೆ, ಓದುವ ಹವ್ಯಾಸದಂತಹ ಮೌಲ್ಯಯುತ ರೂಢಿ ಮಾಡಿಸುವ ಪಣ ತೊಡೋಣ. ಇದರಿಂದ ಮಕ್ಕಳ ಜೀವನ ಹಸನಾಗಿ ಅವರ ಭವಿಷ್ಯ ಭದ್ರವಾಗುತ್ತದೆ.

ಆರ್.ಕಲ್ಯಾಣಮ್ಮ ಕನ್ನಡ ನಾಡು ಕಂಡ ಶ್ರೇಷ್ಠ ಸಂಘಟಕಿ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಮಕ್ಕಳ ಕೂಟದ ಜವಾಬ್ದಾರಿ ವಹಿಸಿಕೊಂಡ ಮೇಲೆ, ಮಕ್ಕಳ ಬಾವುಟ ಮತ್ತು ಸರಸ್ವತಿ ಎಂಬ ಪತ್ರಿಕೆಗಳನ್ನು ತಂದರು. ಮಕ್ಕಳಕೂಟದಿಂದಲೇ, ಟಿಎಂಆರ್ ಸ್ವಾಮಿ ಅವರಿಗೆ, ಕನ್ನಡಿಗರ ಕಣಜ ಎಂಬ ಪತ್ರಿಕೆಯನ್ನು ತರಲು ನೆರವಾದರು. ಧಾರವಾಡದ ಈಶ್ವರ ಕಮ್ಮಾರರ ಮಕ್ಕಳ ಮಂದಿರ ಪತ್ರಿಕೆ ಜನಪ್ರಿಯವಾಗಿತ್ತು. ಸಿಸು ಸಂಗಮೇಶರ ಹೆಸರನ್ನು ಕನ್ನಡಿಗರು ಗುರುತಿಸದೇ ಇರಲಾರರು. ಅವರು ಪ್ರಾರಂಭಿಸಿ ನಡೆಸಿದ ಬಾಲ ಭಾರತಿ ನಾಲ್ಕು ವರ್ಷಗಳ ಕಾಲ ನಡೆಯಿತು. ಚಿಗುರು ಎಂಬ 35 ಪುಟಗಳ ಮಕ್ಕಳ ಪತ್ರಿಕೆ ಬೆಂಗಳೂರಿನಿಂದ ಪ್ರಕಟವಾಗುತ್ತಿತ್ತು. ಪುಟಾಣಿ, ಪಾಪಚ್ಚಿ ಪತ್ರಿಕೆಗಳೂ ಸ್ವಲ್ಪದಿನಗಳ ಕಾಲ ನಡೆದು ನಿಂತುಹೋದವು. ಬೆಂಗಳೂರಿನಿಂದಲೇ ಮತ್ತೊಂದು ಅಲ್ಪಾಯುಷಿ, ಆದರೆ ಭರವಸೆ ಮೂಡಿಸಿದ್ದ ಪತ್ರಿಕೆಯೆಂದರೆ, 'ಅಂಗಳ'.

ಶಿವಮೊಗ್ಗೆಯ ಮಕ್ಕಳ ಮಂಟಪ, ದಕ್ಷಿಣ ಕನ್ನಡದ ಸಿಂಫನಿ, ಹೊನ್ನಾವರದ ಸಂಜೀವಿನಿ, ರಾಣೆಬೆನ್ನೂರಿನ ಯಶಸ್ವಿನಿ ಭರವಸೆ ಮೂಡಿಸಿದ ಮತ್ತಷ್ಟು ಮಕ್ಕಳ ಪತ್ರಿಕೆಗಳು. ಗುಬ್ಬಚ್ಚಿಗೂಡು ಕೂಡ 10 ವರ್ಷಗಳನ್ನು ಪೂರೈಸಿ ಕೋವಿಡ್ ಸಮಯದಲ್ಲಿ ಸಂಕಷ್ಟಕ್ಕೆ ಸಿಲುಕಿದರೂ ಮುನ್ನಡೆಯುತ್ತಿದೆ. ಮಕ್ಕಳ ವಿಜ್ಞಾನ ಮಾಸಪತ್ರಿಕೆ, ಜನಪ್ರಿಯ ವಿಜ್ಞಾನ ಮತ್ತು ಟೀಚರ್ ನಂತಹ ಹಲವು ಪತ್ರಿಕೆಗಳು ಇಂದಿಗೂ ಮಕ್ಕಳ ಬುದ್ಧಿಮತ್ತೆ ಚುರುಕುಗೊಳಿಸುವ ಹಂದರವನ್ನು ಹೊಂದಿವೆ.

ಓದಿನ ತಾಣವಾಗಿರುವ ಶಾಲೆಯೊಂದು ಮಕ್ಕಳ ಕೈಲೇ ಪತ್ರಿಕೆ ಬರೆಸಿ ಬಿಡುಗಡೆ ಮಾಡುವುದನ್ನು 2008ರಿಂದ ಆರಂಭಿಸಿದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಲ್ಕಾಪುರ ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳು, ಮಕ್ಕಳ ಮಂದಾರ ಎಂಬ ಕೈಬರಹದ ಪತ್ರಿಕೆಯನ್ನು ತರುತ್ತಿದ್ದಾರೆ ಎಂಬುದು ಹೆಮ್ಮೆಯ ವಿಷಯ. ಇದರ ರೂವಾರಿಯಾದ ರವಿಚಂದ್ರ ಎಂಬ ಶಿಕ್ಷಕರಿಗೆ ಅಭಿನಂದನೆ ಸಲ್ಲಬೇಕು. ಹಾಗೆಯೇ, ಮಕ್ಕಳೇ ನಡೆಸಿದ ಒಂದಷ್ಟು ಪತ್ರಿಕೆಗಳೂ ಬಂದಿವೆ. ತೀರ್ಥಹಳ್ಳಿಯ ಮುದ್ದು ಹೊರತಂದ 'ಮಂದಾನಿಲ', ಹಾಸನದ ಒಂದಷ್ಟು ಮಕ್ಕಳು ಸೇರಿ ಮಾಡಿದ 'ಪ್ರೇರಣಾ', 'ಮಿಂಚು' ಪ್ರಶಂಸನೀಯ ಕಾರ್ಯವಲ್ಲವೆ?

ಈ ಎಲ್ಲ ಪತ್ರಿಕೆಗಳಲ್ಲಿ ಬಹುತೇಕ ಪತ್ರಿಕೆಗಳು ಇಂದು ಲಭ್ಯವಿಲ್ಲ. ಇದಕ್ಕೆ ಕಾರಣ ಬಹುಶಃ ನಮಗೆಲ್ಲಾ ತಿಳಿದೇ ಇದೆ. ಅದನ್ನು ಚರ್ಚಿಸುವುದು ಬೇಡ. ಪತ್ರಿಕೆಯ ವಿಷಯ ಇದಾದರೆ, ಕನ್ನಡದಲ್ಲಿ ಬಹಳಷ್ಟು ಹಿರಿಯ ಲೇಖಕರು ಮಕ್ಕಳಿಗಾಗಿ ಪ್ರೀತಿಯಿಂದ ಬರೆದಿದ್ದಾರೆ.

ನಮ್ಮ ಜಿ ಪಿ ರಾಜರತ್ನಂ ಅವರ ಪದ್ಯಗಳಿಲ್ಲದೆ ನಮ್ಮ ಬಾಲ್ಯವಿಲ್ಲ ಎಂಬುದು 100% ನಿಜ. ರಾಜರತ್ನಂ, ಪಂಜೆ ಮಂಗೇಶರಾಯ ಮತ್ತು ಹೊಯಿಸಳ ಇವರುಗಳನ್ನು ಕನ್ನಡ ಮಕ್ಕಳ ಸಾಹಿತ್ಯದ ರತ್ನತ್ರಯರು ಎನ್ನುತ್ತಾರೆ. ಮುಪ್ಪಿನ ಷಡಕ್ಷರಿ ಅವರ 'ಗೋವಿನ ಹಾಡು', 'ತಿರುಕನ ಕನಸು' ಪದ್ಯಗಳು ಹುಟ್ಟಿಸಿದ ಭಾವ, ಕಲಿಸಿದ ಪಾಠ ಇಂದಿಗೂ ಸ್ಮರಣೀಯ. ಬೇಂದ್ರೆ ಅವರ 'ಕರಡಿಕುಣಿತ' ಸೊಗಸಾದ ಪದ್ಯ. ಇವರ ಜೊತೆ ಪಳಕಳಸೀತಾರಾಮಭಟ್ಟ, ಸಿದ್ಧಯ್ಯ ಪುರಾಣಿಕರು, ಮೇವುಂಡಿ ಮಲ್ಲಾರಿ, ಎಲ್ ಗುಂಡಪ್ಪ, ಎಂ ವಿ ಸೀತಾರಾಮಯ್ಯ, ದಿನಕರ ದೇಸಾಯಿ, ರಸಿಕ ಪುತ್ತಿಗೆ, ಕಂಚ್ಯಾಣಿ ಶರಣಪ್ಪ, ಟಿ ಎಸ್ ನಾಗರಾಜಶೆಟ್ಟಿ, ಸಿಂಪಿ ಲಿಂಗಣ್ಣ, ಎಚ್ ವೈ ಸರಸ್ವತಮ್ಮ, ಭಾರತೀಸುತ, ಇವರೆಲ್ಲ ಮೊದಲ ತಲೆಮಾರಿನ ಮಕ್ಕಳ ಸಾಹಿತಿಗಳು.ಬೇರೆ ಬೇರೆ ಪ್ರಕಾರಗಳನ್ನು ರೂಢಿಸಿಕೊಂಡಿದ್ದ ಕನ್ನಡಸಾಹಿತ್ಯದ ಮೇರುಗಳೂ ಮಕ್ಕಳಿಗಾಗಿ ಬರೆದರು.

ಕುವೆಂಪು ಅವರ ಕಿಂದರಿ ಜೋಗಿ ಪದ್ಯ ಎಷ್ಟು ಆಪ್ತ ನಾ ಡಿಸೋಜಾ ಅವರ ಮಕ್ಕಳ ಕತೆಗಳು ಎಲ್ಲ ಪತ್ರಿಕೆಗಳಲ್ಲೂ ಇರುತ್ತಿದ್ದವು, ಕಾರಂತರಂತೂ ಮಕ್ಕಳಲ್ಲಿ ಜ್ಞಾನದ ಹಸಿವನ್ನು ಹೆಚ್ಚಿಸಿ ಅದನ್ನು ತಣಿಸುವ ಪ್ರಯತ್ನವನ್ನು ವರ್ಷಗಟ್ಟಲೆ ಮಾಡಿದರು, ಬಾಲವನವನ್ನೇ ಸೃಷ್ಟಿಸಿಬಿಟ್ಟರು. ಅನುಪಮಾ ನಿರಂಜನರ ದಿನಕ್ಕೊಂದು ಕಥೆ ಪುಸ್ತಕದ ಸಂಪುಟಗಳು ಮಕ್ಕಳ ಮುಗ್ಧ ಮನೋಲೋಕಕ್ಕೆ ಶುದ್ಧ ರಂಜನೆಯನ್ನು ಇತ್ತವು. ಎಚ್ ಎಸ್ ವೆಂಕಟೇಶಮೂರ್ತಿ ಅವರು ಮಕ್ಕಳಿಗಾಗಿ ಕವನ, ಕತೆ, ನಾಟಕಗಳನ್ನು ಬರೆದರು. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರು ಚಂದದ ಕವನಗಳನ್ನು ಮಕ್ಕಳಿಗಾಗಿ ಬರೆದರು, ಭಾಳ ಒಳ್ಳೇರ್ ನಮ್ಮಿಸ್ಸು ನೆನಪಾಯಿತೇ ಎನ್ ಶ್ರೀನಿವಾಸ ಉಡುಪರ 'ಕುಂಭಕರ್ಣನ ನಿದ್ರೆ' ಎಂತಹಾ ಸ್ವಾರಸ್ಯಕರ ಕಥನ ಕವನ.

ಮಕ್ಕಳಿಗಾಗಿ ನಾಟಕ ಬರೆದವರ ಸಂಖ್ಯೆ ಕಡಿಮೆ ಏನಿಲ್ಲ. ನಾರಾಯಣಸ್ವಾಮಿ, ಚಿ ಸದಾಶಿವಯ್ಯ, ಕಾರಂತ, ರಾಜರತ್ನಂ, ಬೆಂಶ್ರೀ ಪಾಂಡುರಂಗರಾಯರು, ಎಂ ಎಸ್ ಪುಟ್ಟಣ್ಣ, ಕೀರ್ತಿನಾಥ ಕುರ್ತಕೋಟಿ, ವೈದೇಹಿ, ಅಬ್ದುಲ್ ರೆಹಮಾನ್ ಪಾಷಾ ಇವರೆಲ್ಲರೂ ನಾಟಕಗಳ ಮೂಲಕ ಮಕ್ಕಳನ್ನು ತಲುಪಿದವರು.

ಮಕ್ಕಳಿಗಾಗಿ ರೋಚಕ, ರಮ್ಯ, ಐತಿಹಾಸಿಕ, ಪೌರಾಣಿಕ, ವೈಜ್ಞಾನಿಕ, ಪತ್ತೇದಾರಿ ಕಾದಂಬರಿಗಳನ್ನು ಪ್ರೀತಿಯಿಂದ ಬರೆದವರು, ರಸಿಕಪುತ್ತಿಗೆ, ಎಚ್ ಎಸ್ ವಿ, ಬಿ ಎಲ್ ವೇಣು, ಟಿ ಕೆ ರಾಮರಾವ್, ಆರ್ ವಿ ಭಂಡಾರಿ, ಗೀತಾ ಕುಲಕರ್ಣಿ, ರಾಜಶೇಖರ ಭೂಸನೂರಮಠ, ಅಡಿಗರು! ಇನ್ನು ಇಂಗ್ಲಿಷ್ನ ಅತ್ಯುತ್ತಮ ಮಕ್ಕಳ ಕಾದಂಬರಿಗಳನ್ನು ಕನ್ನಡಕ್ಕೆ ತಂದವರೂ ಇದ್ದಾರೆ. ನಾ ಕಸ್ತೂರಿ, ಎನ್ ಪ್ರಹ್ಲಾದ್ ರಾವ್, ವಾಸುದೇವ ರಾವ್ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇನ್ನು ಈಗ ವರ್ತಮಾನಕ್ಕೆ ಬಂದರೆ, ಆನಂದ ವಿ ಪಾಟೀಲ, ತಮ್ಮಣ್ಣ ಬೀಗಾರ, ಬೇದ್ರೆ ಮಂಜುನಾಥ, ಬಿ ಕೆ ಮೀನಾಕ್ಷಿ, ಹಂದಿಹಾಳು ಶಿವಲಿಂಗಪ್ಪ, ಬಾಗೂರು ಮಾರ್ಕಾಂಡೇಯ, ಪರಮೇಶ್ವರ ಸೊಪ್ಪಿಮಠ, ಕೃಷ್ಣಮೂರ್ತಿ ಬಿಳಿಗೆರೆ, ಪ ರಾಮಕೃಷ್ಣಶಾಸ್ತ್ರಿ, ಹಾಗೂ ಇನ್ನೂ ಅನೇಕಾನೇಕ ಲೇಖಕರು ಮಕ್ಕಳ ಕಥಾಕ್ಷೇತ್ರಕ್ಕೆ ತಮ್ಮದೇ ಕೊಡುಗೆ ನೀಡುತ್ತಿದ್ದಾರೆ. ಹೌದು, ಸಾಹಿತ್ಯವೇನೋ ವಿಫುಲವಾಗಿದೆ. ಆದರೆ ಎಷ್ಟು ಜನ ಮಕ್ಕಳು ಓದುತ್ತಿದ್ದಾರೆ

ಇಂಗ್ಲಿಷ್ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಕನ್ನಡ ಕಷ್ಟ, ಮೊಬೈಲ್ ಮಾಯೆ ಸೆಳೆಯುತ್ತಿದೆ. ಓದುವ ಸಂಸ್ಕೃತಿ ಬೆಳೆಸುವ ವಾತಾವರಣ ಮನೆಯಲ್ಲಿಯಾಗಲೀ ಶಾಲೆಯಲ್ಲಿಯಾಗಲೀ ಇಲ್ಲವೇ ಇಲ್ಲ. ಮನೆಯಲ್ಲಿ ಪೋಷಕರಿಗೆ, ಶಾಲೆಯಲ್ಲಿ ಶಿಕ್ಷಕರಿಗೆ ಎಷ್ಟು ಜನರಿಗೆ ಓದುವ ಹವ್ಯಾಸ ಇದೆ ಕನಿಷ್ಟ ದಿನಪತ್ರಿಕೆಯನ್ನು ಓದುವ ಅಭ್ಯಾಸ ರೂಢಿಗಳನ್ನೂ ಇವರಲ್ಲಿ ಗರಿಷ್ಠ ಮಂದಿ ಬೆಳೆಸಿಕೊಂಡಿಲ್ಲ ಎಂಬುದು ಕಠೋರ ಸತ್ಯ ಮತ್ತು ದುರಂತ.

ಹಿಂದೆಲ್ಲಾ ಮನೆಮನೆಗಳಲ್ಲಿ ಅಜ್ಜಿ ತಾತಂದಿರುತ್ತಿದ್ದರು. ರಾಮಾಯಣ, ಮಹಾಭಾರತ, ಭಾಗವತ, ಪಂಚತಂತ್ರ, ಜನಪದ ಕತೆ ಹೇಳುತ್ತಿದ್ದರು. ಊಟ ಮಾಡಿಸುವಾಗ, ಸ್ನಾನ ಮಾಡಿಸುವಾಗ, ಕೆಲಸ ಮಾಡುತ್ತಾ ಕೊನೆಗೆ ನಿದ್ರೆ ಮಾಡಿಸಲೂ ಕತೆ ಹೇಳುತ್ತಿದ್ದರು. ಈಗ ಏನು ಮಾಡುತ್ತಿದ್ದೇವೆ ಕೇಳು ಸಂಸ್ಕೃತಿ ಬೆಳೆಯದ ಹೊರತು ಓದು ಸಂಸ್ಕೃತಿ ಬೆಳೆಯುವುದು ಅಸಾಧ್ಯ. ಇದನ್ನು ಯಾರು ಪ್ರಾರಂಭಿಸಬೇಕು ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಶಿಕ್ಷಕರು. ಲೈಬ್ರರಿ ಪೀರಿಯಡ್ ಎಂದರೆ ಎಕ್ಸ್ಟ್ರಾ ಕ್ಲಾಸ್ ಎನ್ನುವ ಶಿಕ್ಷಕರು! ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳಿಗೆ ಮೊದಲ ದಿನದಿಂದಲೇ ಶಾಲೆಯಲ್ಲಿ ಓದಿಸುವ ಅಭ್ಯಾಸ ಮಾಡಿಸುತ್ತಾರೆ. ನಮ್ಮ ಕೈಲೇಕೆ ಆಗುವುದಿಲ್ಲ?


ಇಂದು ನವಕರ್ನಾಟಕದಂತಹ ಪ್ರಕಾಶನಗಳು ಹೊರ ತರುತ್ತಿರುವ ಮಕ್ಕಳ ಸಚಿತ್ರ ಕಥಾ ಪುಸ್ತಕಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಲಿಪಿಗಳಲ್ಲಿ ಮುದ್ರಣವಿರುತ್ತದೆ. ಆದರೆ ನಾವು ಎಷ್ಟು ಜನ ನಮ್ಮ ಮಕ್ಕಳನ್ನು ಪುಸ್ತಕದ ಅಂಗಡಿಗಳಿಗೆ ಕರೆದುಕೊಂಡು ಹೋಗುತ್ತೇವೆ? ಎಷ್ಟೋ ಮಕ್ಕಳಿಗೆ ಅದು ಬೋರಿಂಗ್ ಪ್ಲೇಸ್.

ಓದು ಮನುಷ್ಯನಿಗೆ ಏಕೆ ಬೇಕು ಎಂಬುದನ್ನು ಹೊಸದಾಗಿ ಮತ್ತೆ ಹೇಳುವ ಅಗತ್ಯವಿಲ್ಲ. ಮಕ್ಕಳ ದಿನಾಚರಣೆಗೆ ಮಕ್ಕಳಿಗೆ ಉಡುಗೊರೆ ಕೊಡುವುದೇ ಆದರೆ, ಓದುವ ಹವ್ಯಾಸದಂತಹ ಮೌಲ್ಯಯುತ ರೂಢಿ ಮಾಡಿಸುವ ಪಣ ತೊಡೋಣ. ಇದರಿಂದ ಮಕ್ಕಳ ಜೀವನ ಹಸನಾಗಿ ಅವರ ಭವಿಷ್ಯ ಭದ್ರವಾಗುತ್ತದೆ.

ಹುಣಸೂರು ಬಳಿ ಹುಲಿ ಮರಿ ಸೆರೆ: ಬನ್ನೇರುಘಟ್ಟಕ್ಕೆ ರವಾನೆ

ತಾಯಿ, ಮತ್ತೆರಡು ಮರಿಗಾಗಿ ಡ್ರೋನ್ ಕಾರ್ಯಾಚರಣೆ


ಮೈಸೂರು,ನ.12(ಎಂಟಿವೈ)- ತಾಯಿಯಿಂದ ಬೇರ್ಪಟ್ಟು, ಮೈಸೂರಿನ ಇಲವಾಲ ಹಾಗೂ ಹುಣಸೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ 8 ತಿಂಗಳ ಗಂಡು ಹುಲಿ ಮರಿ ಕಳೆದ ರಾತ್ರಿ ಅರಣ್ಯ ಇಲಾಖೆ ಇಲಾಖೆಯ ಬೋನ್‌ಗೆ ಬಿದ್ದಿದ್ದು, ಅದನ್ನು ಬೆಂಗಳೂರಿನ ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.



ಸೆರೆ ಸಿಕ್ಕ ಹುಲಿ ಮರಿಯೊಂದಿಗೆ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಇಲಾಖೆ ಸಿಬ್ಬಂದಿ.

ಮೈಸೂರು ಹೊರವಲಯದ ಇಲವಾಲ, ಅಲೋಕ ರಸ್ತೆ, ಆರ್‌ಎಂಪಿ ಆವರಣ ಸೇರಿದಂತೆ ಹುಣಸೂರು ತಾಲೂಕಿನ ಕೆಲ ಗ್ರಾಮಗಳಲ್ಲಿ ಮೂರು ಮರಿಗಳೊಂದಿಗೆ ಕಾಣಿಸಿಕೊಳ್ಳುತ್ತಿದ್ದ ತಾಯಿ ಹುಲಿಯಿಂದ ಬೇರ್ಪಟ್ಟಿದ್ದ 8 ತಿಂಗಳ ಮರಿ ವಿವಿಧ ಗ್ರಾಮಗಳ ಜಮೀನಿನಲ್ಲಿ ಕಾಣಿಸಿಕೊಳ್ಳುತ್ತಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಒಂದು ವಾರದಿಂದ ಹುಣಸೂರು ಉಪವಿಭಾಗದ ಅರಣ್ಯಾಧಿಕಾರಿಗಳ ತಂಡ ಆನೆಪಡೆ, ಚಿರತೆ ಕಾರ್ಯಪಡೆ ಹಾಗೂ ಮೈಸೂರು ವಿಭಾಗದ ಸಿಬ್ಬಂದಿ ಸಹಕಾರದಿಂದ ಹುಲಿ ಪತ್ತೆಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿತ್ತು.

ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ದೊಡ್ಡಕಾಡನಹಳ್ಳಿ, ಚಿಕ್ಕಕಾಡನಹಳ್ಳಿ, ರಟ್ನಹಳ್ಳಿ, ಹಳೆಕಾಮನಕೊಪ್ಪಲು, ಹೊಸಕಾಮನಕೊಪ್ಪಲು ಹಾಗೂ ಈರಪ್ಪನಕೊಪ್ಪಲು ಬಳಿ ಹುಲಿ ಸಂಚರಿಸುತ್ತಿರುವುದರ ಬಗ್ಗೆ ಅರಣ್ಯ ಇಲಾಖೆಗೆ ಗ್ರಾಮಸ್ಥರು ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ 30ಕ್ಕೂ ಹೆಚ್ಚು ಕಡೆ ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಥರ್ಮಲ್ ಡ್ರೋನ್ ಮೂಲಕ ಪರಿಶೀಲನೆ ನಡೆಸಲಾಗುತ್ತಿತ್ತು. ಅಲ್ಲದೆ,



3-4 ಕಡೆ ಬೋನ್ ಇಟ್ಟು ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು.

ಆಹಾರ ಅರಸಿ ಬೋನಿಗೆ ಬಿತ್ತು: ತಾಯಿಯಿಂದ ಬೇರ್ಪಟ್ಟಿರುವ ಹುಲಿ ಮರಿ ಆಹಾರವಿಲ್ಲದೆ ಕಂಗೆಟ್ಟಿದೆ. ಹಾಗಾಗಿ ಈರಪ್ಪನಕೊಪ್ಪಲು-ಹೊಸಕಾಮನಕೊಪ್ಪಲು ಗ್ರಾಮದ ಬಳಿ ಇಟ್ಟಿದ್ದ ಬೋನ್‌ನಲ್ಲಿದ್ದ ಮಾಂಸ ಸೇವನೆಗೆ ಬಂದು ಸೆರೆ ಸಿಕ್ಕಿದೆ. ಅದು ನಿತ್ರಾಣಗೊಂಡಿರುವಂತೆ ಕಂಡು ಬಂದ ಹಿನ್ನೆಲೆಯಲ್ಲಿ ಅದರ ಆರೈಕೆಗಾಗಿ ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಕಾರ್ಯಾಚರಣೆ ವೇಳೆ ಹುಣಸೂರು ವಿಭಾಗದ ಡಿಸಿಎಫ್ ಫಯಾಜುದ್ದೀನ್, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಮೈಸೂರು ಡಿಸಿಎಫ್ ಕೆ.ಪರಮೇಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಅರಬಿ ತಿಟ್ಟಿನತ್ತ ಮರಿಗಳೊಂದಿಗೆ ತಾಯಿ

ಇಲವಾಲ ಹಾಗೂ ಹುಣಸೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿಗೆ ಮೂರು ಮರಿಗಳಿದ್ದು, ಅದರಲ್ಲಿ ಒಂದು ಮರಿ ತಾಯಿಯಿಂದ ಬೇರ್ಪಟ್ಟು, ಈಗ ಸೆರೆ ಸಿಕ್ಕಿದೆ. ಇನ್ನೆರಡು ಮರಿಯೊಂದಿಗೆ ತಾಯಿ ಹುಲಿ ಅರಬಿ ತಿಟ್ಟು ಅರಣ್ಯ ಪ್ರದೇಶದತ್ತ ಹೋಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಡ್ರೋನ್ ಮೂಲಕ ಪರಿಶೀಲನೆ

ಹುಲಿ ಮರಿ ಸಿಕ್ಕಿದ್ದರೂ, ಅದರ ತಾಯಿ ಮತ್ತು ಉಳಿದೆರಡು ಮರಿಗಳಿಗಾಗಿ ಥರ್ಮಲ್ ಡ್ರೋನ್ ಬಳಸಿ ಪರಿಶೀಲನೆ ನಡೆಸಲಾಗುತ್ತಿದೆ. ಗ್ರಾಮಸ್ಥರಿಗೂ ಹುಲಿ ಕಂಡರೆ ಕೂಡಲೇ ಮಾಹಿತಿ ನೀಡುವಂತೆ ಸೂಚನೆ ನೀಡಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಗುರುವಾರ 13 ನವೆಂಬರ್ 2025

ಪರಿಶಿಷ್ಟ ಜಾತಿ, ವರ್ಗದ ವಕೀಲರ ಕ್ಷೇಮಾಭಿವೃದ್ಧಿ ಸಂಘದಿಂದ ಓಬವ್ವ ಜಯಂತಿ



ಮೈಸೂರಿನ ಬುದ್ಧ ವಿಹಾರದಲ್ಲಿ ವೀರ ವನಿತೆ ಒನಕೆ ಓಬವ್ವ ಜಯಂತಿ ಆಚರಿಸಲಾಯಿತು.

ಮೈಸೂರು, 12(ಎಂಕೆ)– ಮೈಸೂರಿನ ಬಲ್ಲಾಳ ಸರ್ಕಲ್ ಸಮೀಪದಲ್ಲಿರುವ ಬುದ್ಧ ವಿಹಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಕೀಲರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವೀರ ವನಿತೆ ಒನಕೆ ಓಬವ್ವ ಜಯಂತಿ ಆಚರಿಸಲಾಯಿತು.

ಒನಕೆ ಓಬವ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಒನಕೆ ಓಬವ್ವ ಶೌರ್ಯದ ಪ್ರತೀಕ. 18ನೇ ಶತಮಾನದ ಚಿತ್ರದುರ್ಗ ಕೋಟೆಯ ಪಾಳೆಗಾರನಾಗಿದ್ದ ಮದಕರಿ ನಾಯಕನ ಕೋಟೆಯ ಕಾವಲುಗಾರ ಕಹಳೆ ಮದ್ದ ಹನುಮಪ್ಪನ ಹೆಂಡತಿಯಾದ ಓಬವ್ವ ತೋರಿದ ಸಮಯ ಪ್ರಜ್ಞೆ, ಧೈರ್ಯ, ಶತ್ರು ಸೈನಿಕರನ್ನು ಸದೆಬಡಿದದ್ದು ಇತಿಹಾಸದ ಪುಟಗಳಲ್ಲಿ ಅಮರವಾಗಿದೆ ಎಂದರು.

ಒನಕೆ ಓಬವ್ವ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. ಮಹಿಳೆಯರು ಎಂತಹ ಸಂದರ್ಭದಲ್ಲೂ ಧೃತಿಗೆಡದೆ ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ ಅವರಂತಹ ಧೀರ ಮಹಿಳೆಯರಿಂದ ಸ್ಫೂರ್ತಿ ಪಡೆದು ಸಾಧನೆಗಳನ್ನು ಮಾಡಬೇಕು ಎಂದು ತಿಳಿಸಿದರು. ಇದೇ ವೇಳೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ವಕೀಲರಾದ ತಿಮ್ಮಯ್ಯ, ಉಮೇಶ್ ಅವರನ್ನು ಸನ್ಮಾನಿಸಲಾಯಿತು. ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ವಕೀಲರಾದ ಪುಟ್ಟಸ್ವಾಮಿ, ಸರಸ್ವತಿ, ಮೈತ್ರಿ ಮತ್ತಿತರರಿದ್ದರು.

ನ.16, ಚಿತ್ರಕಲಾ ಸ್ಪರ್ಧೆ

ಮೈಸೂರು, ನ. 12–ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿಜಯನಗರ 2ನೇ ಹಂತ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ನ.16ರಂದು ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ (ಮೈಸೂರು ನಗರಕ್ಕೆ) ಏರ್ಪಡಿಸಲಾಗಿದೆ. ಡ್ರಾಯಿಂಗ್ ಸ್ಪರ್ಧೆಯಲ್ಲಿ ಎರಡು ವಿಭಾಗಗಳಿದ್ದು 9–12 ಮತ್ತು 13–18 ವರ್ಷಗಳಿಗೆ ಒಳಪಟ್ಟಿರುತ್ತದೆ. ಆಸಕ್ತರು ನ.15ರೊಳಗೆ ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ ಮೊ. 9448493694, 9886975258 ಸಂಪರ್ಕಿಸ ಬಹುದು. ಸ್ಪರ್ಧೆಯನ್ನು ನ.16ರಂದು ಬೆಳಗ್ಗೆ 10.30 ಗಂಟೆಗೆ ವಿಜಯನಗರ 2ನೇ ಹಂತದ ವಿದ್ಯಾರಣ್ಯ ಉದ್ಯಾನವನ, ಹಂಪಿ ಸರ್ಕಲ್ ಹತ್ತಿರ ನಡೆಸಲಾಗುವುದು.

ಎಸ್‌ಕೆಸಿವಿ ಹಾಸ್ಟೆಲ್‌ನಲ್ಲಿ ಗ್ರಂಥಾಲಯ ಉದ್ಘಾಟನೆ ; ಶೈಕ್ಷಣಿಕ ಅಧ್ಯಯನಕ್ಕೂ ಅಗತ್ಯ ಪುಸ್ತಕ ಸಂಗ್ರಹ ಹೊಂದಿರುವ

ಮೈಸೂರು ನಗರ ಕೇಂದ್ರ ಗ್ರಂಥಾಲಯವನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು

● ಸಾರ್ವಜನಿಕ ಗ್ರಂಥಾಲಯ ಇಲಾಖೆ ಡಿಡಿ ಬಿ.ಮಂಜುನಾಥ್ ● 'ದಿವ್ಯ ಚೇತನಗಳು' ಕೃತಿ ಬಿಡುಗಡೆ

ಮೈಸೂರು, ನ.12(ಪಿಎಂ)– ನಜರ್‌ಬಾದಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯವು ರಾಜ್ಯದಲ್ಲೇ ಅತ್ಯುತ್ತಮ ವ್ಯವಸ್ಥೆ ಹೊಂದಿದೆ. ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಯಾವುದೇ ಶೈಕ್ಷಣಿಕ ಅಧ್ಯಯನಕ್ಕೂ ಅಗತ್ಯ ಪುಸ್ತಕಗಳಿದ್ದು, ವಿದ್ಯಾರ್ಥಿ ಸಮುದಾಯ ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆ ಉಪನಿರ್ದೇಶಕ ಬಿ.ಮಂಜುನಾಥ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ವೀರಶೈವ ಆಶ್ರಮದಲ್ಲಿ (ಎಸ್‌ಕೆಸಿವಿ ಹಾಸ್ಟೆಲ್) ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ದತ್ತಿ ಕಾರ್ಯಕ್ರಮ, ಕೃತಿ ಬಿಡುಗಡೆ ಹಾಗೂ ಹಾಸ್ಟೆಲ್ ಆವರಣದ ಗ್ರಂಥಾಲಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನಗರ ಕೇಂದ್ರ ಗ್ರಂಥಾಲಯದಲ್ಲಿ ಮುಂದಿನ ದಿನಗಳಲ್ಲಿ ಕಂಪ್ಯೂಟರ್ ಹಾಗೂ ವೈಫೈ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇಲಾಖೆಯಿಂದ ಹಿಂದೆ ಡಿಜಿಟಲ್ ಗ್ರಂಥಾಲಯ ಸೌಲಭ್ಯ ಕಲ್ಪಿಸಲಾಗಿತ್ತು. ಆದರೆ ಈಗ ಸ್ಥಗಿತವಾಗಿದ್ದು, ಶೀಘ್ರದಲ್ಲೇ ಮತ್ತೆ ಆರಂಭವಾಗಲಿದೆ. ಎಲ್ಲಾ ರೀತಿಯ ಪುಸ್ತಕಗಳು ನಮ್ಮ ಈ ಗ್ರಂಥಾಲಯದಲ್ಲಿದ್ದು, ಕೇವಲ ಕಥೆ ಪುಸ್ತಕಗಳಿಗೆ ಸೀಮಿತವಾಗಿಲ್ಲ. ಪ್ರತಿಯೊಂದು ಕೋರ್ಸ್‌ಗೆ ಸಂಬಂಧಿಸಿದ ಪುಸ್ತಕಗಳ ಸಂಗ್ರಹ ಇಲ್ಲಿವೆ ಜೊತೆಗೆ ಇತ್ತೀಚಿನ ಆವೃತ್ತಿಗಳೂ ಲಭ್ಯವಿವೆ ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ಸಾಹುಕರ್ ಕಬ್ಬಳ್ಳಿ ಚನ್ನಬಸಪ್ಪನವರ ವೀರಶೈವ ಆಶ್ರಮದಲ್ಲಿ ಬುಧವಾರ 'ದಿವ್ಯ ಚೇತನಗಳು' ಕೃತಿ ಬಿಡುಗಡೆ ಮಾಡಲಾಯಿತು.

ಸ್ಪರ್ಧಾತ್ಮಕ ಪರೀಕ್ಷೆ ಪುಸ್ತಕಗಳು: ಗ್ರಂಥಾಲಯ ಸೇವೆ ಸಂಪೂರ್ಣ ಉಚಿತವಾಗಿದ್ದು, ಠೇವಣಿ ಪಾವತಿಸಿ ಸದಸ್ಯತ್ವ ಪಡೆದರೆ ಪುಸ್ತಕಗಳನ್ನು ಮನೆಗೆ ಎರವಲು ಸಹ ಪಡೆಯಬಹುದು. ಸದಸ್ಯತ್ವ ರದ್ದುಪಡಿಸಿಕೊಳ್ಳಲೂ ಅವಕಾಶವಿದ್ದು, ಆಗ ಠೇವಣಿ ಹಣ ಮರುಪಾವತಿ ಆಗಲಿದೆ. ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಪ್ರತಿಯೊಂದು ಶೈಕ್ಷಣಿಕ ವಿಭಾಗದ ಪುಸ್ತಕಗಳು ಲಭ್ಯವಿವೆ. ಯಾವುದೇ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಕೋರ್ಸ್‌ಗಳ ಪುಸ್ತಕಗಳು ಮಾತ್ರವಲ್ಲದೆ, ಕೆಎಎಸ್, ಐಎಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳ ಸಂಗ್ರಹವೂ ಇದೆ. ಹೀಗಾಗಿ ನಮ್ಮ ಈ ಗ್ರಂಥಾಲಯಕ್ಕೆ ಪ್ರತಿದಿನ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭೇಟಿ ನೀಡಿ ಅಧ್ಯಯನ ಮಾಡುತ್ತಾರೆ. ಈ ಗ್ರಂಥಾಲಯದಲ್ಲಿ ಕೇವಲ ವಿದ್ಯಾರ್ಥಿಗಳಿಗೆ ಅಷ್ಟೇ ಅಲ್ಲ. ಹಿರಿಯ ನಾಗರಿಕರು ಸೇರಿದಂತೆ ಎಲ್ಲಾ ವಯೋಮಾನದವರಿಗೆ ಪೂರಕವಾದ ಪುಸ್ತಕಗಳ ಸಂಗ್ರಹ ಇದೆ ಎಂದರು.

ನ.14ರಂದು ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಣೆಗೆ ಚಾಲನೆ ನೀಡಲಾಗುತ್ತಿದೆ. ಇಂದಿನ ದಿನಗಳಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದ್ದು, ಇದು ವಿಷಾದನೀಯ. ಪುಸ್ತಕ ಓದುವವರ ಸಂಖ್ಯೆಯೂ ಹೆಚ್ಚಾಗಬೇಕಿದ್ದು, ಆ ಮೂಲಕ ಪುಸ್ತಕೋದ್ಯಮ ಬೆಳೆಯಬೇಕಿದೆ. ಅದೇ ರೀತಿ ಗ್ರಂಥಾಲಯ ವ್ಯವಸ್ಥೆ ಕೂಡ ಬೆಳೆಯಬೇಕು. 'ಮೊಬೈಲ್ ಬಳಸಿದರೆ ಅದು ತಲೆಬಗ್ಗಿಸುವಂತೆ ಮಾಡಲಿದೆ. ಆದರೆ ಪುಸ್ತಕ ಬಳಸು ತಲೆ ಎತ್ತಿ ನಡೆಯುವಂತೆ ಮಾಡುತ್ತದೆ' ಎಂಬ ಮಾತು ಇತ್ತೀಚೆಗೆ ಕೇಳಿಬರುತ್ತಿದೆ. ಇದು ಅತ್ಯಂತ ಸೂಕ್ತವಾದುದು. ಹಾಗಾಗಿ ಮೊಬೈಲ್ ಅನ್ನು ಧನಾತ್ಮಕ ವಿಚಾರಕ್ಕಷ್ಟೆ ಬಳಸಿಕೊಳ್ಳಿ ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ದಿನಕ್ಕೊಂದು ರೀಲ್ಸ್‌ಗಳು!: ಇಂದು ದಿನಕ್ಕೊಂದು ಪುಸ್ತಕ ಓದುವ ಬದಲಾಗಿ ದಿನಕ್ಕೊಂದು ರೀಲ್ಸ್ ಮಾಡುವಂತೆ ಆಗಿದೆ. ಈ ರೀಲ್ಸ್‌ಗೀಳು ಬಿಟ್ಟು ದಿನಕ್ಕೊಂದು ಪುಸ್ತಕ ಓದುವತ್ತ ವಿದ್ಯಾರ್ಥಿಗಳು ಗಮನ ನೀಡಬೇಕು. ಪುಸ್ತಕ, ದಿನ ಪತ್ರಿಕೆ ಓದುವ ಹವ್ಯಾಸ ಸಹ ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು. ಜೀವನದಲ್ಲಿ ಗುರಿ ಹೊಂದಿ ವ್ಯಾಸಂಗ ಮಾಡಿದರೆ ಸಾಧನೆ ಸಾಧ್ಯವಾಗಲಿದೆ. ಇದು ಸ್ಪರ್ಧಾತ್ಮಕ ಯುಗವಾಗಿದ್ದು, ಜೊತೆಗೆ ಖಾಸಗೀಕರಣದತ್ತ ವ್ಯವಸ್ಥೆ ಸಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಬದುಕು ಕಟ್ಟಿಕೊಳ್ಳಲು ಶ್ರಮವಹಿಸಿ ಓದಬೇಕು. ಎಲ್ಲಾ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗದವರಿಗೆ ಗ್ರಂಥಾಲಯ ನೆರವಾಗಲಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಹಾಸ್ಟೆಲ್ ಆವರಣದಲ್ಲಿ ಆರಂಭಿಸಿರುವ ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರ ಗ್ರಂಥಾಲಯವನ್ನು ಬಿ.ಮಂಜುನಾಥ್ ಉದ್ಘಾಟಿಸಿದರು. ಸಾಹಿತಿ ಎಂ.ಎ.ನೀಲಾಂಬಿಕಾ ರಚಿಸಿರುವ 'ದಿವ್ಯ ಚೇತನಗಳು' ಕೃತಿಯನ್ನು ಆಶ್ರಮದ ಅಧ್ಯಕ್ಷ ಹೆಚ್.ಜಿ.ಗುರುಪ್ರಸಾದ್ ಬಿಡುಗಡೆ ಮಾಡಿದರು. 'ವಚನ ಸಾಹಿತ್ಯ–ಜೀವನ ಮೌಲ್ಯಗಳು' ಕುರಿತು ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಮಾಜಿ ಅಧ್ಯಕ್ಷ ಮ.ಗು. ಸದಾನಂದಯ್ಯ ಮಾತನಾಡಿದರು. ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಜಯಪ್ಪ ಹೊನ್ನಾಳಿ, ಕೃತಿ ಕರ್ತೃ ಎಂ.ಎ.ನೀಲಾಂಬಿಕಾ, ಆಶ್ರಮದ ಗೌರವ ಕಾರ್ಯದರ್ಶಿ ಎಂ.ಬಸವರಾಜು ಮತ್ತಿತರರು ಹಾಜರಿದ್ದರು.

ರಾಹುಲ್ ಗಾಂಧಿಯದ್ದು ಐರನ್ ಲೆಗ್!; ಹೋದಲ್ಲೆಲ್ಲಾ ಕಾಂಗ್ರೆಸ್ ಮಾತ್ರವಲ್ಲ, ಅದರ ಮಿತ್ರ ಪಕ್ಷಗಳು ಸೋಲ್ತಾವೆ!

ಬೆಂಗಳೂರು, ನ.12(ಕೆಎಂಶಿ)– ರಾಹುಲ್ ಗಾಂಧಿಯದು ಐರನ್ ಲೆಗ್, ಅವರು ಹೋದ ಕಡೆಯಲ್ಲೆಲ್ಲಾ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಸೋಲು ಕಂಡಿವೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಇಂದಿಲ್ಲಿ ವ್ಯಂಗ್ಯ ವಾಡಿದ್ದಾರೆ.



ಆರ್.ಅಶೋಕ್


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಹಾರ ವಿಧಾನಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆ ಮುಂದಿಟ್ಟುಕೊಂಡು ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಎಲ್ಲಿದೆ ಎಂದು ಹುಡುಕುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದರು. ಫಲಿತಾಂಶ ಹೊರಬೀಳುತ್ತಿದ್ದಂತೆ ಬಿಜೆಪಿ ಮೇಲೆ ಮತಗಳ್ಳತನದ ಆರೋಪ ಹೊರಿಸಿ ರಾಜಕೀಯ ಮಾಡಲು ಹೊರಡುತ್ತಾರೆ. ಇವರ ಹೇಳಿಕೆಯನ್ನು ಇನ್ನು ಮುಂದೆ ಜನರೂ ನಂಬುವುದಿಲ್ಲ. ಬಿಹಾರ ಚುನಾವಣೆ ಫಲಿತಾಂಶ ನಂತರ ರಾಹುಲ್ ಗಾಂಧಿ ವಿದೇಶ ಪ್ರವಾಸಕ್ಕೆ ತೆರಳುತ್ತಾರೆ. ಲೋಕಸಭೆಯಲ್ಲೂ ಅವರು ಕೆಲಸ ಮಾಡುತ್ತಿಲ್ಲ, ಪಕ್ಷಕ್ಕಾಗಿಯೂ ಕೆಲಸ ಮಾಡುತ್ತಿಲ್ಲ ಎಂದರು.

ಉಗ್ರರ ಕೈಗೆ ಮೊಬೈಲ್ ಸಿಕ್ಕಿದ ಬಗ್ಗೆ ತನಿಖೆಯಾಗಲಿ: ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಉಗ್ರರಿಗೆ ಮೊಬೈಲ್ ಕೊಟ್ಟಿದ್ದು ಯಾರು ಎಂಬ ತನಿಖೆ ಮಾಡಬೇಕಿದೆ. ಮೊಬೈಲ್ ಬಳಸಿ ಏನು ಮಾಡಿದ್ದಾರೆ ಎಂಬ ತನಿಖೆ ಮಾಡಬೇಕಿತ್ತು ಆದರೆ, ವೀಡಿಯೋ ಹೊರಗೆ ಬಂದಿದ್ದು ಹೇಗೆ ಎಂಬ ತನಿಖೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದಂತೆಯೇ ರಾಜ್ಯ ಸರ್ಕಾರ ಸಹ ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಮುಸ್ಲಿಮರ ಪರ ಮೃದು ಧೋರಣೆ ಒಳ್ಳೆಯದಲ್ಲ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ದೆಹಲಿ ನೋಡಬೇಕಿಲ್ಲ, ಮಲ್ಲಿಕಾರ್ಜುನ ಖರ್ಗೆ ಗೃಹ ಸಚಿವರಾಗಿದ್ದಾಗ ದಲಿತರನ್ನು ಸುಟ್ಟು ಹಾಕಲಾಗಿತ್ತು. ಆ ಪ್ರಕರಣದಲ್ಲಿ ಖರ್ಗೆ ವೈಫಲ್ಯವನ್ನು ಮೊದಲು ನೋಡಲಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಬಗ್ಗೆ ಮಾತನಾಡುವ ನೈತಿಕತೆ ಇವರಿಗೆ ಇಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರ ಪಾಪರ್ ಆಗಿದೆ. ನೌಕರರಿಗೆ, ಸಿಬ್ಬಂದಿಗೆ ಸಂಬಳ ಕೊಡಲು ಆಗುತ್ತಿಲ್ಲ ಎಂದು ಟೀಕಿಸಿದರು.

ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿಸಿ: ರಾಜ್ಯದಲ್ಲಿ ಮೆಕ್ಕೆಜೋಳ ಬೆಳೆದ ರೈತರು ಬೆಂಬಲ ಬೆಲೆಗೆ ಖರೀದಿಸಲು ಬೇಡಿಕೆ ಇಟ್ಟಿದ್ದಾರೆ. ರೈತ ವಿರೋಧಿ ಸರ್ಕಾರ ಒಂದು ಖರೀದಿ ಕೇಂದ್ರವನ್ನೂ ತೆರೆದಿಲ್ಲ, ಕಾಲಾಹರಣ ಮಾಡದೆ ಖರೀದಿ ಆರಂಭಿಸಬೇಕು, ಇಲ್ಲದಿದ್ದರೆ ಪರಿಸ್ಥಿತಿ ಹದಗೆಡಲಿದೆ. ಈರುಳ್ಳಿ ಬೆಳೆಗಾರರು ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ, ಮಾರುಕಟ್ಟೆಯಲ್ಲಿ ಸಿಗುತ್ತಿರುವ ದರದಿಂದ ಕಳೆ ಕೀಳಿಸಿದ ಕೂಲಿಯ ಹಣ ಗಿಟ್ಟುತ್ತಿಲ್ಲ, ಇಂತಹ ಸ್ಥಿತಿಯಲ್ಲಿ ನೆರವಿಗೆ ಧಾವಿಸಿ ಈರುಳ್ಳಿ ಖರೀದಿಗೆ ಕ್ರಮ ಕೈಗೊಳ್ಳಬೇಕಿದ್ದ ಸರ್ಕಾರ ಮೀನಾ–ಮೇಷ ಎಣಿಸುತ್ತಿದೆ. ಮಾತು ಮಾತಿಗೆ ತಮ್ಮದು ರೈತ ಪರ ಸರ್ಕಾರ ಎನ್ನುತ್ತಾ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬೆನ್ನು ತಟ್ಟಿಕೊಳ್ಳುತ್ತಾರೆ, ಇದೇನಾ ರೈತರ ಪರ ಕಾಳಜಿ ಎಂದು ವ್ಯಗ್ಯವಾಡಿದರು.

ತಿರುಪತಿ ಲಡ್ಡುಗೆ ನಕಲಿ ತುಪ್ಪ: ಕಠಿಣ ಶಿಕ್ಷೆಗೆ ಆಗ್ರಹ



ಮೈಸೂರು, ನ.12– ತಿರುಪತಿ ಲಡ್ಡು ಪ್ರಸಾದ ತಯಾರಿಕೆಯಲ್ಲಿ ನಕಲಿ ತುಪ್ಪ ಬಳಸಿರುವುದು ಎಸ್‌ಐಟಿ ತನಿಖೆಯಲ್ಲಿ ದೃಢಪಟ್ಟಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳು ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ ತಹಸೀಲ್ದಾರ್ ಶಿವಪ್ರಸಾದ್ ಅವರಿಗೆ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿರುವ ಗಂಭೀರ ಪ್ರಕರಣ ಇದಾಗಿದೆ. ಲಡ್ಡು ಪ್ರಸಾದದಲ್ಲಿ ರೂ.250 ಕೋಟಿಗೂ ಅಧಿಕ ಮೌಲ್ಯದ 68 ಲಕ್ಷ ನಕಲಿ ತುಪ್ಪವನ್ನು ಬಳಸಿರುವುದು ಬಯಲಾಗಿದೆ. ಆಂಧ್ರ ಪ್ರದೇಶದ ಹಿಂದಿನ ಮುಖ್ಯಮಂತ್ರಿ ಜಗನ್ ಮೋಹನ ರೆಡ್ಡಿ ನೇತೃತ್ವದ ಸರ್ಕಾರದ ಆಡಳಿತಾವಧಿಯಲ್ಲಿ ನಡೆದ ಕೃತ್ಯವಿದು. ಅಕ್ರಮಕ್ಕೆ ಕಾರಣರಾದವರ ವಿರುದ್ಧ ಸಿಬಿಐ ಮತ್ತು ಆಂಧ್ರಪ್ರದೇಶ ಪೊಲೀಸರ ತನಿಖೆಯ ಆಧಾರದ ಮೇಲೆ ಸೂಕ್ತ ಶಿಕ್ಷೆ ಆಗಬೇಕು. ಲಡ್ಡುಗಳಲ್ಲಿ ಕೊಬ್ಬಿನಾಂಶ, ಮಾಂಸದ ಅಂಶವಿರುವ ಕಳಪೆ ಪದಾರ್ಥಗಳನ್ನು ಬಳಸಲಾಗಿದೆ ಎಂಬುದು ತನಿಖೆಯಲ್ಲಿ ದೃಢವಾಗಿದೆ. ಉತ್ತರಾಖಂಡ ಮೂಲದ ಬೋಲ್ ಬಾಬಾ ಎಂಬ ಸಂಸ್ಥೆಯಿಂದ ಕಳಪೆ ತುಪ್ಪ ತರಿಸಿಕೊಂಡು ಅವ್ಯವಹಾರ ನಡೆಸಲಾಗಿದೆ. ಪ್ರಸಾದದ ಗುಣಮಟ್ಟ ಕಾಪಾಡಲು ನಂದಿನಿ (ಕೆಎಂ ಎಫ್) ತುಪ್ಪವನ್ನೇ ಬಳಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರುಗಳಾದ ಪ್ರಮೋದ್ ಗೌಡ, ಸಂದೇಶ್, ಗುರುರಾಜ್ ಶೆಟ್ಟಿ, ಎಸ್ ಎನ್ ರಾಜೇಶ್, ಪ್ರಶಾಂತ್, ಅಮಿತ್, ಸಚಿನ್ ನಾಯಕ್ ಹಾಗೂ ಇನ್ನಿತರರು ಹಾಜರಿದ್ದರು.

ಬಿಹಾರ ಮತಗಟ್ಟೆ ಸಮೀಕ್ಷೆ ಹೆಸರಲ್ಲಿ ಷಡ್ಯಂತ್ರ

ಮೈಸೂರು: ಮತಗಟ್ಟೆ ಸಮೀಕ್ಷೆ ಹೆಸರಿನಲ್ಲಿ ಕೆಲ ಖಾಸಗಿ ಸಂಸ್ಥೆಗಳು ಭಿತ್ತರಿಸುತ್ತಿರುವ ಏಕಪಕ್ಷೀಯ ವರದಿಗಳು ಚುನಾವಣಾ ಅಕ್ರಮದ ಷಡ್ಯಂತ್ರದ ಭಾಗವೇ ಎಂಬ ಅನುಮಾನವನ್ನು ಹುಟ್ಟುಹಾಕುತ್ತಿವೆ ಎಂದು ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ಹೇಳಿದ್ದಾರೆ.



ಕೆ.ವಿ.ಮಲ್ಲೇಶ್

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಚುನಾವಣಾ ಪೂರ್ವ ಮತ್ತು ಮತದಾನೋತ್ತರ ಸಮೀಕ್ಷೆಗಳು ಏಕಪಕ್ಷೀಯವಾಗಿ ಭಿತ್ತರಗೊಳ್ಳುತ್ತಿವೆ. ಇವಿಎಂ ಅಕ್ರಮ, ಮತಕಳ್ಳತನದ ಆರೋಪಗಳ ನಡುವೆ ಈ ಏಕಪಕ್ಷೀಯ ಸಮೀಕ್ಷಾ ವರದಿಗಳು ಅನುಮಾನಕ್ಕೆ ಎಡೆ ಮಾಡಿಕೊಡುತ್ತಿದ್ದು, ಚುನಾವಣಾ ಅಕ್ರಮದ ಮೊದಲ ಹೆಜ್ಜೆಯಾಗಿ ಕಾಣುತ್ತಿದೆ.


ಬದಲಾವಣೆ ಜಗದ ನಿಯಮ. ಮತದಾರನು ಕೂಡ ಅಂತಹ ಬದಲಾವಣೆಯನ್ನು ಬಯಸುವುದು ಸಾಮಾನ್ಯ ಆದರೆ, ಖಾಸಗಿ ಸಂಸ್ಥೆಗಳು ಮಾತ್ರ ಸಮೀಕ್ಷೆ ಹೆಸರಿನಲ್ಲಿ ಪ್ರಾಯೋಜಕತ್ವ ಪಡೆದು ಏಕಪಕ್ಷೀಯವಾಗಿ ವರದಿ ನೀಡುತ್ತಿವೆ. ಆ ಮೂಲಕ ಚುನಾವಣಾ ಅಕ್ರಮಕ್ಕೆ ಸಹಾಯ ಮಾಡುತ್ತಿವೆ. ಈಗಾಗಲೇ ದೇಶದಲ್ಲಿ ಮತಕಳವು ಪ್ರಕರಣ ಸಾಕಷ್ಟು ಕಡೆಗಳಲ್ಲಿ ಕಂಡುಬಂದಿದೆ. ಅದನ್ನು ರಾಹುಲ್ ಗಾಂಧಿ ಸಾಕ್ಷಿ ಸಮೇತ ತೋರಿಸಿದ್ದಾರೆ. ಅಲ್ಲದೆ, ಇವಿಎಂ ಮೇಲೂ ಸಾಕಷ್ಟು ಅನುಮಾನಗಳು ಕೇಳಿ ಬರುತ್ತಿವೆ. ಇವೆಲ್ಲಕ್ಕೂ ಪೂರಕವಾಗಿ ಈ ಪ್ರಾಯೋಜಕತ್ವ ಸಮೀಕ್ಷೆ ನೆರವಾಗುತ್ತಿದೆ. ಈ ಸಮೀಕ್ಷೆ ಮೂಲಕ ಏಕಪಕ್ಷೀಯ ಗೆಲುವನ್ನು ತೋರಿಸಿ ಮತದಾರರ ಮನಸ್ಸನ್ನು ಮೊದಲು ಒಲಿಸಿಕೊಂಡು ಆನಂತರ ಫಲಿತಾಂಶ ಘೋಷಿಸುವ ಹುನ್ನಾರ ಇದರಲ್ಲಿ ಕಂಡು ಬರುತ್ತಿದೆ ಎಂದು ಅವರು ದೂರಿದ್ದಾರೆ.

ಜೆಡಿಎಸ್ ರಾಜಕೀಯ ವ್ಯವಹಾರಗಳ ಸಮಿತಿಗೆ ಮಾಜಿ ಸಚಿವ ಸಾರಾ ಮಹೇಶ್ ನೇಮಕ

ಮೈಸೂರು, ನ. 12– ಜಾತ್ಯಾತೀತ ಜನತಾ ದಳದ ರಾಜಕೀಯ ವ್ಯವಹಾರಗಳ ಸಮಿತಿಗೆ ಮಾಜಿ ಸಚಿವರೂ ಆದ ಜೆಡಿಎಸ್ ಹಿರಿಯ ನಾಯಕ ಸಾರಾ ಮಹೇಶ್ ಅವರನ್ನು ನೇಮಕ ಮಾಡಲಾಗಿದೆ.

ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಆದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ರಚಿಸಿದ್ದಾರೆ. ಪಕ್ಷದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಮಹತ್ವದ ವಿಷಯಗಳ ಮೇಲೆ ಸಮಿತಿ ನಿರ್ಣಯಗಳನ್ನು ಕೈಗೊಳ್ಳಲಿದೆ.

ಕುಮಾರಸ್ವಾಮಿ ನೇತೃತ್ವದ ಈ ಸಮಿತಿಯಲ್ಲಿ ಶಾಸಕಿ ಶ್ರೀಮತಿ ಶಾರದ ಪೂರ್ಯ ನಾಯಕ್ ಸಂಚಾಲಕರಾಗಿದ್ದು, ಮಾಜಿ ಸಚಿವರಾದ ಸಾ.ರಾ. ಮಹೇಶ್, ಬಂಡೆಪ್ಪ ಕಾಶೆಂಪೂರ್, ವೆಂಕಟರಾವ್ ನಾಡಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು, ಶಾಸಕ ಎಂ.ಟಿ. ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಬೋಜೇಗೌಡ, ಮಾಜಿ ಶಾಸಕ ಕೆ.ಎ. ತಿಪ್ಪೇಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸದಸ್ಯರಾಗಿದ್ದಾರೆ.



ಈ ಸಮಿತಿಯು ರಾಜ್ಯ ರಾಜಕೀಯ ಬೆಳವಣಿಗೆಗಳನ್ನು ಆಧರಿಸಿ ಪಕ್ಷ ಸಂಘಟನೆ, ಬಲವರ್ಧನೆ, ನಾಯಕತ್ವವನ್ನು ರೂಪಿಸುವುದರಲ್ಲಿ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸುವ ಸಂಬಂಧ ಕ್ರಮ ಕೈಗೊಳ್ಳುತ್ತದೆ.

ಪ್ರಚಲಿತದಲ್ಲಿರುವ ಸೂಕ್ಷ್ಮ ಹಾಗೂ ಕ್ಲಿಷ್ಟ ಸಮಸ್ಯೆಗಳನ್ನು ಅವಲೋಕಿಸಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ವಿಧಾನಸಭೆ ಚುನಾವಣೆಗಳಿಗೆ ಜನಸಾಮಾನ್ಯರು ಮತ್ತು ರೈತರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಪ್ರಣಾಳಿಕೆ ಸಿದ್ಧಪಡಿಸಲು ಕ್ರಮ ಕೈಗೊಳ್ಳಲಿದೆ.

ಅಲ್ಲದೇ, ಎನ್‌ಡಿಎ ಮೈತ್ರಿಕೂಟದ ಹಿತದೃಷ್ಟಿಯಿಂದ ಹೊಂದಾಣಿಕೆ ಮತ್ತು ಸಮನ್ವಯತೆಗೆ ಕಾರ್ಯಕ್ರಮ ರೂಪಿಸುವುದರ ಜೊತೆಗೆ ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಸೇರಿ ಮಹತ್ವದ ವಿಷಯಗಳ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲಿದೆ.

ಸಿದ್ದರಾಮಯ್ಯ ಅಧಿಕಾರ ಹಸ್ತಾಂತರಿಸುವ ಪ್ರಶ್ನೆಯೇ ಇಲ್ಲ

ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ವಾದ

ಬೆಂಗಳೂರು, ನ.12(ಕೆಎಂಶಿ)– ಸಿದ್ದರಾಮಯ್ಯ ಅಧಿಕಾರ ಹಸ್ತಾಂತರಿಸುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಹಾಗೂ ಪಕ್ಷದ ಹಿರಿಯ ಶಾಸಕ ಬಸವರಾಜ ರಾಯರೆಡ್ಡಿ ತಿಳಿಸಿದ್ದಾರೆ.



ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯ ಅವರನ್ನು ಐದು ವರ್ಷಕ್ಕೆ ನಾಯಕನಾಗಿ ಆಯ್ಕೆ ಮಾಡುವ ಮೂಲಕ ಮುಖ್ಯಮಂತ್ರಿ ಪಟ್ಟ ನೀಡಿದ್ದೇವೆ. ಶಾಸಕಾಂಗ ಸಭೆಯಲ್ಲೇ ಈ ತೀರ್ಮಾನ ಕೈಗೊಂಡಿರುವಾಗ ನಾಯಕತ್ವ ಬದಲಾವಣೆ ವಿಚಾರ ಎಲ್ಲಿಂದ ಬಂತು ಎಂದು ಪ್ರಶ್ನಿಸಿದ್ದಾರೆ.

ನವೆಂಬರ್ 20ಕ್ಕೆ ಸಿದ್ದರಾಮಯ್ಯ ಆಡಳಿತಕ್ಕೆ ಎರಡೂವರೆ ವರ್ಷ ಪೂರೈಸಲಿರುವ ಬೆನ್ನಲ್ಲೇ ರಾಯರೆಡ್ಡಿ ಇಂತಹ ಹೇಳಿಕೆ ನೀಡಿದ್ದಾರೆ. ಎರಡೂವರೆ ವರ್ಷಗಳ ನಂತರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟು ಕೊಡಬೇಕೆಂಬ ಚರ್ಚೆ ಬೆನ್ನಲ್ಲೇ ರಾಯರೆಡ್ಡಿ ಸಿದ್ದರಾಮಯ್ಯ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ಶಿವಕುಮಾರ್ ನಮ್ಮ ಪಕ್ಷದ ಅಧ್ಯಕ್ಷರು, ಅವರು ಮುಖ್ಯಮಂತ್ರಿ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಆದರೆ, ನಾವೆಲ್ಲಾ ಸಿದ್ದರಾಮಯ್ಯ ಪರ ಇದ್ದೇವೆ ಎಂದು ತಿಳಿಸಿದ್ದಾರೆ.

ಉಪೇಂದ್ರ ದಂಪತಿ ಮೊಬೈಲ್ ಹ್ಯಾಕ್ ಮಾಡಿ 1.5 ಲಕ್ಷ ರೂ. ದೋಚಿದ್ದ ಬಿಹಾರದ ಸೈಬರ್ ವಂಚಕನ ಬಂಧನ

ಬೆಂಗಳೂರು, ನ.12– ನಟ ಉಪೇಂದ್ರ ಮತ್ತು ಅವರ ಪತ್ನಿ, ನಟಿ ಪ್ರಿಯಾಂಕಾ ಉಪೇಂದ್ರ ಅವರ ಮೊಬೈಲ್ ಫೋನ್‌ಗಳನ್ನು ಹ್ಯಾಕ್ ಮಾಡಿ, ವಾಟ್ಸಾಪ್‌ನಲ್ಲಿ ಮೆಸೇಜ್ ಮಾಡುವ ಮೂಲಕ ಹಲವಾರು ಜನರಿಂದ ಹಣ ಕಿತ್ತಿದ್ದ ಆರೋಪದ ಮೇಲೆ ಬಿಹಾರದ ಸೈಬರ್ ಅಪರಾಧಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿ ವಿಕಾಸ್ ಕುಮಾರ್ ಎಂಬಾತನನ್ನು ಬಿಹಾರದ ದಶರಥಪುರ ಗ್ರಾಮದಲ್ಲಿ ಬಂಧಿಸಲಾಗಿದ್ದು, ನಂತರ ಬೆಂಗಳೂರಿಗೆ ಕರೆತರಲಾಗಿದೆ. ಪ್ರಿಯಾಂಕಾ ಉಪೇಂದ್ರ ಅವರು ಆನ್‌ಲೈನ್‌ನಲ್ಲಿ ಕೆಲವು ವಸ್ತುಗಳನ್ನು ಆರ್ಡರ್ ಮಾಡಿದ್ದರು. ಅದೇ ವೇಳೆಗೆ ಕರೆ ಮಾಡಿದ್ದ ವ್ಯಕ್ತಿಯು ಅವರ ಮೊಬೈಲ್‌ಗೆ ಅನುಮಾನಾಸ್ಪದ ಲಿಂಕ್ ಅನ್ನು ಕಳುಹಿಸಿದ್ದಾನೆ. ಅದನ್ನು ಕ್ಲಿಕ್ ಮಾಡಿದ ಕೂಡಲೇ ಫೋನ್ ಹ್ಯಾಕ್ ಆಗಿದ್ದು, ವಂಚಕರು ಅವರ ವಾಟ್ಸಾಪ್ ಖಾತೆಗೆ ಪ್ರವೇಶ ಪಡೆದಿದ್ದಾರೆ.

ಅದಾದ ಸ್ವಲ್ಪ ಸಮಯದ ನಂತರ, ಪ್ರಿಯಾಂಕಾ ಅವರ ಮೊಬೈಲ್‌ನಲ್ಲಿ ಸೇವ್ ಆಗಿದ್ದ ನಂಬರ್‌ಗಳಿಗೆ ವಾಟ್ಸಾಪ್ ಮೂಲಕ ತುರ್ತಾಗಿ ಹಣ ವರ್ಗಾವಣೆ ಮಾಡುವಂತೆ ಕೋರಿ ಸಂದೇಶ ಕಳುಹಿಸಿದ್ದಾರೆ. ಇದನ್ನು ನಂಬಿದ ದಂಪತಿ ಮಗ ಸೇರಿದಂತೆ ಕೆಲವು ಪರಿಚಯಸ್ಥರು ಸಂದೇಶಗಳಲ್ಲಿ ಉಲ್ಲೇಖಿಸಲಾದ ಖಾತೆಗಳಿಗೆ ಹಣ ವರ್ಗಾಯಿಸಿದ್ದಾರೆ. ಪೊಲೀಸರು ಕೇಂದ್ರ ವಿಭಾಗದ ಸೈಬರ್ ಅಪರಾಧ ಘಟಕದೊಂದಿಗೆ ಸಂಘಟಿತ ತನಿಖೆಯನ್ನು ಪ್ರಾರಂಭಿಸಿ, ಆರೋಪಿಯು ಬಿಹಾರ ಮೂಲದವನು ಎಂಬುದನ್ನು ಪತ್ತೆಹಚ್ಚಿದ್ದಾರೆ. ಹ್ಯಾಕರ್‌ಗಳು ಸೈಬರ್ ವಂಚನೆಗಳಿಗೆ ಕುಖ್ಯಾತಿ ಪಡೆದ ದಶರಥಪುರ ಗ್ರಾಮಕ್ಕೆ ಸೇರಿದವರು ಎಂದು ತಿಳಿದುಬಂದಿದೆ.

ನಾನು ಸದಾ ಆರ್‌ಎಸ್‌ಎಸ್, ಜಾತಿ, ಮೌಢ್ಯ ವಿರೋಧಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಕುರುಬರ ಸಂಘದ ಆಸ್ತಿಗಳೆಲ್ಲವನ್ನು ರಕ್ಷಣೆ ಮಾಡಿದ್ದೇನೆ

ಬೆಂಗಳೂರು, ನ.12(ಕೆಎಂಶಿ)– ಸನಾತನವಾದಿ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್), ಜಾತಿ ವ್ಯವಸ್ಥೆ ಮತ್ತು ಮೌಢ್ಯದ ವಿರುದ್ಧ ಮೊದಲಿಂದಲೂ ಇದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಪ್ರದೇಶ ಕುರುಬರ ಸಂಘ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎಲ್ಲಾ ಶೋಷಿತ ಸಮುದಾಯಗಳ ಧ್ವನಿಯಾಗಿ ಕಾಗಿನೆಲೆ ಪೀಠ ಸ್ಥಾಪಿಸಿದ್ದು ನಾನು ಎಂದರು. ಆರ್‌ಎಸ್‌ಎಸ್‌ನದ್ದು ಸಮಾಜ ಒಡೆದು ಜಾತಿ ವ್ಯವಸ್ಥೆ ರೂಪಿಸಿದ ಸಿದ್ಧಾಂತ, ಶ್ರಮಿಕ ಜಾತಿ, ವರ್ಗಗಳ ವಿರೋಧಿ, ಅದಕ್ಕೇ ಮೊದಲಿನಿಂದಲೂ ವಿರೋಧಿಸುತ್ತೇನೆ. ಇದೇ ಕಾರಣಕ್ಕೆ ಕಾಗಿನೆಲೆ ಪೀಠ ಎಲ್ಲಾ ಶೋಷಿತ ಸಮುದಾಯಗಳ ಪೀಠ ಆಗಬೇಕು ಎನ್ನುವುದನ್ನು ಪ್ರತಿಪಾದಿಸಿದ್ದೆ.

ಪ್ರದೇಶ ಕುರುಬರ ಸಂಘದ ಹಾಸ್ಟೆಲ್‌ನಲ್ಲಿ ಓದಿದವರು ಅಧಿಕಾರಿ, ಜಡ್ಜ್‌ಗಳೂ ಆಗಿದ್ದಾರೆ. ನಾನು 1983 ರಲ್ಲಿ ಶಾಸಕನಾಗಿ 1984ರಲ್ಲಿ ಮಂತ್ರಿ ಆದೆ. ಸಾರಿಗೆ ಮಂತ್ರಿ ಆಗಿದ್ದಾಗ 1988ರಲ್ಲೇ ಕನಕದಾಸರ 500ನೇ ಜಯಂತ್ಯುತ್ಸವ ಆಚರಣೆ ಮಾಡಿಸಿದೆ. ರಾಜಪ್ಪ ಮೇಷ್ಟ್ರು ನನ್ನನ್ನು ನೇರವಾಗಿ ಐದನೇ ತರಗತಿಗೆ ಸೇರಿಸದೇ ಹೋಗಿದ್ದರೆ ನಾನು ವಕೀಲನೂ ಆಗುತ್ತಿರಲಿಲ್ಲ. ಮುಖ್ಯಮಂತ್ರಿಯೂ ಆಗುತ್ತಿರಲಿಲ್ಲ, ಪ್ರೊ.ನಂಜುಂಡಸ್ವಾಮಿ ಕಾರಣದಿಂದ ರಾಜಕೀಯಕ್ಕೆ ಬಂದೆ.



ಪ್ರದೇಶ ಕುರುಬರ ಸಂಘ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ರಾಜಕಾರಣಕ್ಕೆ ಬರದೇ ಹೋಗಿದ್ದರೆ ಕುರುಬ ಸಂಘದ ಕಟ್ಟಡವೂ ಉಳಿಯುತ್ತಿರಲಿಲ್ಲ ಕಾಗಿನೆಲೆ ಪೀಠವೂ ಆಗುತ್ತಿರಲಿಲ್ಲ, ರಿಯಲ್ ಎಸ್ಟೇಟ್ ರೌಡಿಗಳಿಂದ ಬೈರಪ್ಪನ ಗುಡಿ ಮತ್ತು ಸಮಾಜದ ಭೂಮಿ, ಕಟ್ಟಡಗಳನ್ನು ಉಳಿಸಲು ಸಾಧ್ಯ ಆಗುತ್ತಿರಲಿಲ್ಲ ಎಂದರು. ಸರ್ಕಾರದಿಂದ 600 ಕುರುಬ ಸಮುದಾಯ ಭವನ ನಿರ್ಮಿಸಲು ಮುಂದಾಗಿದ್ದು, ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ದಾವಣಗೆರೆ ಸೇರಿ ರಾಜ್ಯದ ಹಲವು ಕಡೆಗಳಲ್ಲಿ ಸಂಘಕ್ಕೆ ಜಾಗ, ಕಟ್ಟಡ ಉಳಿಸಿಕೊಟ್ಟಿದ್ದೇನೆ.

ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ ಮಾಡಿದ್ದು ನಾನೇ, ಸಂಗೊಳ್ಳಿ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದು ನಾನೇ, ಕುರುಬ ಸಮಾಜಕ್ಕೆ ಆಸ್ತಿ ಉಳಿಸಿ, ಬೆಳೆಸುವ ಕಾರ್ಯದಲ್ಲಿ ಮುಕುಡಪ್ಪ ಸೇರಿ ಶಿವಣ್ಣ, ಮಾಸ್ತಿ, ಸಿದ್ದಲಿಂಗಯ್ಯ, ನಾಗಣ್ಣ ಸೇರಿದಂತೆ ಹಲವರು ಸಹಕಾರ ನೀಡಿದರು.

ಒಟ್ಟಿನಲ್ಲಿ ಸಮಾಜದ ಸಂಘಟನೆಗೆ ಶ್ರಮಿಸಿದ ಎಲ್ಲರಿಗೂ ಧನ್ಯವಾದ. ನಾನು ಕುರುಬ ಸಮಾಜಕ್ಕೆ ಮಾತ್ರ ಶ್ರಮಿಸಲಿಲ್ಲ, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಸೇರಿ ಎಲ್ಲಾ ಶೋಷಿತ ಸಮುದಾಯಗಳ ಏಳಿಗೆಗೂ ಕೆಲಸ ಮಾಡಿದ್ದೇನೆ.

ಮೊದಲ ಬಾರಿ ಮುಖ್ಯಮಂತ್ರಿಯಾಗಿ ಜಾರಿಗೆ ತಂದ ಭಾಗ್ಯಗಳು, ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಜಾರಿಗೆ ತಂದ ಗ್ಯಾರಂಟಿಗಳು ಎಲ್ಲಾ ಜಾತಿಯ ಬಡವರಿಗಾಗಿ, ಸರ್ವರನ್ನೂ ಒಳಗೊಂಡ, ಸರ್ವರ ಅಭಿವೃದ್ಧಿಯ ಸಮಾಜ ನಿರ್ಮಾಣ ನನ್ನ ಗುರಿ. ಇಡೀ ರಾಜ್ಯ ಸುತ್ತಿ ಸಮಾಜ ಸಂಘಟಿಸಿದೆ ಎಂದರು.

ಕಾಲ್ತುಳಿತ ಪ್ರಕರಣ: ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆಗೆ ಬಿಗ್ ರಿಲೀಫ್


ಬೆಂಗಳೂರು, ನ.12– ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತ ಪ್ರಕರಣದ ಆರೋಪಿಗಳಲ್ಲಿ ಒಬ್ಬರಾಗಿರುವ ಐಪಿಎಲ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ)ನ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಅವರ ಜಾಮೀನಿಗೆ ವಿಧಿಸಲಾಗಿದ್ದ ಪ್ರಮುಖ ಷರತ್ತನ್ನು ಕರ್ನಾಟಕ ಹೈಕೋರ್ಟ್ ಬುಧವಾರ ಸಡಿಲಿಸಿದೆ.

ಕಾಲ್ತುಳಿತ ಪ್ರಕರಣದಲ್ಲಿ ಜೂ.6 ರಂದು ಸೋಸಲೆ ಅವರನ್ನು ಬಂಧಿಸಲಾಗಿತ್ತು. ಅದಾದ ಆರು ದಿನಗಳ ನಂತರ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಈ ವೇಳೆ ಸೋಸಲೆ ಅವರಿಗೆ ಬೆಂಗಳೂರು ಬಿಟ್ಟು ಹೋಗದಂತೆ ನಿರ್ಬಂಧ ಹೇರಲಾಗಿತ್ತು. ಈ ಆದೇಶವನ್ನು ಮಾರ್ಪಡಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದ ಸೋಸಲೆ, ತಮ್ಮ ವೃತ್ತಿಪರ ಕರ್ತವ್ಯಗಳ ಕಾರಣದಿಂದಾಗಿ ದೇಶದಾದ್ಯಂತ ಪ್ರಯಾಣಿಸುವುದು ಕಡ್ಡಾಯವಾಗಿದೆ ಎಂದು ವಾದಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಾಲಯ, ಸೋಸಲೆ ಅವರ ಕೆಲಸವು ಭಾರತದಾದ್ಯಂತ ಆಗಾಗ್ಗೆ ಪ್ರಯಾಣಿಸುವುದನ್ನು ಬೇಡುತ್ತದೆ ಮತ್ತು ಅವರು ಪ್ರತಿ ಬಾರಿ ಪ್ರಯಾಣಿಸಿದಾಗ ಅಥವಾ ಸ್ಥಳ ಬದಲಾಯಿಸಿದಾಗ ತನಿಖಾ ಅಧಿಕಾರಿಗೆ ತಿಳಿಸಲು ಒಪ್ಪಿಕೊಂಡಿದ್ದಾರೆ ಎಂದು ಗಮನಿಸಿದೆ. ಈ ಭರವಸೆಯನ್ನು ಒಪ್ಪಿಕೊಂಡ ಪೀಠವು, ಸೋಸಲೆ ಅವರಿಗೆ ಪರಿಹಾರ ನೀಡುವುದು ಸಮಂಜಸವಾಗಿದೆ. ಅರ್ಜಿದಾರರು ನಗರದಿಂದ ಹೊರಡುವ ಮೊದಲು ಮತ್ತು ಅವರು ಹಿಂದಿರುಗಿದ ನಂತರ ತನಿಖಾ ಅಧಿಕಾರಿಗೆ ತಿಳಿಸಿದರೆ ಷರತ್ತು ಸಡಿಲಿಸಲಾಗುತ್ತದೆ ಎಂದು ತನ್ನ ಆದೇಶದಲ್ಲಿ ತಿಳಿಸಿದೆ.

ರಾಷ್ಟ್ರಪ್ರಶಸ್ತಿ ಪಡೆದ 'ತಿಥಿ' ನಟ ಗಡ್ಡಪ್ಪ ಇನ್ನಿಲ್ಲ

ಇಳಿ ವಯಸ್ಸಲ್ಲಿ 20ಕ್ಕೂ ಹೆಚ್ಚು ಸಿನಿಮಾದಲ್ಲಿ ನಟಿಸಿದ್ದ ಪ್ರತಿಭೆ; ಕೇಂದ್ರ ಸಚಿವ ಹೆಚ್ಡಿಕೆ ಸಂತಾಪ


ಗಡ್ಡಪ್ಪ (ಚನ್ನೇಗೌಡ)


ಶೋಕ ಸಾಗರದಲ್ಲಿ ಮುಳುಗಿರುವ ಕುಟುಂಬಸ್ಥರು, ಅಭಿಮಾನಿಗಳು.

ಮಂಡ್ಯ, ನ.12– ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಚಲನಚಿತ್ರವಾದ ತಿಥಿ ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿ ಮನೆ ಮಾತಾಗಿದ್ದ ಗಡ್ಡಪ್ಪ (ಮೂಲ ಹೆಸರು ಚನ್ನೇಗೌಡ) ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು.

ಮಂಡ್ಯ ತಾಲೂಕಿನ ನೊದೆ ಕೊಪ್ಪಲು ಗ್ರಾಮದವರಾದ ಗಡ್ಡಪ್ಪ ಅವರ ಮೂಲ ಹೆಸರು ಚನ್ನೇಗೌಡ ಗ್ರಾಮದಲ್ಲಿ ಹೋಟೆಲ್ ನಡೆಸುತ್ತಿದ್ದ ಅವರನ್ನು ಅಲ್ಲಿಗೆ ಬರುವವರು ಗಡ್ಡಪ್ಪ ಎಂದೇ ಕರೆಯುತ್ತಿದ್ದರು. ಆ ಹೆಸರಿನಿಂದಲೇ ಖ್ಯಾತಿ ಪಡೆದಿದ್ದ ಅವರು ಜೊತೆಗೆ ಸಿನಿಮಾ ಪ್ರೇಮಿಯಾಗಿದ್ದರು. ಮಂಡ್ಯ ಮೂಲದವರೇ ಆದ ಈರೇಗೌಡ ಎಂಬುವವರು ಬರೆದಿದ್ದ ತಿಥಿ ಸಿನಿಮಾದ ಚಿತ್ರಕಥೆಯ ಗಡ್ಡಪ್ಪ ಪಾತ್ರಕ್ಕೆ ಚನ್ನೇಗೌಡರೇ ಸೂಕ್ತ ವ್ಯಕ್ತಿ ಎಂದು ಸಿನಿಮಾ ತಂಡ ಆಯ್ಕೆ ಮಾಡಿಕೊಂಡಿತ್ತು.

ತಿಥಿ ಸಿನಿಮಾ ಮೂಲಕ ಖ್ಯಾತಿ: 2015ರಲ್ಲಿ ಬಿಡುಗಡೆಯಾದ ಕನ್ನಡ ಚಲನಚಿತ್ರವಾದ ತಿಥಿ ಸಿನಿಮಾವನ್ನು ರಾಮ್‌ರೆಡ್ಡಿ ನಿರ್ದೇಶಿಸಿದ್ದರು. ಮಂಡ್ಯ ಜಿಲ್ಲೆಯ ಹಳ್ಳಿಗಳ ವೃತ್ತಿಪರರಲ್ಲದ ನಟರ ಗುಂಪನ್ನು ಒಳಗೊಂಡಿದ್ದ ಈ ಚಿತ್ರವು, ತಮ್ಮ 101 ವರ್ಷದ ಹಿರಿಯ ವ್ಯಕ್ತಿಯ ಸಾವಿಗೆ ಮೂರು ತಲೆಮಾರುಗಳ ಪುರುಷರು ಪ್ರತಿಕ್ರಿಯಿಸುವ (ಅರೆ) ಹಾಸ್ಯ ಕಥೆಯಾಗಿತ್ತು. ಈ ಸಿನಿಮಾದಲ್ಲಿ ಗಡ್ಡಪ್ಪ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದರು.

ತಿಥಿ ಚಿತ್ರವು ಆಗಸ್ಟ್ 8, 2015ರಂದು 68ನೇ ಲೊಕಾರ್ನೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಥಮ ಪ್ರದರ್ಶನಗೊಂಡಿತು, ಅಲ್ಲಿ ಇದು ಗೋಲ್ಡನ್ ಲೆಪರ್ಡ್ – ಫಿಲ್ಮ್ ಮೇಕರ್ಸ್ ಆಫ್ ದಿ ಪ್ರೆಸೆಂಟ್ ವಿಭಾಗ ಮತ್ತು ಮೊದಲ ಫೀಚರ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಪರಿಣಾಮವಾಗಿ, ಇದು ಪ್ರಪಂಚದಾದ್ಯಂತದೆ ವಿವಿಧ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶಿಸಲ್ಪಟ್ಟಿತು ಮತ್ತು 63ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಕನ್ನಡದ ಅತ್ಯುತ್ತಮ ಫೀಚರ್ ಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಗೆದ್ದುಕೊಂಡಿತು. ಇದು ಕರ್ನಾಟಕದಲ್ಲಿ 6 ಮೇ 2016 ರಂದು ಮತ್ತು ಭಾರತದ ಉಳಿದ ಭಾಗಗಳಲ್ಲಿ 3 ಜೂನ್ 2016 ರಂದು ಸಾಮಾನ್ಯವಾಗಿ ಸಕಾರಾತ್ಮಕ ವಿಮರ್ಶೆಗಳೊಂದಿಗೆ ಬಿಡುಗಡೆಯಾಯಿತು. ಜೊತೆಗೆ 2016ರಲ್ಲಿ ಕರ್ನಾಟಕ ಚಲನಚಿತ್ರ ಪ್ರಶಸ್ತಿ ಸಹ ಈ ಸಿನಿಮಾಗೆ ದೊರೆಯಿತು.

ರಾಷ್ಟ್ರಮಟ್ಟದಲ್ಲಿ ಖ್ಯಾತಿ ಪಡೆದ ಗ್ರಾಮೀಣ ಪ್ರತಿಭೆ: ತಿಥಿ ಸಿನಿಮಾದಿಂದ ಮನೆ ಮಾತಾದ ಗಡ್ಡಪ್ಪ ಅವರ ಮೊದಲ ಚಿತ್ರ ದೇಶ, ವಿದೇಶ ಸೇರಿದಂತೆ ಹಲವು ದೇಶಗಳಲ್ಲಿ ಪ್ರದರ್ಶನಗೊಂಡು ಯಶಸ್ಸು ಸಿಕ್ಕ ಹಿನ್ನೆಲೆಯಲ್ಲಿ ಅದೃಷ್ಟವೂ ಕುಲಾಯಿಸಿತು. 78ರ ಇಳಿ ವಯಸ್ಸಿನಲ್ಲಿ ಗುಡಿಸಿಲಿನಲ್ಲಿ ವಾಸವಿದ್ದ ಇವರ ಮನೆ ಮುಂದೆ ನಿರ್ಮಾಪಕರ ದಂಡೇ ಬರುವಂತಾಯಿತು.

ಬಳಿಕ ಐದಾರು ವರ್ಷಗಳ ಕಾಲ ಸ್ಟಾರ್ ನಟನ ವರ್ಚಸ್ಸು ಸಿಕ್ಕಂತೆ 20ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದರೆ, ಈ ಪೈಕಿ ಸುಮಾರು 10 ಸಿನಿಮಾದಲ್ಲಿ 78ರ ಆಸುಪಾಸಿನ ವಯೋವೃದ್ಧ ಗಡ್ಡಪ್ಪಗೆ ಲೀಡ್ ರೋಲ್‌ನಲ್ಲಿ ನಟನೆ ಮಾಡುವ ಅವಕಾಶ ಸಿಕ್ಕಿತು.

ಬಳಿಕ ತರ್ಲೆ ವಿಲೇಜ್, ಜಾನಿ ಮೇರಾ ನಾಮ್, ಹಳ್ಳಿ ಪಂಚಾಯಿತಿ, ಗಡ್ಡಪ್ಪನ ದುನಿಯಾ, ಗಡ್ಡಪ್ಪನ ಸರ್ಕಲ್, ಹಾಲು ತುಪ್ಪ, ಕರ್ಮ, ತಾತನ ಮದುವೆ ಮೊಮ್ಮಗನ ಪ್ರಸ್ತ ಸೇರಿದಂತೆ 20ಕ್ಕೂ ಅಧಿಕ ಸಿನಿಮಾದಲ್ಲಿ ನಟಿಸಿದ್ದಾರೆ. ಸಿನಿಮಾದಲ್ಲಿ ಬಂದ ಹಣದಿಂದ ಗುಡಿಸಿಲಿನಲ್ಲಿದ್ದ ಅವರು ಬಳಿಕ ಮನೆಯೊಂದನ್ನು ಕಟ್ಟಿಕೊಂಡರು.

ಮಗಳ ಕಂಬನಿ: ಮೃತ ಗಡ್ಡಪ್ಪ ಪುತ್ರಿ ಶೋಭಾ ಮಾತನಾಡಿ, ನಟನೆ ಎಂದರೆ ನಮ್ಮ ತಂದೆಗೆ ಪ್ರಾಣ. ಅನಾರೋಗ್ಯದ ಕಾರಣ ಯಾವುದೇ ಸಿನಿಮಾದಲ್ಲಿ ಅಭಿನಯಿಸಲಾಗಿಲ್ಲ. ಒಂದು ತಿಂಗಳ ಹಿಂದೆ ಬಿದ್ದು ಪೆಟ್ಟಾಗಿ ಚಿಕಿತ್ಸೆ ಕೊಡಿಸಲಾಗಿತ್ತು. ಹಾರ್ಟ್ ಪೇಶೆಂಟ್ ಕೂಡ ಆಗಿದ್ದರು. ಹಲವು ಸಿನಿಮಾದಲ್ಲಿ ಅಭಿನಯ ಮಾಡಿದ್ದಾರೆ ಎಂದು ವಿವರಿಸಿದರು.

ಹೋಟೆಲ್ ನಡೆಸುತ್ತಿದ್ದ ಅವಾಗಿಂದಲೂ ಗಡ್ಡಪ್ಪ ಅನ್ನೋ ಹೆಸರು ಇತ್ತು. ಆ ಹೆಸರೇ ತಿಥಿ ಸಿನಿಮಾದಲ್ಲಿ ಹೆಚ್ಚು ಪ್ರಚಾರವಾಗಿದೆ. ಮನೆ ಬಳಿಗೆ 500 ರಿಂದ 600 ಜನ ಅಭಿಮಾನಿಗಳು ಬರುತ್ತಿದ್ದರು. ಗಡ್ಡಪ್ಪ ಅವರನ್ನೇ ಮಾತನಾಡಿಸಿಕೊಂಡು ಹೋಗುತ್ತಿದ್ದರು. ಸಿನಿಮಾ ಆಫರ್‌ಗಳು ಇದ್ದವು ಆರೋಗ್ಯ ಸರಿಯಿಲ್ಲದ ಕಾರಣ ಶೂಟಿಂಗ್‌ಗೆ ಕಳುಹಿಸುತ್ತಿರಲಿಲ್ಲ. ಸಿನಿಮಾ ಅಂದರೆ ಅವರಿಗೆ ಹುಚ್ಚಿತ್ತು. ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡುತ್ತಿದ್ದರು. ಅವರಿಂದಲೇ ಆರ್ಥಿಕವಾಗಿ ಮನೆ ನಡೆಯುತ್ತಿತ್ತು ಊಟ ಇಲ್ಲದೆ ನಮ್ಮೆಲ್ಲರನ್ನೂ ಸಾಕಿದ್ದಾರೆ. ಕಷ್ಟದಿಂದ ಜೀವನ ನಡೆಸುತ್ತಿದ್ದರು. ತಂದೆಯನ್ನ ನೆನೆದು ಪುತ್ರಿ ಕಣ್ಣೀರಿಟ್ಟರು.

ಹೆಚ್ಡಿಕೆ ಸಂತಾಪ: ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾ ತಿಥಿ ಖ್ಯಾತಿಯ ಗಡ್ಡಪ್ಪ ನಿಧನಕ್ಕೆ ಕೇಂದ್ರ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಂತಾಪ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಕಂಬನಿ ಮಿಡಿದಿರುವ ಅವರು, ಮಂಡ್ಯ ತಾಲೂಕಿನ ಕುಗ್ರಾಮ ನೊದೆ ಕೊಪ್ಪಲಿನಲ್ಲಿ ಜನಿಸಿ, ವಯೋವೃದ್ಧ ವಯಸ್ಸಿನಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದ ಅವರ ನಿಧನಕ್ಕೆ ನನ್ನ ಸಂತಾಪಗಳು ಎಂದು ತಿಳಿಸಿದ್ದಾರೆ.

ದೆಹಲಿಯಲ್ಲಿ ಸ್ಫೋಟ ಹಿನ್ನೆಲೆ: ಕೆಆರ್‌ಎಸ್‌ಗೆ ಭದ್ರತೆ ಹೆಚ್ಚಳ


ಕೆಆರ್‌ಎಸ್ ಸುತ್ತಮುತ್ತ ಬಿಗಿ ಭದ್ರತೆ ಮಾಡಲಾಗಿರುವುದು.

ಶ್ರೀರಂಗಪಟ್ಟಣ: ದೆಹಲಿಯ ಕೆಂಪು ಕೋಟೆ ಬಳಿ ಸೋಮವಾರ ಸ್ಫೋಟ ಸಂಭವಿಸಿದ ಹಿನ್ನೆಲೆಯಲ್ಲಿ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆ ಆಸುಪಾಸಿನಲ್ಲಿ ಕಟ್ಟೆಚ್ಚರ ವಹಿಸಿ, ಭದ್ರತೆ ಹೆಚ್ಚಿಸಲಾಗಿದೆ.

ಅಣೆಕಟ್ಟೆಯ ದಕ್ಷಿಣ ದ್ವಾರ, ಉತ್ತರ ದ್ವಾರ, ಬೃಂದಾವನ ಪ್ರವೇಶ ದ್ವಾರ ಸೇರಿದಂತೆ ಆಯಕಟ್ಟಿನ ಸ್ಥಳಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಅಣೆಕಟ್ಟೆ ನಾಲ್ಕೂ ದಿಕ್ಕುಗಳಲ್ಲಿ ಕರ್ನಾಟ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್)ನ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ಕಾವಲಿಗೆ ಇರಿಸಲಾಗಿದೆ.

ಅಣೆಕಟ್ಟೆ ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನ ಹರಿಸುವಂತೆ ಮೇಲಾಧಿಕಾರಿಗಳಿಂದ ಆದೇಶ ಬಂದಿದೆ. ಹಾಗಾಗಿ ಅನುಮಾನಾಸ್ಪದ ವ್ಯಕ್ತಿಗಳು ಮತ್ತು ವಾಹನಗಳ ಚಲನವಲನಗಳ ಬಗ್ಗೆ ನಿಗಾ ಇಡಲಾಗಿದೆ ಎಂದು ಕೆಎಸ್‌ಐಎಸ್‌ಎಫ್ ಕಮಾಂಡೆಂಟ್ ಪ್ರಮೋದ್ ತಿಳಿಸಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆ ಭದ್ರತೆಗೆ ಪ್ರತ್ಯೇಕವಾಗಿ ಕೈಗಾರಿಕಾ ಭದ್ರತಾ ಪಡೆಯೇ ಇದೆ. ಹಾಗಾಗಿ ಸಿವಿಲ್ ಪೊಲೀಸರನ್ನು ನಿಯೋಜನೆ ಮಾಡಿಲ್ಲ. ದೆಹಲಿ ಸ್ಫೋಟ ಘಟನೆಯ ನಂತರ ಕೆಆರ್‌ಎಸ್‌ಗೆ ಉನ್ನತ ಅಧಿಕಾರಿಗಳು ಭೇಟಿ ನೀಡಿಲ್ಲ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ದೇಶದ ಯಾವುದಾದರೂ ಒಂದು ಮೂಲೆಯಲ್ಲಿ ಬಾಂಬ್ ಸ್ಫೋಟ ಅಥವಾ ಭದ್ರತೆ ವಿಚಾರ ಬಂದಾಗ ಮಾತ್ರ ಕೆಆರ್‌ಎಸ್ ನೀರಾವರಿ ನಿಗಮದ ಅಧಿಕಾರಿಗಳು ಕೆಆರ್‌ಎಸ್ ಅಣೆಕಟ್ಟೆಯ ಭದ್ರತೆ ಬಗ್ಗೆ ಒಂದೆರಡು ದಿನ ಮಾತನಾಡುತ್ತಾರೆ ಹೊರತು ಕೆಆರ್‌ಎಸ್‌ನಲ್ಲಿ ಇಲ್ಲಿವರೆಗೂ ಒಂದೇ ಒಂದು ಸಿಸಿ ಕ್ಯಾಮೆರಾ ಕಾರ್ಯ ನಿರ್ವಹಿಸದೆ ಇರುವುದು ಕೆಆರ್‌ಎಸ್‌ನಲ್ಲಿ ಭದ್ರತೆ ಎಷ್ಟಿದೆ ಎಂಬುದಕ್ಕೆ ಹಿಡಿದ ಕೈಗಡಿಯಾಗಿದೆ ಎಂದು ಕೆಆರ್‌ಎಸ್ ಗ್ರಾ.ಪಂ. ಸದಸ್ಯ ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, ಕಾವೇರಿ ಆರತಿ ಮಾಡುವ ನೆಪದಲ್ಲಿ ಕೆಆರ್‌ಎಸ್ ಅಣೆಕಟ್ಟೆಯ ಹಲವು ಭಾಗಗಳಲ್ಲಿ ನಿರ್ಮಾಣ ಮಾಡಿದ್ದ ತಂತಿ ಬೇಲಿಯನ್ನು ತೆರವುಗೊಳಿಸಲಾಗಿದೆ. ಅಲ್ಲಿ ಯಾವುದೇ ರೀತಿ ಭದ್ರತೆಯನ್ನು ಯೋಜನೆ ಮಾಡಿಲ್ಲ ಹಾಗೂ ನಮ್ಮನ್ನಾಳುವ ಜನಪ್ರತಿನಿಧಿಗಳು ಕೆಆರ್‌ಎಸ್ ಭದ್ರತೆ ಬಗ್ಗೆ ಚಿಂತಿಸದೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಮಾಡಲು ಸರ್ಕಾರದ ಕೋಟಿ ಕೋಟಿ ಹಣವನ್ನು ವ್ಯಯ ಮಾಡಲು ಮುಂದಾಗಿರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮದಿನೋತ್ಸವದ ಅಂಗವಾಗಿ ಮೆರವಣಿಗೆ


ಸರ್ದಾರ್ ವಲ್ಲಭಭಾಯಿ ಪಟೇಲರ ಜನ್ಮದಿನದ ಅಂಗವಾಗಿ ನಡೆದ ಮೆರವಣಿಗೆ.

ಮಂಡ್ಯ, ನ.12– ದೇಶ ಅಭಿವೃದ್ಧಿ ಹೊಂದಲು ಮಾನವ ಸಂಪನ್ಮೂಲ ಬಹಳ ಮುಖ್ಯ, ಅದರಲ್ಲೂ ದೇಶದ ಯುವ ಜನತೆ ದೇಶದ ಶಕ್ತಿ ಎಂದು ಜಿ.ಪಂ. ಸಿಇಓ ಕೆಆರ್.ನಂದಿನಿ ಅಭಿಪ್ರಾಯಪಟ್ಟರು.

ಬುಧವಾರ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150 ನೇ ಜನ್ಮದಿನೋತ್ಸವದ ಪ್ರಯುಕ್ತ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಮಂಡ್ಯ ಜಿಲ್ಲಾ ಮಟ್ಟದ ಮೆರವಣಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಯುವ ಜನತೆ ಸನ್ಮಾರ್ಗದಲ್ಲಿ ನಡೆಯದಿದ್ದರೆ ದೇಶದ ಪ್ರಗತಿ ಸಾಧ್ಯವಿಲ್ಲ. ಇಡೀ ದೇಶದ ಶಕ್ತಿಯಾಗಿರುವ ಯುವ ಜನತೆ ಸಕಾರಾತ್ಮಕ ಚಿಂತನೆಯೊಂದಿಗೆ ಉತ್ತಮ ಹಾದಿಯಲ್ಲಿ ಸಾಗಬೇಕು ಮತ್ತು ಸಮಾಜ ನಿರ್ಮಾಣಕ್ಕೆ ಸಾಕ್ಷಿಯಾಗಬೇಕು ಎಂದು ಹೇಳಿದರು.

ಸ್ವತಂತ್ರ ಪೂರ್ವದಲ್ಲಿ ದೇಶದ ಏಕತೆಗಾಗಿ ಶ್ರಮಿಸಿದ ಗಣ್ಯರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಒಬ್ಬರು. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಕೇವಲ ರಾಜಕೀಯ ವ್ಯಕ್ತಿಯಾಗದೆ ಸಮಾಜ ಸುಧಾರಕರಾಗಿ ಸಮಾಜಕ್ಕೆ ಅವರು ನೀಡಿರುವ ಕೊಡುಗೆ ನಿಜಕ್ಕೂ ಅಪಾರ ಎಂದು ಬಣ್ಣಿಸಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ದೇಶಾಭಿಮಾನ ಮತ್ತು ದೇಶಭಕ್ತಿ ಇಂದಿನ ಯುವ ಪೀಳಿಗೆಗೆ ಸ್ಫೂರ್ತಿದಾಯಕ ಎಂದರೆ ತಪ್ಪಾಗುವುದಿಲ್ಲ. ಆಡಳಿತ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಹಾಗೂ ರಾಷ್ಟ್ರೀಯ ಏಕತೆಗಾಗಿ ಶ್ರಮಿಸಿರುವ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಚಿಂತನೆ ಹಾಗೂ ಆದರ್ಶ ಕುರಿತು ವಿದ್ಯಾರ್ಥಿಗಳು ಲೇಖನಗಳನ್ನು ರಚಿಸಿ ಮತ್ತು ನಿಮ್ಮ ಸುತ್ತಮುತ್ತಲಿನ ಜನ ಸಮುದಾಯದವರಿಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ದೇಶಾಭಿಮಾನ, ಆದರ್ಶ ಕುರಿತು ತಿಳಿಸಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಉಪನಿರ್ದೇಶಕ ಓಂ ಪ್ರಕಾಶ್, ಮಂಡ್ಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕಿ ಡಾ.ಪ್ರಮೀಳ, ಮುಡಾ ಆಯುಕ್ತ ಕೃಷ್ಣಕುಮಾರ್ ಹಾಗೂ ಪ್ರೊ.ಯೋಗಚಾರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಾಲಕರ ಕಬಡ್ಡಿ: ರಾಷ್ಟ್ರಮಟ್ಟಕ್ಕೆ ಆಯ್ಕೆ



ನಾಗಮಂಗಲ, ನ.12– ತಾಲೂಕಿನ ಕೋಟೆ ಬೆಟ್ಟ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳು ಮೈಸೂರು ವಿಭಾಗೀಯ ಮಟ್ಟದ 14ರ ವಯೋಮಾನದ ಕಬಡ್ಡಿ ಪಂದ್ಯಾವಳಿಯಲ್ಲಿ ರಾಜ್ಯಮಟ್ಟದಲ್ಲಿ ರನ್ನರ್ಸ್ ಸ್ಥಾನ ಗಿಟ್ಟಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ.

ನಿನ್ನೆ ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಮೈಸೂರು ವಿಭಾಗವನ್ನು ಪ್ರತಿನಿಧಿಸಿದ್ದ ಕೋಟೆಬೆಟ್ಟ ಶಾಲೆಯ ವಿದ್ಯಾರ್ಥಿಗಳು ರನ್ನರ್ಸ್ ಸ್ಥಾನವನ್ನು ಪಡೆದ ತಂಡದ ಗಗನ್ ಗೌಡ ಎಸ್.ಆರ್ ಯಶ್ವಂತ್ ಮಹೇಶ್ ಕಿಶೋರ್ ಬಿ.ಎಸ್ ಎಂಬ ನಾಲ್ಕು ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುವ ಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕ್ರೀಡಾ ಸಾಧನೆ ಮೆರೆದ ವಿದ್ಯಾರ್ಥಿಗಳನ್ನು ಹಾಗೂ ತರಬೇತುದಾರರನ್ನು ಶಾಲೆಯ ಪ್ರಾಂಶುಪಾಲರಾದ ಟಿ.ಕೆ ಸ್ವಾಮಿ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಒಂದನೇ ಪುಟದಿಂದ

ನ.15ಕ್ಕೆ ದೆಹಲಿಗೆ ಸಿಎಂ, ಡಿಸಿಎಂ

ಚರ್ಚಿಸಿದ್ದಾರೆ ಎನ್ನಲಾಗುತ್ತಿದೆ. ಇನ್ನು ಸಿದ್ದರಾಮಯ್ಯ ಆಪ್ತರು ಈಗಾಗಲೇ ಪೂರ್ಣಾವಧಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾದ ಮುಂದಿಡುತ್ತಿದ್ದು, ಮಲ್ಲಿಕಾರ್ಜುನ ಖರ್ಗೆ ಭೇಟಿ ಬಳಿಕ ಸಚಿವ ಜಮೀರ್ ಅಹ್ಮದ್ ಮಾತನಾಡಿ, 2028ರವರೆಗೆ ಸಿದ್ದರಾಮಯ್ಯನವರೇ ಸಿಎಂ. 2028ಕ್ಕೆ ಡಿ.ಕೆ.ಶಿ ಸಿಎಂ ಆಗಲಿ ಎಂದಿದ್ದಾರೆ. ಇತ್ತ ಕುರುಬ ಸಂಘದ ನೂತನ ಕಟ್ಟಡ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಚಿವ ಬೈರತಿ ಸುರೇಶ್, ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿ, ಸಿಎಲ್‌ಪಿ ಬೆಂಬಲ ತಗೊಂಡು, ಖರ್ಗೆ, ಸೋನಿಯಾ ಗಾಂಧಿ ಪ್ರೀತಿಪಾತ್ರರಾಗಿ 100 ರೂ. ಖರ್ಚು ಮಾಡದೇ ಸಿದ್ದರಾಮಯ್ಯ 2ನೇ ಬಾರಿ ಸಿಎಂ ಆಗಿದ್ದಾರೆ. ದುಡ್ಡಿದ್ದವರು ಸಿಎಂ ಆಗಲು ಪ್ರಯತ್ನಿಸಿದರೂ ಆಗಲಿಲ್ಲ ಎಂದು ಹೇಳಿದ್ದಾರೆ.

ಮುಂದುವರೆದರೆ ತಪ್ಪೇನು?

ಹೇಳಿಕೆಗೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಈ ಪ್ರತಿಕ್ರಿಯೆ ನೀಡಿ ಅಚ್ಚರಿ ಮೂಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡು ವರ್ಷ ಆರು ತಿಂಗಳು ಪೂರ್ಣಗೊಳ್ಳುತ್ತಿದ್ದು, ನವೆಂಬರ್ ನಲ್ಲಿ ಸರ್ಕಾರದ ನಾಯಕತ್ವ ಬದಲಾವಣೆಯಾಗುವ ಸಾಧ್ಯತೆ ಇದೆ ಎಂಬ ಊಹಾಪೋಹಗಳಿತ್ತು. ಜಮೀರ್ ಅಹ್ಮದ್ ಖಾನ್ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಡಿ.ಕೆ.ಶಿವಕುಮಾರ್, ತುಂಬಾ ಸಂತೋಷ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆದರೆ ಏನು ತಪ್ಪು? ಅವರು ಇರಲಿ. ನಮಗೆ ದುಃಖವಿಲ್ಲ. ನಾವು ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ ಮತ್ತು ಹಾಗೆ ಮುಂದುವರಿಯುತ್ತೇವೆ ಎಂದು ತಿಳಿಸಿದರು.

ರಾಜ್ಯದ ರಾಜಕೀಯ ವಲಯಗಳಲ್ಲಿ, ವಿಶೇಷವಾಗಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ, ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಕೆಲವು ಸಮಯದಿಂದ ಮಾತುಕತೆ ನಡೆಯುತ್ತಿದ್ದು, ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವಿನ 'ಅಧಿಕಾರ ಹಂಚಿಕೆ' ಒಪ್ಪಂದವನ್ನು ಉಲ್ಲೇಖಿಸಲಾಗಿದೆ. ನ.15ರಂದು ಸಿದ್ದರಾಮಯ್ಯರ ನವದೆಹಲಿಗೆ ಭೇಟಿ ನೀಡುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ರಾಜ್ಯಸಭಾ ಸಂಸದ ಮತ್ತು ಹಿರಿಯ ವಕೀಲ ಕಪಿಲ್ ಸಿಬಲ್ ಅವರ ಕಾರ್ಯಕ್ರಮದಲ್ಲಿ ಭಾಗವಹಿಸಲು ನಾನು ಕೂಡ ದೆಹಲಿಗೆ ಹೋಗುತ್ತಿದ್ದೇನೆ ಎಂದು ತಿಳಿಸಿದ್ದಾರೆ. ಕಪಿಲ್ ಸಿಬಲ್ ನನ್ನ ವಕೀಲರು. ಅವರು ಇಲ್ಲಿ ಮತ್ತು ದೆಹಲಿ ಎರಡೂ ನ್ಯಾಯಾಲಯಗಳಲ್ಲಿ ನನ್ನನ್ನು ಪ್ರತಿನಿಧಿಸಿದ್ದಾರೆ. ಅವರು ನನಗೆ ಕರೆ ಮಾಡಿದ್ದಾರೆ ಮತ್ತು ನಾನು ಕೂಡ ಹೋಗುತ್ತಿದ್ದೇನೆ ಎಂದು ಹೇಳಿದರು.

ದೆಹಲಿ ಭೇಟಿಯ ಸಮಯದಲ್ಲಿ ಬಹುನಿರೀಕ್ಷಿತ ಸಚಿವ ಸಂಪುಟ ಪುನರ್‌ರಚನೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಜೊತೆ ಯಾವುದೇ ಚರ್ಚೆ ನಡೆಯುತ್ತದೆಯೇ ಎಂದು ಕೇಳಿದಾಗ, ಅದು ಮುಖ್ಯಮಂತ್ರಿಯ ಜವಾಬ್ದಾರಿ ಎಂದಷ್ಟೇ ತಿಳಿಸಿದ್ದಾರೆ.

ನೀವು ರಾಜ್ಯದ ಅಧ್ಯಕ್ಷರಾಗಿರುವುದರಿಂದ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಬಗ್ಗೆ ಸಿಎಂ ನಿಮ್ಮೊಂದಿಗೆ ಚರ್ಚಿಸಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಶಿವಕುಮಾರ್, 'ಅವರು (ಸಿಎಂ) ಇನ್ನೂ ಚರ್ಚಿಸಿಲ್ಲ' ಎಂದು ಹೇಳಿದರು. ಇದೇ ವೇಳೆ ಬಿಹಾರ ಚುನಾವಣೋತ್ತರ ಸಮೀಕ್ಷೆಗಳಲ್ಲಿ ನಂಬಿಕೆ ಇಲ್ಲ ಎಂದು ಹೇಳಿದ ಉಪಮುಖ್ಯಮಂತ್ರಿ, ಬಿಹಾರದಲ್ಲಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಒಳಗೊಂಡ 'ಮಹಾಘಟಬಂಧನ್' ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸತೀಶ ಜಾರಕಿಹೊಳಿ ಮತ್ತೆ ಲಾಬಿ

ಕಳೆದರೂ ಬದಲಾವಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕಳೆದ ಐದೂವರೆ ವರ್ಷಗಳಿಂದ ಶಿವಕುಮಾರ್ ಅವರೇ ಅಧ್ಯಕ್ಷರಾಗಿದ್ದಾರೆ. ಈ ಸ್ಥಾನಕ್ಕೆ ನನ್ನನ್ನು ಪರಿಗಣಿಸಬೇಕೆಂದು ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ. ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಶಿವಕುಮಾರ್ ಅವರನ್ನು ಎತ್ತಂಗಡಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ ವರ್ಷದಿಂದ ಪ್ರಯತ್ನ ನಡೆ ಸುತ್ತಿದೆ. ಈ ಬಗ್ಗೆ ಈ ಹಿಂದೆಯೂ ಹೈಕಮಾಂಡ್‌ಗೆ ಮನವಿ ಸಲ್ಲಿಸಿತ್ತು. ಸತೀಶ ಜಾರಕಿಹೊಳಿ ಅಥವಾ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಈ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್‌ಗೆ ಶಿಫಾರಸು ಮಾಡಿದ್ದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಕೆಳಗಿಳಿಸಿ ದುರ್ಬಲಗೊಳಿಸಬೇಕು ಎನ್ನುವುದು ಎದುರು ಬಣದ ಯೋಚನೆ. ಸಚಿವ ಸಂಪುಟ ಪುನರ್‌ರಚನೆಗೆ ಮುನ್ನವೇ ಅಧ್ಯಕ್ಷರ ಬದಲಾಯಿಸಬೇಕು ಎಂದು ಗಂಭೀರ ಪ್ರಯತ್ನ ನಡೆಸಿದೆ. ಇದರ ಭಾಗವಾಗಿಯೇ ಜಾರಕಿಹೊಳಿ ದೆಹಲಿ ಯಾತ್ರೆ ಕೈಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ನವೆಂಬರ್ ಕ್ರಾಂತಿ ಹಾಗೂ ಅಧಿಕಾರ ಹಸ್ತಾಂತರದ ಬಗ್ಗೆ ಪಕ್ಷದ ವಲಯದಲ್ಲಿ ನಿತ್ಯ ಚರ್ಚೆ ಆಗುತ್ತಿದೆ. ಈ ಗೊಂದಲ ನಿವಾರಿಸಬೇಕು. ನಾಯಕತ್ವ ಬದಲಾವಣೆ ಮಾಡಬಾರದು ಎಂದೂ ಆಗ್ರಹಿಸಿದರು.

ಹೆಚ್ಚುವರಿ ಕಿಮೀಗೆ 18 ರೂ.ಗೆ ಹೆಚ್ಚಳ

ಹೊರರಾಜ್ಯ ಆಟೋ ತಪಾಸಣೆ: ಮೈಸೂರಲ್ಲಿ ಹೊರ ರಾಜ್ಯ ಆಟೋಗಳ ತಪಾಸಣೆ ಅಭಿಯಾನ ಆರಂಭಿಸಿ ದಾಖಲೆಗಳ ಪರಿಶೀಲಿಸಿ, ನಿಯಮ ಉಲ್ಲಂಘಿಸಿ ಹೊರ ರಾಜ್ಯದ ಆಟೋ ಸಂಚರಿಸುತ್ತಿದ್ದರೆ, ಅವುಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಡಿಸಿ ಸೂಚಿಸಿದರು.

ಬ್ಯಾಡ್ಜ್ ವಿತರಿಸಲು ವಿಶೇಷ ಅಭಿಯಾನ: ವೈಟ್ ಬೋರ್ಡ್ ಲಘು ವಾಹನ ಚಾಲನಾ ಪರವಾನಗಿ ಇರುವವರೆಲ್ಲಾ ಆಟೋ ರಿಕ್ಷಾ ಚಾಲನೆ ಮಾಡುತ್ತಿದ್ದಾರೆ. ಹಾಗಾಗಿ ಆಟೋ ಚಾಲನೆಗೆ ಬ್ಯಾಡ್ಜ್ ಕಡ್ಡಾಯಗೊಳಿಸಬೇಕು. ಬ್ಯಾಡ್ಜ್ ಇಲ್ಲದೆ ಇದ್ದರೆ, ವಿಮಾ ಕಂಪನಿಗಳು ಅಪಘಾತದ ಪರಿಹಾರ ನೀಡುತ್ತಿಲ್ಲ ಎಂದು ಆಟೋ ಅವಲತ್ತುಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿ, ಆಟೋ ಚಾಲನೆಗೆ ಬ್ಯಾಡ್ಜ್ ಕಡ್ಡಾಯಗೊಳಿಸದಂತೆ ಸುಪ್ರೀಂ ಕೋರ್ಟ್ ಆದೇಶವಿದೆ. ಬ್ಯಾಡ್ಜ್ ಕಡ್ಡಾಯಗೊಳಿಸಲು ಸಾಧ್ಯವಿಲ್ಲ. ಆದರೆ, ಅಗತ್ಯವಿದ್ದವರಿಗೆ ವಿಶೇಷ ಅಭಿಯಾನದ ಮೂಲಕ ಸಾರಿಗೆ ಅಧಿಕಾರಿಗಳು ಬ್ಯಾಡ್ಜ್ ನೀಡುತ್ತಾರೆ. ಅದರ ಸದುಪಯೋಗಪಡೆದುಕೊಳ್ಳುವಂತೆ ಸಲಹೆ ನೀಡಿದರು.

ರಿಂಗ್ ರಸ್ತೆಯಾಚೆಗೆ ಬಿಡುತ್ತಿಲ್ಲ: ರಿಂಗ್ ರಸ್ತೆಯಿಂದ 8 ಕಿ.ಮೀ.ವರೆಗೆ ಆಟೋರಿಕ್ಷಾ ಸೇವೆ ನೀಡಲು ಜಿಲ್ಲಾಡಳಿತ ಅನುಮತಿ ನೀಡಿದೆ. ಆದರೆ ಪೊಲೀಸರು ಅದಕ್ಕೆ ಅವಕಾಶ ನೀಡುತ್ತಿಲ್ಲ. ಜಿಲ್ಲಾಡಳಿತದಿಂದ ನಮಗೆ ಆ ಬಗ್ಗೆ ಸೂಕ್ತ ನಿರ್ದೇಶನ ಬಂದಿಲ್ಲವೆಂದು ಹೇಳುತ್ತಿದ್ದಾರೆ ಎಂದು ಪದಾಧಿಕಾರಿಗಳು ದೂರಿದರು. ಸಂಚಾರಿ ವಿಭಾಗದ ಡಿಸಿಪಿ ಸುಂದರ್‌ರಾಜ್ ಈ ಬಗ್ಗೆ ಪೊಲೀಸ್ ಸಿಬ್ಬಂದಿಗಳಿಗೆ ಸೂಚನೆ ನೀಡುವುದಾಗಿ ತಿಳಿಸಿದರು.

ಪ್ರಿಪೇಯ್ಡ್ ಕೇಂದ್ರ ಹೆಚ್ಚಿಸಿ: ಆಸ್ಪತ್ರೆಗೆ ರೋಗಿಗಳು ಹಾಗೂ ಅವರ ಸಂಬಂಧಿಗಳು ಬರುವುದರಿಂದ ರಿಕ್ಷಾದವರು ಹೆಚ್ಚು ಹಣ ಸುಲಿಗೆ ಮಾಡಬಾರದೆಂಬ ಉದ್ದೇಶದಿಂದ ಇಂತಹ ಸ್ಥಳಗಳಲ್ಲಿ ಪ್ರಿಪೇಯ್ಡ್ ಆಟೋ ಕೇಂದ್ರಗಳನ್ನು ಸ್ಥಾಪಿಸುವಂತೆ ಹಾಗೂ ಕೇಂದ್ರ ಬಸ್, ರೈಲ್ವೆ ನಿಲ್ದಾಣದ ಮುಂದೆ ಇರುವ ಪ್ರಿಪೇಯ್ಡ್ ಆಟೋ ಕೇಂದ್ರಕ್ಕೆ ಸಿಸಿ ಕ್ಯಾಮರಾ ಅಳವಡಿಸಬೇಕು ಎಂದು ಪದಾಧಿಕಾರಿಗಳು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಪಿ ಸುಂದರ್ ರಾಜ್, ಆಸ್ಪತ್ರೆ ಸೇರಿದಂತೆ ಬೇಡಿಕೆ ಇರುವ ಸ್ಥಳದಲ್ಲಿ ಪ್ರೀಪೇಯ್ಡ್ ಆಟೋ ಕೇಂದ್ರ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸಭೆಯಲ್ಲಿ ಮೈಸೂರು ಪೂರ್ವ ವಲಯ ಎಆರ್‌ಟಿಓ ಮಧುರಾ, ಮೈಸೂರು ಪಶ್ಚಿಮ ಎಆರ್‌ಟಿಓ ರಾಮಚಂದ್ರಪ್ಪ, ಹುಣಸೂರು ಎಆರ್‌ಟಿಓ ನಯಾಜ್ ಪಾಷಾ, ಅಧೀಕ್ಷಕರಾದ ಮಂಜುನಾಥ್, ಶಿವಕುಮಾರ್, ಸಂಯುಕ್ತ ಕರ್ನಾಟಕ ಆಟೋ ರಿಕ್ಷಾ ಚಾಲಕರ ಮತ್ತು ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ವಿ.ಶ್ರೀನಿವಾಸ್ ಮಿತ್ರ, ಕರ್ನಾಟಕ ಚಾಲಕರ ಒಕ್ಕೂಟದ ಶಿವಕುಮಾರ್, ಪೀಸ್ ಆಟೋ ಮತ್ತು ಟ್ಯಾಕ್ಸಿ ಡ್ರೈವರ್ ಅಸೋಸಿಯೇಷನ್ ನಿಂದ ಸೌಮ್ಯ, ಕರುನಾಡ ಸಾರಥಿಗಳ ಸೈನ್ಯ ಟ್ರೇಡ್ ಯೂನಿಯನ್ ಮಹೇಂದ್ರ, ಕರ್ನಾಟಕ ಡಾ.ಬಿ.ಆರ್.ಅಂಬೇಡ್ಕರ್ ಆಟೋ ಚಾಲಕರ ಸಂಘಟನೆಯ ಲಕ್ಷ್ಮೀಕಾಂತ್, ಆದರ್ಶ ಆಟೋ ಮತ್ತು ಟ್ಯಾಕ್ಸಿ ಚಾಲಕರ ಸಂಘದ ರವಿ, ಮಾರ್ಸ್ –ಮೈಸೂರು ಆಟೋ ರಿಕ್ಷಾ ಸರ್ವಿಸ್ ಟ್ರಸ್ಟ್‌ನಿಂದ ನಾಗರಾಜ್, ಸ್ನೇಹಜೀವಿ ಚಾಲಕರ ಟ್ರೇಡಿಂಗ್ ಯೂನಿಯನ್ ಸೋಮಶೇಖರ್, ಜೈ ಕನ್ನಡಾಂಭೆ ಮಹಾಸೇನೆ ರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಯುವತಿ ಬಂಧನ

ಉದ್ಯೋಗಿಯನ್ನು ಸಂಪರ್ಕಿಸಿ, ಮುಂಬೈ ಪೊಲೀಸ್ ಪ್ರಧಾನ ಕಚೇರಿಯ ನೇಹಾ ಶರ್ಮಾ ಎಂದು ಪರಿಚಯಿಸಿ ಕೊಂಡಿದ್ದಾಳೆ. ನಿಮ್ಮ ಹೆಸರಿನಲ್ಲಿ ಹಲವು ನಕಲಿ ಬ್ಯಾಂಕ್ ಖಾತೆಗಳು ಹಾಗೂ ಮೊಬೈಲ್ ಸಂಖ್ಯೆಗಳನ್ನು ತೆರೆಯಲಾಗಿದ್ದು, ಅವುಗಳನ್ನು ಕೋಟ್ಯಾಂತರ ರೂ. ಅಪರಾಧಗಳಿಗೆ ಬಳಸಲಾಗುತ್ತಿದೆ ಎಂದು ಸಂತ್ರಸ್ತ ವ್ಯಕ್ತಿಗೆ ಸುಳ್ಳು ಮಾಹಿತಿ ನೀಡಲಾಗಿತ್ತು. ಜೊತೆಗೆ ಸಂತ್ರಸ್ತ ವ್ಯಕ್ತಿಯು 25 ಲಕ್ಷ ರೂ. ಕಮಿಷನ್ ಪಡೆದ ಆರೋಪ ಮಾಡಲಾಯಿತು.

ಅಲ್ಲದೆ, ನಾವು ಹೇಳಿದಂತೆ ಕೇಳದಿದ್ದರೆ, ಬಂಧನ ಮಾಡುವುದಾಗಿ ಬೆದರಿಕೆ ಹಾಕಲಾಯಿತು. ಹೀಗೆ ವಂಚಕರ ತಂಡವು ತಮ್ಮನ್ನು ಮುಂಬೈ ಪೊಲೀಸ್ ಎಂದು ನಂಬಿಸುವಲ್ಲಿ ಸಫಲವಾಯಿತು. ಆಗ ಒತ್ತಡಕ್ಕೆ ಸಿಲುಕಿದ ಸಂತ್ರಸ್ತ ವ್ಯಕ್ತಿಗೆ ತಮ್ಮ ಉಳಿತಾಯ ಖಾತೆ ಹಣವನ್ನು ಪರಿಶೀಲನಾ ಉದ್ದೇಶಕ್ಕಾಗಿ ಎರಡು ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲು ಸೂಚಿಸಲಾಗಿದೆ. ಇದನ್ನು ನಂಬಿದ ಆ ವ್ಯಕ್ತಿಯು 20.50 ಲಕ್ಷ ರೂ.ಗಳನ್ನು ವರ್ಗಾಯಿಸಿದ್ದಾರೆ. ಬಳಿಕ ಆರೋಪಿಯಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ, ಸಂತ್ರಸ್ತ ವ್ಯಕ್ತಿಗೆ ತಾನು ಮೋಸ ಹೋಗಿರುವುದು ಅರಿವಾಗಿದೆ. ಬಳಿಕ ಆ ವ್ಯಕ್ತಿಯು 'ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್' ಮೂಲಕ ದೂರು ದಾಖಲಿಸಿದ್ದರು.

ಸೈಬರ್ ಅಪರಾಧ ವಿಭಾಗವು ಅ.4ರಂದು ಪ್ರಕರಣ ದಾಖಲಿಸಿಕೊಂಡಿತ್ತು. ಸಂತ್ರಸ್ತ ವ್ಯಕ್ತಿಯು ವರ್ಗಾಯಿಸಿದ ಹಣದಲ್ಲಿ 11.5 ಲಕ್ಷ ರೂ. ಚಂದ್ರಿಕಾ ಅವರ ವೈಯಕ್ತಿಕ ಬ್ಯಾಂಕ್ ಖಾತೆಗೆ ಜಮೆಯಾಗಿರುವುದು ತನಿಖೆ ವೇಳೆ ತಿಳಿದುಬಂದಿದೆ.

ಆಕೆಯು ಮೈಸೂರು ವಿಳಾಸಕ್ಕೆ ನೋಟಿಸ್ ನೀಡಲಾಗಿತ್ತು. ಆದರೆ ಆಕೆಯಿಂದ ವಿಚಾರಣೆಗೆ ಯಾವುದೇ ಸಹಕಾರ ಲಭಿಸಿರಲಿಲ್ಲ. ಹಾಗಾಗಿ ಕೇರಳ ಪೊಲೀಸರ ತಂಡವು ಆಕೆಯನ್ನು ಅಶೋಕಪುರಂನಲ್ಲಿ ಬಂಧಿಸಿದೆ.

ಚಂದ್ರಿಕಾ ಬ್ಯಾಂಕ್ ಖಾತೆಗೆ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆಯು ಪಶ್ಚಿಮ ಬಂಗಾಳದ ಸುರೋಜಿತ್ ಹಲ್ದಾರ್ ಅವರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದ್ದು, ಆತ ಪರಾರಿಯಾಗಿದ್ದಾನೆ. ಈ ಪ್ರಕರಣದ ಮತ್ತೊಬ್ಬ ಆರೋಪಿ ಪತ್ತೆಹಚ್ಚಲು ಶೋಧ ಕಾರ್ಯ ನಡೆಸಲಾಗುತ್ತಿದೆ.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕು ರಾಷ್ಟ್ರಪತಿ, ಪ್ರಧಾನಿ, ಸಿಎಂಗೆ ಕಾಂಗ್ರೆಸ್ ಶಾಸಕ ರಾಜು ಕಾಗೆ ಪತ್ರ

ಬೆಳಗಾವಿ: ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕೂಗು ಹಲವು ವರ್ಷಗಳಿಂದ ಕೇಳಿಬರುತ್ತಿದೆ. ಇದೀಗ ಆಡಳಿತ ಪಕ್ಷ ಕಾಂಗ್ರೆಸ್‌ನ ಶಾಸಕ ರಾಜು ಕಾಗೆಯವರೇ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಪತ್ರ ಬರೆದು ಸುದ್ದಿಯಾಗಿದ್ದಾರೆ. ರಾಜು ಕಾಗೆ ಪತ್ರದ ಬೆನ್ನಲ್ಲೇ ಉತ್ತರ ಕರ್ನಾಟಕ ಹೋರಾಟ ಸಮಿತಿ, ಉತ್ತರ ಕರ್ನಾಟಕ ವಿಕಾಸ ವೇದಿಕೆಯಿಂದ ಮೂರು ಬೇಡಿಕೆಗಳಿಗೆ ಆಗ್ರಹ ವ್ಯಕ್ತವಾಗಿದೆ. ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಇವನ್ನು ಈಡೇರಿಸದಿದ್ದರೆ ಸುವರ್ಣ ವಿಧಾನಸೌಧದ ಮೇಲೆ ಪ್ರತ್ಯೇಕ ರಾಜ್ಯದ ಧ್ವಜಾರೋಹಣ ಎಚ್ಚರಿಕೆ ನೀಡಲಾಗಿದೆ. ಶಾಸಕ ರಾಜು ಕಾಗೆ ಅವರು, 15 ಜಿಲ್ಲೆಗಳನ್ನೊಳಗೊಂಡ ಉತ್ತರ ಕರ್ನಾಟಕ ಪ್ರತ್ಯೇಕವಾಗಿಸಲು ಕೋರಿದ್ದಾರೆ. ಅಭಿವೃದ್ಧಿ ವಿಚಾರದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಅನ್ಯಾಯ ಆಗುತ್ತಿದ್ದು, ಮಲತಾಯಿ ಧೋರಣೆ ತಾರತಮ್ಯ ತೋರಲಾಗುತ್ತಿದೆ. ಆ ಮೂಲಕ ಉತ್ತರ ಕರ್ನಾಟಕ ಹೋರಾಟ ಸಮಿತಿ ಹೋರಾಟಕ್ಕೆ ಶಾಸಕ ಕಾಗೆ ಬೆಂಬಲ ನೀಡಿದ್ದು, ಚಳಿಗಾಲದ ಅಧಿವೇಶನದಲ್ಲೂ ಈ ಬಗ್ಗೆ ಚರ್ಚಿಸುತ್ತೇನೆ ಎಂದಿದ್ದಾರೆ. ದಿವಂಗತ ಉಮೇಶ್ ಕತ್ತಿ ನಿಧನದ ಬಳಿಕ ಶಾಸಕ ಕಾಗೆಯಿಂದ ಈಗ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕೂಗು ವ್ಯಕ್ತವಾಗಿದೆ.

ಭಯೋತ್ಪಾದಕ ಕೃತ್ಯ

ತಂಡ ಈ ಪ್ರಕರಣ ತನಿಖೆ ಮಾಡುತ್ತಿದೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು ಪರಿಸ್ಥಿತಿಯನ್ನು ಪರಿಶೀಲಿಸಲು ಮತ್ತು ದಾಳಿಯ ತನಿಖೆಯನ್ನು ನಿರ್ಣಯಿಸಲು ಭದ್ರತೆಯ ಕುರಿತಾದ ಸಂಪುಟ ಸಮಿತಿ (ಸಿಸಿಎಸ್) ಸಭೆಯನ್ನು ಕರೆದಿದ್ದರು. ಈ ಘಟನೆಯ ತನಿಖೆಯನ್ನು ಅತ್ಯಂತ ತುರ್ತಾಗಿ ಮತ್ತು ವೃತ್ತಿಪರತೆಯಿಂದ ಮುಂದುವರಿಸಬೇಕೆಂದು ಸಂಪುಟವು ನಿರ್ದೇಶಿಸಿದೆ. ಇದರಿಂದಾಗಿ ದುಷ್ಕರ್ಮಿಗಳು, ಅವರ ಸಹಚರರು ಮತ್ತು ಅವರಿಗೆ ಕುಮ್ಮಕ್ಕು ನೀಡಿದವರನ್ನು ಗುರುತಿಸಿ ವಿಳಂಬವಿಲ್ಲದೆ ಶಿಕ್ಷೆ ನೀಡಲು ಸಹಾಯವಾಗುತ್ತದೆ. ಈ ಹೇಡಿತನದ ಕೃತ್ಯವನ್ನು ಮೋದಿ ಸಂಪುಟ ಉಗ್ರವಾಗಿ ಖಂಡಿಸಿದೆ. ಭಯೋತ್ಪಾದನೆಯ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳ ಬಗ್ಗೆ ಶೂನ್ಯ ಸಹಿಷ್ಣುತೆಯ ನೀತಿಗೆ ಭಾರತದ ಅಚಲ ಬದ್ಧತೆಯನ್ನು ಸಂಪುಟ ಪುನರುಚ್ಚರಿಸುತ್ತದೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಕೇಂದ್ರ ಸಚಿವ ಸಂಪುಟ ಸಭೆ ಮುಗಿದ ಬೆನ್ನಲ್ಲೇ ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಭದ್ರತಾ ಸಭೆ ನಡೆಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಪ್ರಮುಖರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಈಗಾಗಲೇ ಕೇಂದ್ರ ಸರ್ಕಾರ ದೆಹಲಿ ಕಾರು ಸ್ಫೋಟ ಪ್ರಕರಣ ಭಯೋತ್ಪಾದನಾ ಕೃತ್ಯ ಎಂದು ಅಧಿಕೃತವಾಗಿ ಘೋಷಣೆ ಮಾಡಿರುವ ಕಾರಣ ಆಪರೇಶನ್ ಸಿಂದೂರ್ ಕಾರ್ಯಾಚರಣೆ ದೊಡ್ಡ ಮಟ್ಟದಲ್ಲಿ ನಡೆಯುವ ಸಾಧ್ಯತೆ ಇದೆ. ಇದಕ್ಕೂ ಮೊದಲು ಭಾರತದೊಳಗೆ ಇರುವ ಸ್ಲೀಪರ್ ಸೆಲ್, ಉಗ್ರರ ಜೈಲಿಗಟ್ಟಲು ಸೂಚನೆ ನೀಡಲಾಗಿದೆ.

ಕೆಂಪುಕೋಟೆ ಪ್ರದೇಶಕ್ಕೆ ಭೇಟಿ ನೀಡಿದ್ದರು

ಮಾದರಿಗಳು ಮತ್ತು ಭದ್ರತಾ ವ್ಯವಸ್ಥೆಗಳನ್ನು ಅಧ್ಯಯನ ಮಾಡಲು ಕೆಂಪು ಕೋಟೆಯ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅವರ ಚಲನವಲನಗಳನ್ನು ಟವರ್ ಲೊಕೇಶನ್ ಡೇಟಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಸಿಸಿಟಿವಿ ದೃಶ್ಯಗಳ ಮೂಲಕ ದೃಢೀಕರಿಸಲಾಗಿದೆ. ನಿಧಿ, ಲಾಜಿಸ್ಟಿಕಲ್ ಬೆಂಬಲ, ಮಾಡ್ಯೂಲ್‌ಗಾಗಿ ಸ್ಫೋಟಕಗಳ ಖರೀದಿಯನ್ನು ಪತ್ತೆಹಚ್ಚಲು ಅಧಿಕಾರಿಗಳು ಈಗ ಶಂಕಿತರ ಡಿಜಿಟಲ್ ಹೆಜ್ಜೆಗುರುತುಗಳು, ಸಂವಹನಗಳನ್ನು ಪರಿಶೀಲಿಸುತ್ತಿದ್ದಾರೆ. ಕೆಂಪು ಕೋಟೆ ಬಳಿ ನಡೆದ ಪ್ರಬಲ ಸ್ಫೋಟದ ನಿಖರವಾದ ಕ್ಷಣವನ್ನು ಸೆರೆಹಿಡಿದ ಸಿಸಿಟಿವಿ ದೃಶ್ಯಾವಳಿ ಬೆಳಕಿಗೆ ಬಂದಿದೆ. ಕೆಂಪು ಕೋಟೆ ಕ್ರಾಸಿಂಗ್‌ನಲ್ಲಿ ಸ್ಥಾಪಿಸಲಾದ ಕಣ್ಗಾವಲು ಕ್ಯಾಮೆರಾದಿಂದ ದಾಖಲಿಸಲಾದ ದೃಶ್ಯವು ಜನನಿಬಿಡ ಸಂಚಾರ ಚಲನೆಗಳನ್ನು ತೋರಿಸಿದೆ.

ಪ್ರೊಫೆಸರ್ ನೇಮಿಸಿಕೊಂಡಿದ್ದ ಅಲ್ ಫಲಾಹ್ ವಿವಿ!

ವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಡಾ. ನಿಸಾರ್–ಉಲ್–ಹಸನ್‌ನನ್ನು 2023 ರಲ್ಲಿ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸಂವಿಧಾನದ 311(2)(ಸಿ) ವಿಧಿಯ ಅಡಿಯಲ್ಲಿ ವಜಾಗೊಳಿಸಿದ್ದರು. ರಾಜ್ಯದ ಭದ್ರತೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಇಲಾಖಾ ವಿಚಾರಣೆಯಿಲ್ಲದೆ ಸಾರ್ವಜನಿಕ ಸೇವಕನನ್ನು ವಜಾಗೊಳಿಸಲು ಈ ನಿಬಂಧನೆ ಸರ್ಕಾರಕ್ಕೆ ಅವಕಾಶ ನೀಡುತ್ತದೆ.

ಡಾ.ನಿಸಾರ್–ಉಲ್–ಹಸನ್ ವಜಾಗೊಳ್ಳುವ ಮೊದಲು ಶ್ರೀನಗರದ ಶ್ರೀ ಮಹಾರಾಜ ಹರಿ ಸಿಂಗ್ ಆಸ್ಪತ್ರೆಯಲ್ಲಿ ಸಹಾಯಕ ವೈದ್ಯಕೀಯ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದ. ಜಮ್ಮು–ಕಾಶ್ಮೀರದಲ್ಲಿ ವಜಾಗೊಳಿಸಿದ ನಂತರ, ಡಾ. ನಿಸಾರ್–ಉಲ್–ಹಸನ್‌ನನ್ನು ಫರಿದಾಬಾದ್‌ನ ಅಲ್–ಫಲಾಹ್ ವಿವಿಯು ನೇಮಕ ಮಾಡಿಕೊಂಡಿದೆ. ಆತನನ್ನು ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ವಿಭಾಗದಲ್ಲಿ ಪ್ರಾಧ್ಯಾಪಕನನ್ನಾಗಿ ನೇಮಿಸಲಾಗಿದೆ. 2014 ರಲ್ಲಿ ಸ್ಥಾಪನೆಯಾದ ಅಲ್–ಫಲಾಹ್ ವಿಶ್ವವಿದ್ಯಾಲಯವು ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಬಂಧ ಹೊಂದಿದೆ ಎಂಬ ಆರೋಪವನ್ನು ನಿರಾಕರಿಸಿದೆ.

ಕೆಂಪು ಕೋಟೆ ಅಲ್ಲ; ಅಯೋಧ್ಯೆ, ವಾರಣಾಸಿ!

ಫರಿದಾಬಾದ್‌ನಲ್ಲಿ ಡಾ. ಶಾಹೀನ್ ಸೇರಿದಂತೆ ಕೆಲವರನ್ನು ಬಂಧಿಸಿ ಸುಮಾರು 2900 ಕೆಜಿ ಸ್ಫೋಟಕ ವಸ್ತುಗಳು ಮತ್ತು ಎಕೆ 47 ಬಂದೂಕು ಗಳನ್ನು ವಶಪಡಿಸಿಕೊಳ್ಳುವ ಮೂಲಕ ಆ ಸಂಚನ್ನು ವಿಫಲ ಗೊಳಿಸಿದ್ದರು. ದೆಹಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ ಸ್ಫೋಟ ಈ ಜಾಲದ ಮೂಲ ಯೋಜನೆಯ ಭಾಗವಾಗಿರಲಿಲ್ಲ. ಭದ್ರತಾ ತಂಡಗಳು ನಡೆಸಿದ ಕಾರ್ಯಾಚರಣೆಯ ನಂತರ ಈ ಜಾಲ ಒತ್ತಡದಲ್ಲಿದ್ದು, ಗಾಬರಿಗೊಂಡಿತ್ತು ಎಂದು ತನಿಖೆಯಿಂದ ತಿಳಿದುಬಂದಿದೆ. ದೆಹಲಿ ಸ್ಫೋಟಕ್ಕೆ ಸಿದ್ಧತೆಗಳು ಸಮರ್ಪಕವಾಗಿ ಮಾಡಿಕೊಂಡಿರಲಿಲ್ಲ. ಸ್ಫೋಟಕ ಸಾಧನದಲ್ಲಿ ಟೈಮರ್ ಅಥವಾ ರಿಮೋಟ್ ಟ್ರಿಗರ್ ಇರಲಿಲ್ಲ. ಇದರಿಂದ ಸ್ಫೋಟ ಆಕಸ್ಮಿಕವಾಗಿ ಅಥವಾ ಅವಸರದಲ್ಲಿ ಸಂಭವಿಸಿರಬಹುದು. ಸ್ಫೋಟಕಗಳನ್ನು ಸಾಗಿಸುತ್ತಿದ್ದ ಸಮಯದಲ್ಲಿ ಸಾಧನವು ಅಕಾಲಿಕವಾಗಿ ಸಿಡಿದಿರಬಹುದು ಎಂದು ಶಂಕಿಸಲಾಗಿದೆ.

ಮೈಸೂರು ಮಿತ್ರ

ಸಾಗಣಿಕೆ ನಿರಾಕರಣೆ ಆರೋಪ: ಮೈಸೂರಲ್ಲಿ ಲಾರಿ ಮಾಲೀಕರು, ಏಜೆಂಟರ ಸಂಘದಿಂದ ಪ್ರತಿಭಟನೆ



ಮೈಸೂರಿನ ಜೆಪಿ ನಗರದಲ್ಲಿರುವ ಮಹೇಂದ್ರ ರೋಡ್ ಲೈನ್ ಮತ್ತು ಕರ್ನಾಟಕ ರೋಡ್ ಲೈನ್ ಸಂಸ್ಥೆ ಮುಂಭಾಗ ಫೇಡರೇಷನ್ ಆಫ್ ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಏಜೆಂಟ್‌ರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ನ. 12(ಜಿಎ)–ಫೆಡರೇಷನ್ ಆಫ್ ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಏಜೆಂಟ್‌ರ ಸಂಘದ ಸದಸ್ಯರ ವಾಹನಗಳಿಗೆ ಸರಕು ಸಾಗಾಣಿಕೆ ಅವಕಾಶವನ್ನು ನಿರಾಕರಿಸಲಾಗಿದೆ ಎಂದು ಆರೋಪಿಸಿ ಮೈಸೂರಿನ ಜೆಪಿ ನಗರ ದಲ್ಲಿರುವ ಮಹೇಂದ್ರ ರೋಡ್ ಲೈನ್ ಮತ್ತು ಕರ್ನಾಟಕ ರೋಡ್ ಲೈನ್ ಸಂಸ್ಥೆ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎನ್.ಮಂಜುನಾಥ್‌ರಾವ್ ಮಾತನಾಡಿ, ಕಳೆದ ಏಪ್ರಿಲ್ ತಿಂಗಳಿನಲ್ಲಿ ಸರ್ಕಾರ ಡಿಸೇಲ್ ದರ ಏರಿಕೆ ಮಾಡಿದ ವಿರುದ್ಧ ಕರ್ನಾಟಕ ರಾಜ್ಯ ಲಾರಿ ಮಾಲೀಕರು ಮತ್ತು ಏಜೆಂಟ್ ಅಸೋಸಿಯೇಷನ್ ಅಧ್ಯಕ್ಷ ಜಿ.ಆರ್.ಷಣ್ಮುಗಪ್ಪ ಮಾರ್ಗದರ್ಶನದಲ್ಲಿ ಅನ್ಯ ಸಂಘಟನೆಗಳು ಲಾರಿ ಮುಷ್ಕರ ಮಾಡಲು ತೀರ್ಮಾನಿಸಿದರು. ಇದಕ್ಕೆ ನಾವು ಬೆಂಬಲ ಸೂಚಿಸಲಿಲ್ಲ ಎಂದರು.

ನಮ್ಮ ಫೆಡರೇಷನ್ ಆಫ್ ಕರ್ನಾಟಕ ದಲ್ಲಿ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘದ ಗೌರವಾಧ್ಯಕ್ಷ ಚೆನ್ನಾರೆಡ್ಡಿ ರಾಜ್ಯದ ಎಲ್ಲಾ ಮಾಲೀಕರ ಸಭೆ ನಡೆಸಿ, ಒಂದು ದಿನ ಲಾರಿ ನಿಲ್ಲಿಸಿದರೆ ಸಂಕಷ್ಟದಲ್ಲಿರುವ ಲಾರಿ ಮಾಲೀಕರಿಗೆ ಮತ್ತಷ್ಟು ನಷ್ಟವಾಗಲಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ಕರ್ನಾಟಕದಲ್ಲಿ ಡೀಸೆಲ್ ದರ ಕಡಿಮೆ ಇದೆ. ಆದ್ದರಿಂದ ಏಕಾಏಕಿ ಮುಷ್ಕರ ಮಾಡುವ ಬದಲು ಗಡುವು ನೀಡೋಣ ಎಂದು ನಿರ್ಧರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಅಂದು ಮುಷ್ಕರವನ್ನು ವಿರೋಧಿಸಿ, ಬೆಂಬಲ ನೀಡಲಿಲ್ಲ. ಇದನ್ನು ಗುರಿಯಾಗಿಸಿಕೊಂಡು ಫೇಡರೇಷನ್ ಆಫ್ ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಏಜೆಂಟ್‌ರ ಸಂಘದ ಸದಸ್ಯರ ವಾಹನಗಳಿಗೆ ಸರಕು ಸಾಗಾಣಿಕೆ ಅವಕಾಶವನ್ನು ನಿರಾಕರಿಸಿದ್ದಾರೆ. ಈ ಬಗ್ಗೆ ಈಗಾಗಲೇ ಶಾಸಕರು, ಸಂಸದರು, ಜಿಲ್ಲಾಧಿಕಾರಿ ಸೇರಿದಂತೆ ಎಲ್ಲಾ ಅಧಿಕಾರಿಗಳ ಗಮನಕ್ಕೂ ತರಲಾಗಿದ್ದು, ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಹೇಂದ್ರ ರೋಡ್ ಲೈನ್ ಮತ್ತು ಕರ್ನಾಟಕ ರೋಡ್ ಲೈನ್ ಎರಡು ಮೈಸೂರಿನ ಪ್ರಮುಖ ಸಂಸ್ಥೆಯಾಗಿದ್ದು, ಯುಬಿ, ಎಸ್‌ಪಿಆರ್, ಬೀರಾ, ಏಷಿಯನ್ ಪೇಯಿಂಟ್ ಸೇರಿದಂತೆ ಅನೇಕ ಕಂಪನಿಗಳ ಗುತ್ತಿಗೆದಾರರಾಗಿದ್ದು, ಲೋಡ್ ನೀಡುವಂತೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಕಾರ್ಯಾಧ್ಯಕ್ಷ ಶಿವಸ್ವಾಮಿ, ಉಪಾಧ್ಯಕ್ಷರಾದ ಪಿ.ದಿನೇಶ್, ಅಬ್ದುಲ್ ಸಲೇಶ್, ಕಾನೂನು ಸಲಹೆಗಾರ ವಿ.ಮಹೇಶ್, ಕೃಷ್ಣಕುಮಾರ್, ಮಂಜುನಾಥ್, ಜಯರಾಜ್, ಸಲೀಂ ಅಹಮ್ಮದ್, ಶೈಲೇಂದ್ರ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ನಾಳೆ ವಿಶ್ವ ಮಧುಮೇಹ ದಿನಾಚರಣೆ

ಮಹಾನ್ ವತಿಯಿಂದ ಮೈಸೂರಿನ ವಿವಿಧೆಡೆ ಸರಣಿ ಆರೋಗ್ಯ ತಪಾಸಣೆ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಹಾನ್ ಮಾಜಿ ಅಧ್ಯಕ್ಷ ಡಾ.ಕೆ.ಜಾವೀದ್ ನಯಿಮ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರದ ಸ್ಥಳಗಳು...

ಕುಕ್ಕರಹಳ್ಳಿ ಕೆರೆ ಆವರಣ, ಬೋಗಾದಿ 2ನೇ ಹಂತದ ಸಿಎಫ್‌ಟಿಆರ್‌ಐ ಪಾರ್ಕ್, ಸರಸ್ವತಿಪುರಂನ ಜವರೇಗೌಡ ಪಾರ್ಕ್, ಜಾಕಿ ಕ್ವಾಟ್ರರ್ಸ್ ಸಮೀಪದ ಕಾರಂಜಿಕೆರೆ, ಲಲಿತಮಹಲ್ ಪ್ಯಾಲೆಸ್ ಮೈದಾನ, ವಿಜಯನಗರ ಯೋಗನರಸಿಂಹಸ್ವಾಮಿ ದೇವಸ್ಥಾನದ ಎದುರಿನ ಪಾರ್ಕ್, ಆಕಾಶವಾಣಿ ಸಮೀಪದ ಚೆಲುವಾಂಬ ಪಾರ್ಕ್, ಮೈಸೂರು ವಿವಿ ಓವೆಲ್ ಮೈದಾನ, ಚಾಮುಂಡಿ ಬೆಟ್ಟದ ತಪ್ಪಲಿನ ಕೆ.ಸಿ.ಬಡಾವಣೆ ಪಾರ್ಕ್, ಸುಬ್ಬರಾಯನಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಕಾಮಾಕ್ಷಿ ಆಸ್ಪತ್ರೆ ಸಮೀಪದ ಸಂಜೀವಿನಿ ಪಾರ್ಕ್, ವಿವೇಕಾನಂದ ನಗರದ ಲಿಂಗಾಬುದಿ ಪಾರ್ಕ್, ಕೃಷ್ಣಮೂರ್ತಿಪುರಂನ ಮೈಸೂರು ಅನಂತಸ್ವಾಮಿ ಪಾರ್ಕ್.

ಭಾನವಿ ಆಸ್ಪತ್ರೆಯಿಂದ ಜನಜಾಗೃತಿ ಜಾಥಾ

ಮೈಸೂರು,12(ಎಂಕೆ)– ವಿಶ್ವ ಡಯಾಬಿಟಿಸ್ ದಿನ(ನ.14)ದ ಅಂಗವಾಗಿ ಭಾನವಿ ಆಸ್ಪತ್ರೆ ವತಿಯಿಂದ 'ಜೀವನದ ಎಲ್ಲಾ ಹಂತಗಳಲ್ಲಿ ಮಧುಮೇಹ' ಶೀರ್ಷಿಕೆಯಡಿ ಜನಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಭಾನವಿ ಆಸ್ಪತ್ರೆ ಮುಖ್ಯಸ್ಥ ಡಾ.ಎನ್.ವಿಜಯ್ ಚೆಲುವರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಂದು ಬೆಳಗ್ಗೆ ಮೈಸೂರು ನಗರಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜನ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಆಸ್ಪತ್ರೆಯ ಆವರಣದಿಂದ ಜಾಥಾ ಆರಂಭವಾಗಿ ಅಕ್ಷಯ ಭಂಡಾರ ವೃತ್ತ, ಬ್ಯಾಂಕ್ ಆಫ್ ಬರೋಡ ವೃತ್ತ, ಎ ಟು ಝಡ್ ಸರ್ಕಲ್ ಮೂಲಕ ವಾಪಸ್ ಆಸ್ಪತ್ರೆ ಆವರಣ ತಲುಪಲಿದೆ ಎಂದರು.

ಜಾಥಾ ನಂತರ ಸಾರ್ವಜನಿಕರಿಗೆ ಉಚಿತ ತಪಾಸಣೆ ನಡೆಯಲಿದೆ. ಶಿಬಿರದಲ್ಲಿ ಸಕ್ಕರೆ ಕಾಯಿಲೆ, ರಕ್ತದೊತ್ತಡ ಹಾಗೂ ಇನ್ನಿತರೆ ಪರೀಕ್ಷೆಗಳನ್ನು ಮಾಡಲಾಗುವುದು. ಕುವೆಂಪುನಗರ ಸೇರಿದಂತೆ ಮೈಸೂರು ನಗರದ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಪಾಸಣಾ ಶಿಬಿರದಲ್ಲಿ ಭಾಗವಹಿಸಿ, ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಮನವಿ ಮಾಡಿದರು. ಭಾನವಿ ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್, ಡಾ.ಚಂದನ್‌ಕುಮಾರ್, ನಿರಂಜನ್ ಉಪಸ್ಥಿತರಿದ್ದರು.

ಮೈಸೂರು,12(ಎಂಕೆ)– ಮಹಾನ್ (ಮೈಸೂರ್ ಅಸೋಸಿಯೇಷನ್ ಫಾರ್ ಹಾಸ್ಪಿಟಲ್, ನರ್ಸಿಂಗ್ ಹೋಮ್ಸ್, ಡಯಾಗ್ನೊಸ್ಟಿಕ್ಸ್ ಅಂಡ್ ಕ್ಲಿನಿಕ್) ವತಿಯಿಂದ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ನ.14 ರಂದು ಮೈಸೂರಿನ 15–20 ಸ್ಥಳಗಳಲ್ಲಿ ಸರಣಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದೆ ಎಂದು ಮಹಾನ್ ಮಾಜಿ ಅಧ್ಯಕ್ಷ ಡಾ.ಕೆ.ಜಾವೀದ್ ನಯಿಮ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸರಣಿ ಉಚಿತ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಹಾಗೂ ಡಿಹೆಚ್‌ಓ ಡಾ.ಕುಮಾರಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಳಗ್ಗೆ 7 ಗಂಟೆಯಿಂದಲೇ ತಪಾಸಣೆ ಆರಂಭವಾಗಿ ಸಂಜೆ 7 ಗಂಟೆಯವರೆಗೂ ನಡೆಯಲಿದೆ ಎಂದು ತಿಳಿಸಿದರು.

ಪ್ರಪಂಚದಲ್ಲಿಯೇ ಡಯಾಬಿಟಿಸ್ ಇರುವವರ ಸಂಖ್ಯೆ ಚೀನಾದಲ್ಲಿ ಹೆಚ್ಚಾಗಿದ್ದು, ನಂತರದ ಸ್ಥಾನದಲ್ಲಿ ಭಾರತ ಇದೆ. ದೇಶದಲ್ಲಿ ಡಯಾಬಿಟಿಸ್‌ನಿಂದ ಬಳಲುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದೇ ರೀತಿ ಮುಂದುವರೆದರೆ ಕೆಲವೇ ವರ್ಷಗಳಲ್ಲಿ ಚೀನಾ ದೇಶವನ್ನು ಹಿಂದಿಕ್ಕುವ ಸಾಧ್ಯತೆ ಇದೆ. ಆದ್ದರಿಂದ ಡಯಾಬಿಟಿಸ್ ಸಮಸ್ಯೆ ವಿಚಾರದಲ್ಲಿ ಆರಂಭದಲ್ಲೇ ಜಾಗೃತಿಗೊಳ್ಳುವುದರಿಂದ ನಿಯಂತ್ರಿಸಬಹುದಾಗಿದೆ. ದೇಶದ ಶೇ.15 ರಷ್ಟು ಜನರಿಗೆ ಡಯಾಬಿಟಿಸ್ ಇದ್ದರೆ, ಶೇ.17ರಷ್ಟು ಜನರಿಗೆ ಡಯಾಬಿಟಿಸ್ ಪ್ರಾಥಮಿಕ ಹಂತದಲ್ಲಿದೆ. ಇಂತಹವರಿಗೆ ಡಯಾಬಿಟಿಸ್ ಕುರಿತು ಅರಿವು ಅಗತ್ಯವಾಗಿದೆ ಎಂದರು. ಮಹಾನ್ ಸಂಸ್ಥಾಪಕ ಅಧ್ಯಕ್ಷ ಡಾ.ಮಹೇಶ್‌ಕುಮಾರ್, ಉಪಾಧ್ಯಕ್ಷರಾದ ಡಾ.ಎನ್.ವಿಜಯ್ ಚೆಲುವರಾಜ್, ಡಾ.ಬಿ.ಎನ್.ರಾಜೀವ, ಕಾರ್ಯದರ್ಶಿ ಡಾ.ಹೆಚ್.ಆರ್.ಅಭಿಜಿತ್, ಜಂಟಿ ಕಾರ್ಯದರ್ಶಿ ಡಾ.ಬಸವರಾಜು, ಉದ್ಯಮಿ ಗುರುರಾಜ್ ಇದ್ದರು.

ಕೋರಿಕೆ ವರ್ಗಾವಣೆಗೊಂಡ ಶಿಕ್ಷಕರು, ಪ್ರಸಕ್ತ ವರ್ಷದ ಅಂತ್ಯದವರೆಗೆ ಅದೇ ಶಾಲೆಯಲ್ಲಿರುವುದು

ಡಿಡಿಪಿಐಗಳಿಗೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಆದೇಶ

ಮೈಸೂರು, ನ.12(ಎಸ್‌ಪಿಎನ್)– ಕೌನ್ಸಿಲಿಂಗ್ ಮೂಲಕ ಕೋರಿಕೆ ವರ್ಗಾವಣೆಯಾಗಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅದೇ ಶಾಲೆಯ ಅದೇ ಹುದ್ದೆಯಲ್ಲಿ ಮುಂದುವರೆಸುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಎಲ್ಲಾ ಡಿಡಿಪಿಐ ಹಾಗೂ ಬಿಇಓಗಳಿಗೆ ನ.11ರಂದು ಆದೇಶಿಸಿದ್ದಾರೆ.

ನಿಯಮಗಳ ಪ್ರಕಾರ ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರನ್ನು ಒಳಗೊಂಡಂತೆ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕವೃಂದದವರಿಗೆ ಸಾಮಾನ್ಯ ವರ್ಗಾವಣೆಯಲ್ಲಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಈ ಬಾರಿಯ ಪರಸ್ಪರ ವರ್ಗಾವಣೆಗೊಂಡ ಶಿಕ್ಷಕರನ್ನು ಹೊರತುಪಡಿಸಿ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫಲಿತಾಂಶವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕೌನ್ಸಿಲಿಂಗ್ ಮೂಲಕ ಕೋರಿಕೆ ವರ್ಗಾವಣೆಯಾಗಿರುವ ಎಲ್ಲಾ ಶಿಕ್ಷಕರನ್ನು ಪ್ರಸ್ತುತ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅದೇ ಶಾಲೆಯ ಅದೇ ಹುದ್ದೆಯಲ್ಲಿ ಮುಂದುವರೆಸುವುದು ಹಾಗೂ ಏ.9ರಂದು ಮೂಲ ಕರ್ತವ್ಯ ನಿರತ ಶಾಲೆಯಿಂದ ಬಿಡುಗಡೆಗೊಂಡು ಏ.10ರಂದು ವರ್ಗಾಯಿತ ಶಾಲೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು, ಈ ಕುರಿತು ಎಲ್ಲಾ ಸಕ್ಷಮ ವರ್ಗಾವಣಾ ಪ್ರಾಧಿಕಾರಿಗಳು ಅಗತ್ಯ ಕ್ರಮವಹಿಸುವಂತೆ ಆಯುಕ್ತ ಸೂಚಿಸಿದ್ದಾರೆ.

ವಾಣಿಜ್ಯ ಶಿಕ್ಷಣದಲ್ಲಿ ಐಪಿಆರ್ ಜಾಗೃತಿ ಕುರಿತು ಕಾರ್ಯಾಗಾರ

ಮೈಸೂರು,ನ.12–ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ ಮತ್ತು ಐಕ್ಯೂಎಸಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಸಹಯೋಗದೊಂದಿಗೆ ವಾಣಿಜ್ಯ ಶಿಕ್ಷಣದಲ್ಲಿ ಐಪಿಆರ್ ಜಾಗೃತಿ ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ಆಯೋಜಿಸಲಾಗಿದೆ.

ಕಾರ್ಯಾಗಾರದ ಉದ್ಘಾಟನೆಯನ್ನು ನ.14 ಬೆಳಗ್ಗೆ 10 ಗಂಟೆಗೆ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಡೆಪ್ಯುಟಿ ಡೀನ್ (ರೀಸರ್ಚ್), ಡಾ.ವಿ. ಬಾಲ ಮುರಳೀಧರ ನೆರವೇರಿಸಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡರು ಅಧ್ಯಕ್ಷತೆ ವಹಿಸುವರು. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್ ಹಾಗೂ ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು ಗೌರವ ಅತಿಥಿಗಳಾಗಿರುತ್ತಾರೆ. ಪ್ರಾಂಶುಪಾಲ ಡಾ.ಎಸ್.ಮರಿಗೌಡ ಮತ್ತು ಕಾರ್ಯಾಗಾರದ ಕಾರ್ಯದರ್ಶಿ ಪ್ರೊ.ಎನ್.ಗೀತಾ ಉಪಸ್ಥಿತರಿರುತ್ತಾರೆ.

ನಿಧನ



ಡಾ. ಸಿ.ಕೆ.ಶಶಿಕಲಾ ಕುಮಾರ್

ಮೈಸೂರು,ನ.12–ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಅವರ ತೃತೀಯ ಪುತ್ರಿ ಡಾ.ಸಿ.ಕೆ.ಶಶಿಕಲಾ ಕುಮಾರ್ (54) ಅವರು ಇಂದು ರಾಮನಗರದಲ್ಲಿ ನಿಧನರಾದರು. ಮೃತರು ಪತಿ ಡಾ.ವೆಂಕಟರಾಮ್‌ಕುಮಾರ್, ಪುತ್ರಿಯರಾದ ಪೂರ್ವಿಕಾ, ಗೌರಿ, ತಂದೆ ಸಿಪಿಕೆ, ತಾಯಿ ಶಾರದಾ ಸಿಪಿಕೆ, ಸಹೋದರಿಯರು, ಸಹೋದರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರು ರಾಮನಗರ ಆಸ್ಪತ್ರೆಯಲ್ಲಿ ರೇಡಿಯಾಲಜಿಸ್ಟ್ ಆಗಿದ್ದು, ಪಾರ್ಥಿವ ಶರೀರವನ್ನು ಅಲ್ಲಿಂದ ತಂದು, ಪಡುವಾರಹಳ್ಳಿಯಲ್ಲಿ ತಂದೆ ಸಿಪಿಕೆ ಅವರ ನಿವಾಸದಲ್ಲಿ ಇರಿಸಲಾಗಿದೆ. ಅಂತ್ಯಕ್ರಿಯೆ ನಾಳೆ(ಗುರುವಾರ) ಬೆಳಗ್ಗೆ 10 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿಕ್ಷಕರ ದಿನಾಚರಣೆ ಅಂಗವಾಗಿ ಶ್ರೇಷ್ಠ ಶಿಕ್ಷಕರಿಗೆ ಸನ್ಮಾನ



ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿದ ನಾಲ್ವರು ಶ್ರೇಷ್ಠ ಶಿಕ್ಷಕರನ್ನು ಸನ್ಮಾನಿಸುವ ಮೂಲಕ ಶಿಕ್ಷಕರ ದಿನ ಆಚರಿಸಲಾಯಿತು.

ಮೈಸೂರು: ರೋಟರಿ ಮೈಸೂರು ಸೌತ್ ಈಸ್ಟ್ ಹಾಗೂ ಇನ್ನರ್ ವೀಲ್ ಕ್ಲಬ್ ಮೈಸೂರು ಸೌತ್ ಈಸ್ಟ್ ಸಹಯೋಗದೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿದ ನಾಲ್ವರು ಶ್ರೇಷ್ಠ ಶಿಕ್ಷಕರನ್ನು ಸನ್ಮಾನಿಸುವ ಮೂಲಕ ಶಿಕ್ಷಕರ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕ್ಲಬ್ ಅಧ್ಯಕ್ಷ ರೋ ಮುರಳೀಧರ ವೈ ವಿ.ಕಾರ್ಯದರ್ಶಿ ರೋ ಸುರೇಶ್, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯರಾದ ಡಾ.ಈ.ಸಿ.ನಿಂಗರಾಜ್‌ಗೌಡ, ರೋ ವೆಂಕಟೇಶ ಬಿ.ಆರ್. ಮತ್ತು ಇನ್ನರ್ ವೀಲ್ ಅಧ್ಯಕ್ಷೆ ಶ್ರೀಮತಿ ಕೆ.ವಿ. ಶ್ರೀಲಕ್ಷ್ಮಿ ವಾಸುದೇವನ್ ಉಪಸ್ಥಿತರಿದ್ದರು.

ಸಂಗೀತ ಮತ್ತು ಭರತನಾಟ್ಯ ಶಿಕ್ಷಕಿ ವಿದುಷಿ ಆರತಿ ಅರುಣ್, ವೇದ ವಿದ್ವಾಂಸರು ಮತ್ತು ಅವಧೂತ ದತ್ತ ಪೀಠದ ವೇದ ಪಾಠಶಾಲೆಯ ಪ್ರಾಚಾರ್ಯರಾದ ಶ್ರೀಹರಿ ವೀರಭದ್ರಶರ್ಮಾ, ಶಾರದಾ ವಿಲಾಸ ಕಾಲೇಜು ಸ್ನಾತಕೋತ್ತರ ಕೇಂದ್ರ ಅಕಾಡೆಮಿಕ್ ಡೀನ್ ಡಾ. ಸತ್ಯನಾರಾಯಣ, ಪ್ರಿನ್ಸಿಪಾಲ್ ಎಂ.ಮರಿಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ.ಸತ್ಯನಾರಾಯಣ, ಪ್ರತಿ ವರ್ಷ ಸೆಪ್ಟೆಂಬರ್ 5ರಂದು ಭಾರತದಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತದೆ. ಈ ದಿನವನ್ನು ಭಾರತದ ದ್ವಿತೀಯ ರಾಷ್ಟ್ರಪತಿ, ಮಹಾನ್ ತತ್ವಜ್ಞಾನಿ, ಶಿಕ್ಷಣತಜ್ಞ ಹಾಗೂ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಆಚರಿಸಲಾಗುತ್ತದೆ.

ಶಿಕ್ಷಕರ ಪರಿಶ್ರಮ, ತ್ಯಾಗ, ನೈತಿಕತೆ ಹಾಗೂ ಸಮಾಜ ನಿರ್ಮಾಣದ ಕಾರ್ಯವನ್ನು ಸ್ಮರಿಸಲು ಈ ದಿನವನ್ನು ಸಮರ್ಪಿಸಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಜೀವನವನ್ನು ರೂಪಿಸುವ ಮಾರ್ಗದರ್ಶಕರು. ಅವರು ಜ್ಞಾನವನ್ನು ನೀಡುವುದಷ್ಟೇ ಅಲ್ಲದೆ, ಉತ್ತಮ ಮೌಲ್ಯಗಳನ್ನು ಬೋಧಿಸುತ್ತಾರೆ. ಡಾ. ರಾಧಾಕೃಷ್ಣನ್ ಅವರು ತಮ್ಮ ಜನ್ಮದಿನವನ್ನು ಆಚರಿಸುವ ಬದಲು, ಅದನ್ನು ಶಿಕ್ಷಕರ ದಿನವಾಗಿ ಗುರುತಿಸುವಂತೆ ಸೂಚಿಸಿದ್ದರು. ಶಿಕ್ಷಕರ ದಿನಾಚರಣೆ ನಮಗೆ ಗುರು ಬೃಹತ್, ಜ್ಞಾನ ಅಮೂಲ್ಯ, ಶಿಕ್ಷಕರ ಪಾತ್ರ ಅಪ್ರತಿಮ ಎಂಬುದನ್ನು ನೆನಪಿಸುತ್ತದೆ ಎಂದರು.

ಭಾರತೀಯ ಸಂಸ್ಕೃತಿಯಲ್ಲಿ ಗುರು–ಶಿಷ್ಯ ಪರಂಪರೆ ಅತ್ಯಂತ ಪವಿತ್ರವಾದ ಸಂಬಂಧವಾಗಿದೆ. ಇದು ಸಾವಿರಾರು ವರ್ಷಗಳಿಂದ ನಮ್ಮ ಜ್ಞಾನ, ಸಂಸ್ಕೃತಿ, ಧರ್ಮ ಮತ್ತು ಪರಂಪರೆಯ ಮೂಲಾಧಾರವಾಗಿದೆ ಎಂದು ತಿಳಿಸಿದರು.

ಗುರು ಎಂದರೆ ಅಂಧಕಾರವನ್ನು ದೂರ ಮಾಡುವವನು ಎಂಬ ಅರ್ಥ. ಶಿಷ್ಯ ಎಂದರೆ ಜ್ಞಾನವನ್ನು ಸ್ವೀಕರಿಸಲು ಶರಣಾದವನು. ಈ ಪರಂಪರೆ ಜ್ಞಾನ, ಶಿಸ್ತು, ಧಾರ್ಮಿಕತೆ ಮತ್ತು ಮೌಲ್ಯಾಧಾರಿತ ಜೀವನವನ್ನು ರೂಪಿಸುತ್ತದೆ ಎಂದರು.

ಸಮಾರಂಭದಲ್ಲಿ ಕ್ಲಬ್ ಮಾಜಿ ಅಧ್ಯಕ್ಷರಾದ ಎಂ.ರಾಜೀವ್, ಎಂ.ಮೋಹನ್, ಗೋವರ್ಧನ್ ಯಾದವ್, ಮುರಳಿ, ವಾಸುದೇವನ್, ರವೀಂದ್ರ, ಸಿ.ರಾಘವೇಂದ್ರ, ಗಿರೀಶ್, ಆನಂದ್, ವೀಣಾ ರವೀಂದ್ರ, ಲಕ್ಷ್ಮಿ ಮಹೇಶ್, ಕುಸುಮ ಗೌಡ, ಮೀನಾಕುಮಾರಿ, ಪಲ್ಲವಿ ಮತ್ತು ಕ್ಲಬಿನ ಸದಸ್ಯರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಗರೀಕತೆ ಬೆಳೆದಂತೆ ದೇಶದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಬದಲು



ಮಾನಸಗಂಗೋತ್ರಿಯ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಮಾತನಾಡಿದರು.

ಮೈಸೂರು,ನ.12(ಜಿಎ)–ನಾಗರೀಕತೆ ಬೆಳೆದಂತೆ ಹೊಸ ವಿಧಾನಗಳಿಂದ ಭಾರತದ ಸಾಮಾಜಿಕ, ಆರ್ಥಿಕ ವ್ಯವಸ್ಥೆಯೂ ರಾಷ್ಟ್ರೀಕರಣ ಹಾಗೂ ಜಾಗತೀಕರಣದ ಜೊತೆಗೆ ಬದಲಾಗುತ್ತಾ ಬಂದಿದೆ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ತಿಳಿಸಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ(ಎಂಎಂಟಿಟಿಸಿ) ಸಹಯೋಗದೊಂದಿಗೆ ಇತಿಹಾಸ ಅಧ್ಯಯನ ವಿಭಾಗ ಮಾನಸಗಂಗೋತ್ರಿ ವತಿಯಿಂದ ಏರ್ಪಡಿಸಿದ್ದ 30ನೇ ಇತಿಹಾಸ ಪುನಶ್ಚೇತನ ಶಿಬಿರದಲ್ಲಿ 'ಭಾರತದ ಸಾಮಾಜಿಕ ಆರ್ಥಿಕ ಇತಿಹಾಸದಲ್ಲಿ ಹೊಸ ವಿಧಾನಗಳು' ಕುರಿತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಇತಿಹಾಸ, ಅರ್ಥಶಾಸ್ತ್ರ ಮತ್ತು ಮಾನವಶಾಸ್ತ್ರಗಳಿಗೆ ಒಂದಕ್ಕೊಂದು ಸಂಬಂಧವಿದ್ದು, ಭಾರತದ ಸಾಮಾಜಿಕ, ಆರ್ಥಿಕ ಇತಿಹಾಸಕ್ಕೆ ತನ್ನದೇ ಆದ ವಿಶಾಲ ವೈವಿಧ್ಯತೆಗಳನ್ನು ಹೊಂದಿದೆ. ನಾಗರೀಕತೆ ಬೆಳೆದಂತೆ ವಸಾಹತು ರಾಷ್ಟ್ರೀಕರಣ ಮತ್ತು ಜಾಗತೀಕರಣದ ಜೊತೆಗೆ ಬದಲಾಗುತ್ತಾ ಬಂದಿದೆ ಎಂದರು.

ಇದು ಡಿಜಿಟಲೀಕರಣದ ಯುಗವಾಗಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳನ್ನು ಆವರಿಸಿಕೊಂಡು ಹೆಚ್ಚು ಅಭಿವೃದ್ಧಿಯಾಗುತ್ತಿದೆ. ಇತಿಹಾಸದ ಕ್ರಿಯಾತ್ಮಕ ಕೆಲಸಗಳನ್ನು ನಿರ್ವಹಿಸಲು ಅತ್ಯುತ್ತಮ ಅವಕಾಶ ದೊರೆಯಲಿದೆ. ಈ ಮೂಲಕ ಇತಿಹಾಸ ಸಮೀಕ್ಷೆ ವರದಿ, ಗೆಜೆಟೀಯರ್ ಸೇರಿದಂತೆ ಹಲವು ಡಾಟಗಳನ್ನು ಹೆಚ್ಚು ವಿಶ್ಲೇಷಣೆ ಮಾಡಲು ಅನುಕೂಲವಾಗಲಿದೆ. ಹಾಗೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸಹಕಾರಿಯಾಗಲಿದೆ. ಡಿಜಿಟಲೀಕರಣವು ಸಮಾಜ ವಿಜ್ಞಾನಕ್ಕೆ ಹೊಸ ರೂಪ ನೀಡುತ್ತಿದೆ. ಏಕೆಂದರೆ ಈ ವಿಭಾಗ ಸಮಾಜದಲ್ಲಿ ಕಡೆಗಣಿಸಲ್ಪಟ್ಟದ್ದಾಗಿದ್ದು, ಹೆಚ್ಚು ಪ್ರಾಮುಖ್ಯತೆ ನೀಡುವಂತಾಗಬೇಕಿದೆ. ಇದನ್ನು ಅರಿತು ಭಾರತ ಸರ್ಕಾರ ಉನ್ನತ ಶಿಕ್ಷಣದಲ್ಲಿ ಐಕೆಎಸ್(ಭಾರತೀಯ ಜ್ಞಾನ ವ್ಯವಸ್ಥೆ)ಯನ್ನು ಜಾರಿಗೊಳಿಸಲು ಮುಂದಾಗಿದೆ. ಈ ಮೂಲಕ ಸಮಾಜ ವಿಜ್ಞಾನಕ್ಕೆ ಪ್ರೋತ್ಸಾಹ ದೊರಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಂಎಂಟಿಟಿಸಿ ನಿರ್ದೇಶಕಿ ಪ್ರೊ.ಹೆಚ್.ಪಿ ಜ್ಯೋತಿ, ಶಿಬಿರ ಸಂಯೋಜಕ ಪ್ರೊ.ವೈ.ಹೆಚ್ ನಾಯಕವಾಡಿ, ಸಹಾಯಕ ಪ್ರಾಧ್ಯಾಪಕ ಡಾ.ಎಲ್.ನಂಜುಂಡಸ್ವಾಮಿ, ಶಿಬಿರದ ಉಪನ್ಯಾಸಕರು ಉಪಸ್ಥಿತರಿದ್ದರು.

ಜಿಎಸ್‌ಟಿ ಕುರಿತು ಕಾರ್ಯಾಗಾರ ನಾಳೆ

ಮೈಸೂರು: ಟ್ಯಾಕ್ಸ್ ಕನ್ಸಲ್ಟೆಂಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು, ವತಿಯಿಂದ ಜಿಎಸ್‌ಟಿ ವಾರ್ಷಿಕ ರಿಟರ್ನ್ಸ್ ಕುರಿತು ಕಾರ್ಯಾಗಾರವನ್ನು ನ.14ರಂದು ಸಂಜೆ 4ರಿಂದ ರಾತ್ರಿ 8ರವರೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಕೆ.ಮಂಜು, ಪಿ.ಆರ್.ತೇಜಸ್ವಿನಿ ಜಿಎಸ್‌ಟಿಆರ್–9 ಮತ್ತು 9ಸಿ ವಾರ್ಷಿಕ ರಿಟರ್ನ್ಸ್ (ದರ ಬದಲಾವಣೆಗಳ ಇತ್ತೀಚಿನ ತಿದ್ದುಪಡಿ, ಕಲಂ 73, 74 ಮತ್ತು 74ಎ ಅಡಿಯಲ್ಲಿ ನ್ಯಾಯ ನಿರ್ಣಯ ಪ್ರಕ್ರಿಯೆಗಳಲ್ಲಿ ತಿದ್ದುಪಡಿ ಹಾಗೂ ಇತ್ತೀಚಿನ ತಿದ್ದುಪಡಿಯೊಂದಿಗೆ ಜಿಎಸ್‌ಟಿಆರ್ –3ಬಿ ಸಲ್ಲಿಕೆ ಕುರಿತು) ಉಪನ್ಯಾಸ ನೀಡುವರು. ಹೆಚ್ಚಿನ ಮಾಹಿತಿಗೆ ಟಿ.ಸುದರ್ಶನ್ – 9880072550, ಜೆ.ನವೀನ್–9845949307 ಸಂಪರ್ಕಿಸಬಹುದು.

ಆರೋಗ್ಯವಂತ ಮಕ್ಕಳ ಸ್ಪರ್ಧೆ

ಮೈಸೂರು: ಮಕ್ಕಳ ದಿನಾಚರಣೆ ಪ್ರಯುಕ್ತ ರೋಟರಿ ಮೈಸೂರು ಉತ್ತರ ಹಾಗೂ ಇನ್ನರ್‌ವ್ಹೀಲ್ ಮೈಸೂರು ಉತ್ತರದ ವತಿಯಿಂದ ನ.14ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಆರೋಗ್ಯವಂತ ಮಕ್ಕಳ ಸ್ಪರ್ಧೆಯನ್ನು ವಿಜಯನಗರ ರೈಲ್ವೆ ಬಡಾವಣೆಯ ರೋಟರಿ ಭವನದಲ್ಲಿ ಏರ್ಪಡಿಸಲಾಗಿದೆ. 0–1, 1–2 ಮತ್ತು 2–3 ವರ್ಷದ ಮಕ್ಕಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಮಕ್ಕಳ ತಜ್ಞರಾದ ಡಾ.ಇಂದಿರಾ ಮತ್ತು ಡಾ.ಭಾರ್ಗವ್ ತಂಡದವರು ತೀರ್ಪುಗಾರರಾಗಿ ಆಗಮಿಸಲಿದ್ದಾರೆ. ಮಾಹಿತಿಗೆ ಎಂ.ರಾಜು–9880897237, ಎಂ.ಜೆ.ಸ್ವಾಮಿ–8123839688 ಇವರನ್ನು ಸಂಪರ್ಕಿಸಿ ನೋಂದಣಿ ಮಾಡಿಸಿಕೊಳ್ಳಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ನಾಳೆ (ನ. 13) ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ದೇಶ – ವಿದೇಶ

ಗೆಲುವಿನ ನಿರೀಕ್ಷೆ: 501 ಕೆ.ಜಿ ಲಡ್ಡು ಆರ್ಡರ್ ಮಾಡಿದ ಬಿಜೆಪಿ




ಪಟ್ನಾ: ಮತಗಟ್ಟೆ ಸಮೀಕ್ಷೆಗಳು ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎಗೆ ಬಹುಮತ ಸಿಗಲಿದೆ ಎಂದು ಭವಿಷ್ಯ ನುಡಿದಿವೆ. ಇದರ ಬೆನ್ನಲ್ಲೆ ಗೆಲುವಿನ ನಿರೀಕ್ಷೆಯಲ್ಲಿರುವ ಬಿಜೆಪಿ 501 ಕೆ.ಜಿ ಲಡ್ಡು ಆರ್ಡರ್ ಮಾಡಿದೆ. ನ.6 ಮತ್ತು ನ.11 ರಂದು 2 ಹಂತಗಳಲ್ಲಿ ನಡೆದ ಚುನಾವಣೆ ಮತ ಎಣಿಕೆ ನ.14ರಂದು ನಡೆಯಲಿದ್ದು, ಅಂದೇ ಫಲಿತಾಂಶ ಹೊರಬೀಳಲಿದೆ. ಈ ಬಾರಿ ಬಿಹಾರದಲ್ಲಿ ಶೇ.66.91ರಷ್ಟು ಮತದಾನವಾಗಿದೆ. ಮತಗಟ್ಟೆಗಳು ಎನ್‌ಡಿಎಗೆ ಬಹುಮತ ಎಂದು ಹೇಳಿದ ಬೆನ್ನಲ್ಲೇ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆಗೆ ತಯಾರಿ ನಡೆಸಿದ್ದಾರೆ. ಈ ಕುರಿತು ಬಿಜೆಪಿ ಕಾರ್ಯಕರ್ತ ಕೃಷ್ಣಕುಮಾರ್ ಮಾತನಾಡಿ, ಮತ ಎಣಿಕೆ ದಿನ ಬಿಜೆಪಿ ಹೋಳಿ, ದಸರಾ, ದೀಪಾವಳಿ, ಈದ್ ಎಲ್ಲವನ್ನೂ ಆಚರಿಸಲಿದೆ. ಏಕೆಂದರೆ ಜನರು ಎನ್‌ಡಿಎ ಪರವಾಗಿ ಮತ ಹಾಕಿದ್ದಾರೆ. ಲಡ್ಡುಗಳನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಗುವುದು. 501 ಕೆ.ಜಿ ಲಡ್ಡು ತಯಾರಿಸಿ ನ.14ರಂದು ಅದನ್ನು ತಲುಪಿಸಲಾಗುವುದು ಎಂದಿದ್ದಾರೆ.

ಉಗ್ರರು ನಗರಗಳನ್ನು ನಾಶಪಡಿಸಬಹುದು, ಆತ್ಮಶಕ್ತಿಯನ್ನಲ್ಲ



ಜೆರುಸಲೆಂ: ಭಾರತದ ರಾಜಧಾನಿ ದೆಹಲಿಯಲ್ಲಿ ನಡೆದಿರುವ ಕಾರು ಸ್ಫೋಟ ಘಟನೆಯನ್ನು ಖಂಡಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ನಮ್ಮ ನಗರಗಳ ಮೇಲೆ ಉಗ್ರರು ದಾಳಿ ಮಾಡಿ ನಾಶಗೊಳಿಸಬಹುದು ಆದರೆ, ಆತ್ಮಶಕ್ತಿಯನ್ನು ಅಲುಗಾಡಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಸೋಮವಾರ ಸಂಜೆ ದೆಹಲಿಯ ಕೆಂಪು ಕೋಟೆಯ ಬಳಿ ಚಲಿಸುತ್ತಿದ್ದ ಕಾರು ಸ್ಫೋಟಗೊಂಡು 12 ಜನ ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ. ಘಟನೆಯನ್ನು ಖಂಡಿಸಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿರುವ ನೆತನ್ಯಾಹು, ಆತ್ಮೀಯ ಸ್ನೇಹಿತ ಮೋದಿ ಮತ್ತು ಭಾರತದ ಧೈರ್ಯವಂತ ನಾಗರೀಕರೆ, ಸಾರಾ, ನಾನು ಮತ್ತು ಇಡೀ ಇಸ್ರೇಲ್ ಜನತೆ ಸ್ಫೋಟದಲ್ಲಿ ಮೃತ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇವೆ. ಈ ಸಮಯದಲ್ಲಿ ಭಾರತದೊಂದಿಗೆ ಇಸ್ರೇಲ್ ದೃಢವಾಗಿ ನಿಲ್ಲಲಿದೆ ಎಂದು ಬರೆದುಕೊಂಡಿದ್ದಾರೆ. ಭಾರತ ಮತ್ತು ಇಸ್ರೇಲ್ ಶಾಶ್ವತ ಸತ್ಯಗಳ ಮೇಲೆ ನಿಂತಿರುವ ಪ್ರಾಚೀನ ನಾಗರೀಕತೆಯನ್ನೊಳಗೊಂಡಿದೆ. ಉಗ್ರರು ನಮ್ಮ ನಗರಗಳ ಮೇಲೆ ದಾಳಿ ನಡೆಸಬಹುದು ಆದರೆ ಆತ್ಮಶಕ್ತಿಯನ್ನು ಅಲುಗಾಡಿಸಲು ಸಾಧ್ಯವಿಲ್ಲ. ನಮ್ಮ ರಾಷ್ಟ್ರಗಳ ಬೆಳಕು ನಮ್ಮ ಶತ್ರುಗಳ ಕತ್ತಲೆಯನ್ನು ಮೀರಿಸುತ್ತದೆ ಎಂದಿದ್ದಾರೆ.

ಬಿಹಾರ ಸಮೀಕ್ಷೆ ಉಲ್ಟಾ ಆಗಲಿದೆ



ನವದೆಹಲಿ: ಹರಿಯಾಣ ಚುನಾವಣೋತ್ತರ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಎಂದು ತೋರಿಸಲಾಗಿತ್ತು. ನಂತರ ಏನಾಯಿತು? ಅದೇ ರೀತಿ ಬಿಹಾರದಲ್ಲೂ ಫಲಿತಾಂಶ ಉಲ್ಟಾ ಆಗಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಸಮೀಕ್ಷೆಗಳಿಗಿಂತ ಭಿನ್ನವಾಗಿ ಹರಿಯಾಣದಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿತು. ಬಿಹಾರದಲ್ಲಿ ಚುನಾವಣೋತ್ತರ ಸಮೀಕ್ಷೆಗಳು ಎನ್‌ಡಿಎಗೆ ಮುನ್ನಡೆ ಎನ್ನುತ್ತಿವೆ. ಫಲಿತಾಂಶ ಬರುವ ತನಕ ಕಾದು ನೋಡೋಣ ಎಂದರು. ಬಿಹಾರ ಚುನಾವಣೋತ್ತರ ಸಮೀಕ್ಷೆಗಳ ಮೇಲೆ ನಂಬಿಕೆ ಇಲ್ಲ. ಅಲ್ಲಿನ ಫಲಿತಾಂಶ ಕರ್ನಾಟಕದ ರಾಜಕಾರಣದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ನಮ್ಮದು ಸಾಮಾಜಿಕ ಬದಲಾವಣೆಯ ಕಾಯಕ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕರ್ನಾಟಕ ವಿಧಾನಸಭಾ ಚುನಾವಣೆ ಸಮಯದಲ್ಲೂ ಸಮೀಕ್ಷೆಗಳನ್ನು ನಂಬಿರಲಿಲ್ಲ. ಯಾವ ಸಮೀಕ್ಷೆಗಳೂ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಿರಲಿಲ್ಲ. ತಟ್ಟೆಮರೆ ಏಟು ಯಾವ ರೀತಿ ಬೀಳುತ್ತದೆ ಎಂದು ಹೇಳಲು ಆಗದು. ಚುನಾವಣೆಯಲ್ಲಿ ಗೆಲುವು–ಸೋಲು ಸಹಜ ಎಂದರು.

ಬಿಬಿಸಿ ಪರ ನಿಂತ ಬ್ರಿಟನ್ ಸರ್ಕಾರ: ಟ್ರಂಪ್ ಭಾಷಣ ತಿರುಚಿ ಪ್ರಸಾರ ಮಾಡಿದ ಆರೋಪ



ಲಂಡನ್: 2020ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಪರಾಭವಗೊಂಡ ಬಳಿಕ ಡೊನಾಲ್ಡ್ ಟ್ರಂಪ್ ಮಾಡಿದ್ದ ಭಾಷಣವನ್ನು ತಿರುಚಿ, ಪ್ರಸಾರ ಮಾಡಿದ್ದ ಆರೋಪಗಳನ್ನು ಎದುರಿಸುತ್ತಿರುವ ಬಿಬಿಸಿ ವಾಹಿನಿ ಕಾರ್ಯವೈಖರಿಯನ್ನು ಬ್ರಿಟನ್ ಸರ್ಕಾರ ಸಮರ್ಥಿಸಿಕೊಂಡಿದೆ. ಬಿಬಿಸಿ ಕಾರ್ಯವೈಖರಿ ಕುರಿತು ವ್ಯಾಪಕ ಟೀಕೆ ವ್ಯಕ್ತವಾಗಿವೆಯಲ್ಲದೇ, ಸಂಸ್ಥೆ ವಿರುದ್ಧ ಮೊಕದ್ದಮೆ ಹೂಡುವುದಾಗಿ ಟ್ರಂಪ್ ಎಚ್ಚರಿಕೆ ನೀಡಿರುವ ನಡುವೆಯೇ, ಬ್ರಿಟನ್ ಸರ್ಕಾರ ಬಿಬಿಸಿ ಪರ ನಿಂತಿದೆ. ಇನ್ನೊಂದೆಡೆ, ಬಿಬಿಸಿಗೆ ನೀಡುವ ನೆರವು ಕುರಿತು ಪರಿಶೀಲಿಸಬೇಕು ಹಾಗೂ ಸಂಸ್ಥೆಯನ್ನು ಮರುಸಂಘಟಿಸಬೇಕು ಎಂದು ಮಾಧ್ಯಮ ಕ್ಷೇತ್ರದ ಪ್ರಮುಖರು ಹಾಗೂ ರಾಜಕೀಯ ಮುಖಂಡರಿಂದ ಬಲವಾದ ಕೂಗು ಕೇಳಿ ಬರುತ್ತಿರುವ ಕಾರಣಕ್ಕೆ, ಸರ್ಕಾರದ ಈ ನಿಲುವಿಗೆ ಮಹತ್ವ ಬಂದಿದೆ. ದೇಶದ ಪ್ರಮುಖ ಸುದ್ದಿವಾಹಿನಿಯಾದ ಬಿಬಿಸಿ ಕೆಲ ಸವಾಲುಗಳನ್ನು ಎದುರಿಸುತ್ತಿದೆ. ಈ ಪೈಕಿ ಕೆಲ ಸವಾಲುಗಳನ್ನು ತಾನೇ ಸೃಷ್ಟಿಸಿಕೊಂಡಿದೆ. ಆದಾಗ್ಯೂ, ಬ್ರಿಟನ್‌ನಲ್ಲಿ ಅತ್ಯಂತ ವಿಶ್ವಾಸಾರ್ಹ ಮತ್ತು ವ್ಯಾಪಕವಾಗಿ ವೀಕ್ಷಿಸುವ ಸುದ್ದಿವಾಹಿನಿ ಇದು ಎಂದು ಬ್ರಿಟನ್‌ನ ಸಾಂಸ್ಕೃತಿಕ ಕಾರ್ಯದರ್ಶಿ ಲೀಸಾ ನ್ಯಾಂಡಿ ಹೇಳಿದ್ದಾರೆ.

ಅಕ್ರಮವಾಗಿ 14 ವೆಪನ್, ಮದ್ದುಗುಂಡು ಹೊಂದಿದ್ದ ಶಸ್ತ್ರಾಸ್ತ್ರ ಪೂರೈಕೆದಾರನ ಬಂಧನ!



ನವದೆಹಲಿ: ದೆಹಲಿ–ಎನ್‌ಸಿಆರ್‌ನಲ್ಲಿರುವ ಅಪರಾಧಿಗಳಿಗೆ ಮಧ್ಯಪ್ರದೇಶದಿಂದ ಅಕ್ರಮವಾಗಿ ಬಂದೂಕುಗಳನ್ನು ಪೂರೈಸುತ್ತಿದ್ದ 27 ವರ್ಷದ ಶಸ್ತ್ರಾಸ್ತ್ರ ಪೂರೈಕೆದಾರನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ. ಗೌರವ್ ಕುಮಾರ್ ಎಂದು ಗುರುತಿಸಲಾದ ಆರೋಪಿಯನ್ನು ರೋಹಿಣಿಯ ಮಹಾದೇವ್ ಚೌಕ್ ಬಳಿ ಬಂಧಿಸಲಾಗಿದ್ದು, ಆತನ ಬಳಿ ಇದ್ದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ. ಪೊಲೀಸರ ಪ್ರಕಾರ, ಆರು ಅರೆ–ಸ್ವಯಂಚಾಲಿತ ಪಿಸ್ತೂಲ್‌ಗಳು ಮತ್ತು ಎಂಟು ಸಿಂಗಲ್–ಶಾಟ್ ಪಿಸ್ತೂಲ್‌ಗಳು ಸೇರಿದಂತೆ 14 ಅಕ್ರಮ ಬಂದೂಕುಗಳು ಮತ್ತು 56 ಲೈವ್ ಕಾರ್ಟ್ರಿಡ್ಜ್‌ಗಳು ಹಾಗೂ ನಾಲ್ಕು ಹೆಚ್ಚುವರಿ ಮ್ಯಾಗಜೀನ್‌ಗಳನ್ನು ಬಂಧಿತ ಶಸ್ತ್ರಾಸ್ತ್ರ ಪೂರೈಕೆದಾರನಿಂದ ವಶಪಡಿಸಿಕೊಳ್ಳಲಾಗಿದೆ.

ಇಂಡಿಯನ್ ಪನೋರಮಾಗೆ ಕೊಡವ ಸಾಕ್ಷ್ಯಚಿತ್ರ ಆಯ್ಕೆ

ಮಡಿಕೇರಿ, ನ.12–'ಉಮ್ಮತ್ತಾಟ್' ಕೊಡವ ಸಾಕ್ಷ್ಯಚಿತ್ರ ಇಂಡಿಯನ್ ಪನೋರಮಾಗೆ ಆಯ್ಕೆಯಾಗಿದೆ. ಗೋವಾದಲ್ಲಿ ನಡೆಯುವ 56ನೇ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನ.27ರಂದು ಉಮ್ಮತ್ತಾಟ್ ಪ್ರದರ್ಶನಗೊಳ್ಳಲಿದೆ.

ಉಮ್ಮತ್ತಾಟ್ ಕೊಡವ ಜಾನಪದ ನೃತ್ಯ ಪ್ರಕಾರವಾಗಿದ್ದು, ಹಲವು ವರ್ಷಗಳ ಇತಿಹಾಸ ಹೊಂದಿರುವ ಈ ಕಲೆಯ ಮೇಲೆ ಸಾಕ್ಷ್ಯಚಿತ್ರ ಬೆಳಕು ಚೆಲ್ಲಿದೆ. ಒಟ್ಟು 13 ನೃತ್ಯ ಪ್ರಕಾರಗಳನ್ನು ಚಿತ್ರೀಕರಿಸಲಾಗಿದ್ದು, 153 ಕಲಾವಿದರು ನೃತ್ಯ ಮಾಡಿದ್ದಾರೆ. ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರ ನಿರ್ದೇಶನದ ಸಾಕ್ಷ್ಯಚಿತ್ರಕ್ಕೆ ಉಮ್ಮತ್ತಾಟ್ ತರಬೇತುದಾರ ಕಲಾವಿದೆ ಬೊಳ್ಳಜಿರ ಯಮುನಾ ಅಯ್ಯಪ್ಪ ಅವರ ಸಹ ನಿರ್ದೇಶನವಿದ್ದು, ನಿರೂಪಣೆಯನ್ನು ಕೂಡ ಮಾಡಿದ್ದಾರೆ. ವಸ್ತ್ರ ವಿನ್ಯಾಸ ಮತ್ತು ನೃತ್ಯ ಪ್ರದರ್ಶನಕ್ಕೆ ಸಹಕಾರ ನೀಡಿದ್ದಾರೆ. ರಾಜ್ಯ ಪ್ರಶಸ್ತಿ ವಿಜೇತೆ, ಖ್ಯಾತ ಭರತನಾಟ್ಯ ಕಲಾವಿದೆ ಮುಕ್ಕಾಟಿರ ಶಿಲ್ಪ ನಂಜಪ್ಪ ನೃತ್ಯ ಪ್ರಕಾರಗಳ ನಿರೂಪಣೆ ಮಾಡಿದ್ದಾರೆ.



ಇಂಡಿಯನ್ ಪನೋರಮಾಗೆ ಆಯ್ಕೆಯಾದ ಉಮ್ಮತ್ತಾಟ್

ಜಿಲ್ಲೆಯ ಮುಟ್ಲುವಿನಿಂದ ಕುಟ್ಟದವರೆಗಿನ ವಿವಿಧೆಡೆಯ ಸುಂದರ ಪ್ರದೇಶದಲ್ಲಿ ಸಾಕ್ಷ್ಯಚಿತ್ರ ಚಿತ್ರೀಕರಣಗೊಂಡಿದ್ದು, ಛಾಯಾಗ್ರಾಹಕ ವಿನಾಯಕ ರೇವಡಿ ಅವರ ಛಾಯಾಗ್ರಹಣ ಹಾಗೂ ಟಿ.ಮುತ್ತುರಾಜು ಅವರ ಸಂಕಲನವಿದೆ. ತಂತಿಪಾಲ, ದೇವಸ್ತೂರು, ಬಲಂಬೇರಿ, ಕಾಕೋಟು ಪರಂಬು, ನೀರುಕೊಲ್ಲಿ, ಮುಟ್ಲು, ಬಾಳೆಲೆ ಆದೆಂಗಡ ಐನ್‌ಮನೆ, ಗುಹ್ಯ ಅಗಸ್ತ್ಯೇಶ್ವರ ದೇವಾಲಯ, ಚೇರಂಬಾಣೆಯ ಗೋಪಾಲಕೃಷ್ಣ ದೇವಾಲಯ ಮುಂತಾದೆಡೆ ಚಿತ್ರೀಕರಿಸಲಾಗಿದೆ. ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ದಂಪತಿಗೆ 'ಉಮ್ಮತ್ತಾಟ್' ಆಯ್ಕೆ ಮತ್ತೊಂದು ಹೆಗ್ಗಳಿಕೆಯಾಗಿದೆ.

ಇಂಡಿಯನ್ ಪನೋರಮಾಗೆ ಆಯ್ಕೆಯಾದ ಮೊದಲ ಕೊಡವ ಭಾಷಾ ಸಾಕ್ಷ್ಯಚಿತ್ರವಾಗಿದ್ದು, ಇದೊಂದು ದಾಖಲೆಯಾಗಿದೆ ಎಂದು ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

ಅಗ್ನಿ ಶಾಮಕ ದಳದ ಸಿಬ್ಬಂದಿಗಳಿಂದ ಗೂಳಿ ರಕ್ಷಣೆ

ಮಡಿಕೇರಿ, ನ.12–ಶೌಚ ಗುಂಡಿಗೆ ಬಿದ್ದು ಹೊರ ಬರಲಾರದೆ ಒದ್ದಾಡುತ್ತಿದ್ದ ಗೂಳಿಯನ್ನು



ಅಗ್ನಿ ಶಾಮಕ ದಳದ ಸಿಬ್ಬಂದಿಗಳು ರಕ್ಷಿಸಿ ಜೀವ ಉಳಿಸಿದ್ದಾರೆ.

ಗಾಂಧಿ ಮೈದಾನದಲ್ಲಿ ದಸರಾ ಸಂದರ್ಭ ಸಾರ್ವ ಜನಿಕರ ಉಪಯೋಗಕ್ಕಾಗಿ ತಾತ್ಕಾಲಿಕ ಶೌಚಾಲಯ ನಿರ್ಮಿಸಲಾಗಿತ್ತು. ದಸರಾ ಮುಗಿದ ನಂತರ ಶೌಚಾ ಲಯ ತೆರವು ಮಾಡಿ 10 ಅಡಿ ಆಳದ ಗುಂಡಿಯ ಮೇಲ್ಭಾಗವನ್ನು ಮಾತ್ರವೇ ಶೀಟ್ ಮೂಲಕ ಮುಚ್ಚ ಲಾಗಿತ್ತು. ನೆನ್ನೆ ದಿನ ರಾತ್ರಿ ಮೈದಾನಕ್ಕೆ ಬಂದಿದ್ದ ಗೂಳಿ ಈ ಗುಂಡಿಗೆ ಬಿದ್ದು ಹೊರ ಬರಲಾರದೇ ಪರದಾಡುತ್ತಿತ್ತು. ಸಾರ್ವಜನಿಕರು ಅಗ್ನಿ ಶಾಮಕ ದಳಕ್ಕೆ ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕಾಗಮಿಸಿದ ಸಿಬ್ಬಂದಿಗಳು ಗೂಳಿಯನ್ನು ಹರಸಾಹಸದಿಂದ ಮೇಲೆತ್ತುವ ಮೂಲಕ ಜೀವ ಉಳಿಸಿದ್ದಾರೆ. ಆ ಬಳಿಕ ಎಚ್ಚೆತ್ತ ಮಡಿಕೇರಿ ನಗರ ಸಭೆ ಜೆಸಿಬಿ ಬಳಸಿ ಶೌಚ ಗುಂಡಿಯನ್ನು ಮುಚ್ಚಿದೆ.

ತಾಲೂಕು ಗೌಡ ಸಮಾಜದಿಂದ ನ.16 ಅಭಿನಂದನೆ

ವಿರಾಜಪೇಟೆ, ನ.12– ವಿರಾಜಪೇಟೆ ತಾಲೂಕು ಗೌಡ ಸಮಾಜದ ವತಿಯಿಂದ ನವೆಂಬರ್ 16ರಂದು ಪೂರ್ವಾಹ್ನ 11.30 ಗಂಟೆಗೆ ಜನಾಂಗ ಬಾಂಧವರಿಗೆ ಸಂತೋಷಕೂಟವನ್ನು ಆಯೋಜಿಸಲಾಗಿದೆ ಎಂದು ವಿರಾಜಪೇಟೆ ತಾಲೂಕು ಗೌಡ ಸಮಾಜದ ಅಧ್ಯಕ್ಷ ಮುಕ್ಕಾಟಿರ ವಾಸು ಗಣಪತಿ ಹೇಳಿದರು.

1998 ರಲ್ಲಿ ಪಾರಂಭಗೊಂಡ ಗೌಡ ಸಮಾಜಕ್ಕೆ ಜಾಗ ಇಲ್ಲದ ಸಮಯದಲ್ಲಿ ದಿವಂಗತ ಕುರುಂಜಿ ದಿ ವೆಂಕಟರಮಣಗೌಡ ಸಮಾಜಕ್ಕೆ 72 ಸೆಂಟ್ ಜಾಗವನ್ನು ದಾನವಾಗಿ ನೀಡಿದ್ದರು. ಅವರ ನಿಧನದ ನಂತರ ಅವರ ಮಕ್ಕಳಾದ ಡಾ, ಚಿದಾನಂದ ಹಾಗೂ ಡಾ, ರೇಣುಕಾ ಪ್ರಸಾದ್ ಜಾಗವನ್ನು ಗೌಡ ಸಮಾಜದ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುವ ಹಿನ್ನಲೆಯಲ್ಲಿ ನ. 16ರಂದು ಸನ್ಮಾನಿಸುತ್ತಿರುವುದಾಗಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಸದ ಯದುವೀರ್, ಶಾಸಕ ಅಜ್ಜಿಕುಟ್ಟಿರ ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೊಂಬಾರನ ಜಿ ಬೋಪಯ್ಯ, ಕೊಡಗು ಗೌಡ ಸಮಾಜಗಳ ಒಕ್ಕೂಟ ಅಧ್ಯಕ್ಷ ಆನಂದ ಕರಂದ್ಲಾಜೆ, ಉಪಾಧ್ಯಕ್ಷ ರಾಜೇಶ್ ಉಪಸ್ಥಿತ ರಿರುವರು ಎಂದು ಹೇಳಿದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷ ಚೆಟ್ಟಿನೆರವನ ಚಂದ್ರಶೇಖರ್, ಕಾರ್ಯದರ್ಶಿ ಚಂಡೀರ ಸುಂದರ, ನಿರ್ದೇಶಕರುಗಳಾದ ಮೂಡಗದ್ದೆ ರಾಮಕೃಷ್ಣ, ತಡಿಯಪ್ಪನ ನರೇಂದ್ರ ಉಪಸ್ಥಿತರಿದ್ದರು.

ಹಾರಂಗಿ ಹಿನ್ನೀರಿನಲ್ಲಿ ವಿದ್ಯಾರ್ಥಿಗಳು ಜಲಸಮಾಧಿ



ಮಡಿಕೇರಿ: ಹಾರಂಗಿ ಹಿನ್ನೀರಿನಲ್ಲಿ ಈಜಲು ತೆರಳಿದ್ದ ಮೂವರು ವಿದ್ಯಾರ್ಥಿಗಳಲ್ಲಿ ಇಬ್ಬರು ನೀರು ಪಾಲಾದ ಘಟನೆ ಕುಶಾಲನಗರ ಸಮೀ ಪದ ಹೇರೂರು ಗ್ರಾಮದಲ್ಲಿ ನಡೆದಿದೆ. ಸ್ಥಳಕ್ಕೆ ತೆರಳಿರುವ ಸುಂಟಿಕೊಪ್ಪ ಠಾಣಾ ಪೊಲೀಸರು, ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಹಾಗೂ ದುಬಾರೆ ರ್‍ಯಾಫ್ಟರ್‌ಗಳು ಮೃತ ದೇಹಗಳಿಗಾಗಿ ಶೋಧ ಕಾರ್ಯ ನಡೆಸಿದರು.

ಹೆಬ್ಬೆಟ್ಟಗೇರಿ ಗ್ರಾಮ ನಿವಾಸಿ ಪಾಂಡೀರ ಪೂವಯ್ಯರ ಪುತ್ರ ಮಡಿಕೇರಿ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿರುವ ಚಂಗಪ್ಪ(17), ಕಾಲೂರು ನಿವಾಸಿ ಚನ್ನಪಂಡ ತಮ್ಮಯ್ಯರ ಪುತ್ರ ತರುಣ್ ತಿಮ್ಮಯ್ಯ(17) ಮೃತ ವಿದ್ಯಾರ್ಥಿಗಳಾಗಿದ್ದಾರೆ. ಇವರೊಂದಿಗೆ ಹೋಗಿದ್ದ ಇದೇ ಕಾಲೇಜಿನ ಪಿಯು ವಿದ್ಯಾರ್ಥಿ ರಾಣಿಪೇಟೆಯ ಮುತ್ತಣ್ಣರ ಪುತ್ರ ನವೀನ್ ಪೊನ್ನಪ್ಪ (17) ಈಜಿಕೊಂಡು ದಡಕ್ಕೆ ಸೇರಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಪೊಲೀಸರು ಪ್ರಕರಣ ದಾಖಲಿಸಿದ್ದಾರೆ

ಮಧ್ಯಾಹ್ನ 2ರ ಸಮಯದಲ್ಲಿ ಈ ಘಟನೆ ಸಂಭವಿಸಿದ್ದು, ಸಂಜೆವರೆಗೆ ಶೋಧ ನಡೆಸಿದ ರಕ್ಷಣಾ ತಂಡ ಚಂಗಪ್ಪ ಎಂಬಾತನ ಮೃತ ದೇಹವನ್ನು ಹೊರ ತೆಗೆಯುವಲ್ಲಿ ಸಫಲವಾಗಿದೆ. ಕತ್ತಲು ಆವರಿಸಿದ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆಯನ್ನು ತಾತ್ಕಾಲಿಕ ಸ್ಥಗಿತ ಮಾಡಿದ್ದು, ಗುರುವಾರ ಮತ್ತೆ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ

ಎಎಸ್‌ಐ ಸೈಮನ್ ಡಿ.ಕುನ್ಹಾ, ಸಿಬ್ಬಂದಿ ಉಮೇಶ್, ಹೊನ್ನರಾಜಪ್ಪ, ಸತೀಶ್ ಕುಮಾರ್, ಕಾನ್‌ಸ್ಟೇಬಲ್ ಗ್ರಾಪಂ ಅಧ್ಯಕ್ಷ ಜಗನ್ನಾಥ್, ಅಗ್ನಿಶಾಮಕ ದಳ ಮತ್ತು ದುಬಾರೆ ರ್‍ಯಾಫ್ಟಿಂಗ್ ಸಿಬ್ಬಂದಿಗಳು, ಶೋಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಪ್ರಕಟ

ಮಡಿಕೇರಿ ನ.12–ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು 2024 ನೇ ಸಾಲಿನ ಗೌರವ ಪ್ರಶಸ್ತಿಯನ್ನು ಘೋಷಿಸಿದೆ.

ಅರೆಭಾಷೆ ಸಾಹಿತಿ ಹಾಗೂ ನಿಘಂಟು ತಯಾರಕ ಕೆ.ಆರ್. ಗಂಗಾಧರ, ಗ್ರಾಮೀಣ ಪತ್ರಿಕೋದ್ಯಮಿ ಡಾ.ಯು.ಪಿ. ಶಿವಾನಂದ ಹಾಗೂ ಅರೆಭಾಷಿಕರ ಸಂಘಟಕ ದಂಬೆಕೋಡಿ ಆನಂದ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ತಿಳಿಸಿದ್ದಾರೆ.

ಇದೇ ನ.30ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಗೌರವ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಪ್ರಶಸ್ತಿಯು 50 ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ ಜೊತೆಗೆ ಐನ್ ಮನೆ ಕುರಿತ ಅರೆಭಾಷೆ ಸಾಕ್ಷ್ಯಚಿತ್ರ ಪ್ರದರ್ಶನ ನಡೆಯಲಿದೆ ಇದರೊಂದಿಗೆ ಅರೆಭಾಷಾ ಸಾಂಸ್ಕೃತಿಕ ಮನೋರಂಜನಾ ಕಾರ್ಯಕ್ರಮ ಹಾಗೂ ಅರೆಭಾಷೆ ಅಕಾಡೆಮಿ ಪ್ರಾಯೋಜಿತ ಅರೆಭಾಷೆ ನಾಟಕ 'ಅಪ್ಪ' ಪ್ರದರ್ಶನಗೊಳ್ಳಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಿರು ಪರಿಚಯ: ಕೆ.ಆರ್ ಗಂಗಾಧರ: ಅರೆಭಾಷೆ ಸಾಹಿತಿ ಹಾಗೂ ಪೋಷಕರಾಗಿರುವ ಕೆ.ಆರ್. ಗಂಗಾಧರ ಸುಳ್ಯ ತಾಲೂಕು ಅರಂತೋಡು ಗ್ರಾಮದ ನೆಹರು ಸ್ಮಾರಕ ಪದವಿಪೂರ್ವ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲರು. ಓರ್ವ ಮಾದರಿ ಶಿಕ್ಷಕರಾಗಿರುವ ಇವರು ಅರೆಭಾಷಿಕ ಸಮುದಾಯದ ಏಕೈಕ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರಾಗಿದ್ದಾರೆ. ಅರೆಭಾಷೆಯ ಮೇಲೆ ಉತ್ತಮ ಹಿಡಿತ, ಒಲವು, ಪ್ರೀತಿ ಇರುವ ಇವರ ಅರೆಭಾಷಾ ಪದಸಂಪತ್ತು ಅಪಾರ. ಸುಮಾರು ಮೂರು ಸಾವಿರ ಶಬ್ದಗಳನ್ನೊಳಗೊಂಡ ಅರೆಭಾಷೆ – ಕನ್ನಡ – ಇಂಗ್ಲೀಷ್ ಶಬ್ದಕೋಶ ಮೊಟ್ಟ ಮೊದಲ ಬಾರಿಗೆ ರಚಿಸಿದ್ದಾರೆ. ಅರೆಭಾಷೆ ಗಾದೆಗಳು ಮತ್ತು ನುಡಿಗಟ್ಟುಗಳು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇದು ಅರೆಭಾಷೆಗೆ ಲಭ್ಯವಿರುವ ಮೊದಲ ನಿಘಂಟು. ಹಲವಾರು ಸ್ಮರಣ ಸಂಚಿಕೆಗಳ ಸಂಪಾದಕರಾಗಿ ಕೆಲಸಮಾಡಿದವರು.


ಕೆ.ಆರ್.ಗಂಗಾಧರ


ಸುಬ್ರಾಯ ಆನಂದ


ಯು.ಪಿ. ಶಿವಾನಂದ

2019ರಲ್ಲಿ ಜರುಗಿದ ಮೊತ್ತಮೊದಲ ಅರೆಭಾಷೆ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಪಟ್ಟವನ್ನು ಅಲಂಕರಿಸಿದ್ದರು.

ದಂಬೆಕೋಡಿ ಸುಬ್ರಾಯ ಆನಂದ: ಅರೆಭಾಷಿಕರ ಸಂಘಟಕರಾಗಿರುವ ದಂಬೆಕೋಡಿ ಸುಬ್ರಾಯ ಆನಂದ ಸಮುದಾಯದ ಸಂಘಟನೆಗಳ ಪ್ರೇರಕರು ಮತ್ತು ಪೋಷಕರು. ಸಿ.ಎ ಪದವೀಧರರಾಗಿರುವ ಆನಂದ ಅವರು ರಾಜ್ಯ ಹಣಕಾಸು ನಿಗಮದಲ್ಲಿ ಮೂರು ದಶಕಗಳ ಕಾಲ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಇವರು. ತಮ್ಮ ಉದ್ಯೋಗದ ನಿಮಿತ್ತ ಹೋದೆಡೆಯೆಲ್ಲಾ ಅರೆಭಾಷಿಕ ಸಮುದಾಯದ ಸಂಘಟನೆಗಳಲ್ಲಿ ತೊಡಗಿ ಅರೆಭಾಷಿಕರ ಮನದಲ್ಲಿ ಚಿರಸ್ಥಾಯಿ ಆದವರು.

ಡಾ। ಯು.ಪಿ. ಶಿವಾನಂದ: ಗ್ರಾಮೀಣ ಪತ್ರಿಕೋದ್ಯಮದಲ್ಲಿ ಕ್ರಾಂತಿಯನ್ನೇ ಮಾಡಿರುವ ಡಾ। ಯು.ಪಿ. ಶಿವಾನಂದ ವೈದ್ಯಕೀಯ ಪದವೀಧರರಾಗಿದ್ದರೂ ಪತ್ರಿಕೋದ್ಯಮ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ಹಲವಾರು ಪತ್ರಕರ್ತರನ್ನು ಸೃಷ್ಟಿಸಿದ ಹೆಗ್ಗಳಿಕೆ ಇವರದು. 1985ರಲ್ಲಿ ಪ್ರಥಮವಾಗಿ ಸುಳ್ಯದಲ್ಲಿ ಆರಂಭಿಸಿರುವ 'ಸುದ್ದಿ ಬಿಡುಗಡೆ' ಪತ್ರಿಕೆಯು ಇಂದು ಡಿಜಿಟಲ್ ತಂತ್ರಜ್ಞಾನ ಮೂಲಕ ಅಂತಾರಾಷ್ಟ್ರೀಯವಾಗಿ ವ್ಯಾಪಿಸಿದೆ.

ಪತ್ರಿಕೆಯು ಅನೇಕ ಅರೆಭಾಷಾ ಲೇಖಕರಿಗೆ ವೇದಿಕೆಯನ್ನು ಒದಗಿಸಿದ್ದು ಹಲವಾರು ಬರಹಗಾರರು ಸಾಹಿತಿಗಳನ್ನು ಹುಟ್ಟುಹಾಕಲು ಕಾರಣವಾಗಿದೆ. ಸುಳ್ಯ ಹಾಗೂ ಬೆಳ್ತಂಗಡಿಗಳಿಂದ ವಾರ ಪತ್ರಿಕೆಯಾಗಿ ಮತ್ತು ಪುತ್ತೂರಿನಿಂದ ದಿನಪತ್ರಿಕೆಯಾಗಿ ಪ್ರಕಟವಾಗುತ್ತಿದ್ದು, ಅನೇಕ ಪತ್ರಕರ್ತರನ್ನು ಹುಟ್ಟುಹಾಕಿದೆ ಮತ್ತು ಅನೇಕ ಸ್ಥಳೀಯ ಅರೆಭಾಷಿಕರು ಹಾಗೂ ಇತರರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸಿದೆ. ಡಾ.ಯು.ಪಿ.ಶಿವಾನಂದರು ಒಬ್ಬ ಪತ್ರಿಕೋದ್ಯಮಿಯಾಗಿ ಗುರುತಿಸಿಕೊಂಡಿರುವಂತೆ ಒಬ್ಬ ನಿರಂತರ ಹೋರಾಟಗಾರರಾಗಿಯೂ ಗುರುತಿಸಿಕೊಂಡವರು. ಭ್ರಷ್ಟಾಚಾರ ಸೇರಿದಂತೆ ಅನೇಕ ಸಾಮಾಜಿಕ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಿದವರು.

ಟಿ.ಎಂ.ಲಕ್ಷ್ಮಿ ನಿಧನ



ನಾಪೋಕ್ಲು, ನ.12– ಸಮೀಪದ ಕಕ್ಕುಂದಕಾಡು ನಿವಾಸಿ ಟಿ.ಎಂ.ಲಕ್ಮಿ (97) ಬುಧವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಕಲ್ಲು ಮೊಟ್ಟೆ ರುದ್ರಭೂಮಿಯಲ್ಲಿ ನೆರವೇರಿತು. ಮೃತರು ಪುತ್ರ ಸೇರಿದಂತೆ ಅಪಾರ ಬಂಧು ಬಳಗದವರು ಅಗಲಿದ್ದಾರೆ.

ಕಾಮವ್ವ



ನಾಪೋಕ್ಲು: ಇಲ್ಲಿಯ ಹಳೆ ತಾಲೂಕು ನಿವಾಸಿ ಚಿಯಕ್ ಪೂವಂಡ ದಿ.ತಮ್ಮಯ್ಯ ಅವರ ಪತ್ನಿ ಕಾಮವ್ವ (91) ಬುಧವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಬುಧವಾರ ಹಳೆತಾಲೂಕು ಚಿಯಕ್‌ಪೂವಂಡ ಕುಟುಂಬದ ರುದ್ರಭೂಮಿಯಲ್ಲಿ ಜರುಗಿತು. ಮೃತರು ಪುತ್ರ, ಇಬ್ಬರು ಪುತ್ರಿಯರು ಮತ್ತು ಬಂಧು ಬಳಗವನ್ನು ಅಗಲಿದ್ದಾರೆ.

ಫಾತಿಮತ್ ಫಜ್ನ ಪಿ.ಕೆ ಜಿಲ್ಲಾ ಮಟ್ಟಕ್ಕೆ ಆಯ್ಕೆ

ನಾಪೋಕ್ಲು: ಇಲ್ಲಿನ ಚರಿಯ ಪರಂಬುವಿನ ಆಟದ ಮೈದಾನದಲ್ಲಿ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಮೀಪದ ಕಕ್ಕಬ್ಬೆ ಪ್ರೌಢಶಾಲೆಯ ವಿದ್ಯಾರ್ಥಿನಿ ಪಿ.ಕೆ.ಫಾತಿಮತ್ ಫಜ್ನ ಭಾರದ ಗುಂಡು ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈಕೆಯ ಸಾಧನೆಗೆ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಕೇಟೋಳಿರ ಕುಟ್ಟಪ್ಪ, ಸುಧಾ ಗಣಪತಿ, ಮುಖ್ಯ ಶಿಕ್ಷಕ ಅನಿಲ್ ರಾಜ್, ದೈಹಿಕ ಶಿಕ್ಷಣ ಶಿಕ್ಷಕ ಬೋಪಣ್ಣ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಶಿಕ್ಷಣದ ಜೊತೆಗೆ ಸಂಸ್ಕಾರವು ಮುಖ್ಯ


ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಅಂತರರಾಷ್ಟ್ರೀಯ ಪ್ರಖ್ಯಾತ ತಬಲ ವಾದಕ ವಿದ್ವಾನ್ ರಘುನಾಥ್ ಉದ್ಘಾಟಿಸಿದರು.

ಗುಂಡ್ಲುಪೇಟೆ, ನ.12(ಸೋಮ್.ಜಿ)– ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ. ಶಿಕ್ಷಣದೊಂದಿಗೆ ಕಲೆ ಯನ್ನು ರೂಢಿಸಿಕೊಂಡರೆ ಅದಕ್ಕೆ ಬಡತನ ಹೋಗಲಾಡಿಸುವ ಸಾಮರ್ಥ್ಯವಿದೆಯೆಂದು ಅಂತರರಾಷ್ಟ್ರೀಯ ಪ್ರಖ್ಯಾತ ತಬಲ ವಾದಕ ವಿದ್ವಾನ್ ರಘುನಾಥ್ ಸಲಹೆ ನೀಡಿದ್ದಾರೆ.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪರಿಶ್ರಮದಿಂದ ಜೀವನ ಸಾರ್ಥಕ ಪಡಿಸಿಕೊಳ್ಳುವುದು ಆದ್ಯ ಕರ್ತವ್ಯ. ಕಾಲೇಜಿನಲ್ಲಿ ಪಡೆಯುತ್ತಿರುವ ಶಿಕ್ಷಣದೊಂದಿಗೆ ಸಾಂಸ್ಕೃತಿಕ ಕಲೆಯನ್ನು ಪಡೆದು ಕೊಂಡರೆ ಯಶಸ್ಸಿನ ಜೀವನ ತಾಳಬಹುದೆಂದು ಅಭಿಮತ ವ್ಯಕ್ತಪಡಿಸಿದರು. ರಘುನಾಥ್ ಶಿಷ್ಯರು ಸ್ಪಂದನ, ನಾಗರಾಜ್ ಮತ್ತು ಮಿಮಿಕ್ರಿ ಕಲಾವಿದ ಮನೋಜ್ ವಿವಿಧ ಗಣ್ಯ ರಾಜಕಾರಣಿಗಳ ಹಾಗೂ ಸಿನಿಮಾ ನಟರ ಧ್ವನಿ ಅನುಕರಣೆಯ ಮೂಲಕ ವಿದ್ಯಾರ್ಥಿಗಳನ್ನು ರಂಜಿಸಿದರು

ಕಾಲೇಜಿನ ಪ್ರಾಂಶುಪಾಲ ಡಾ. ಮದನ ಕುಮಾರ್ ಅಧ್ಯಕ್ಷತೆ ವಹಿಸಿದ್ದು, ವಿದ್ಯಾರ್ಥಿಗಳಿಗೆ ಶಿಕ್ಷಣ ಎಷ್ಟು ಮುಖ್ಯವೋ ಹಾಗೆ ಸಂಸ್ಕೃತಿಯು ಅಷ್ಟೆ ಮುಖ್ಯ, ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ತಮ್ಮ ಪ್ರತಿಭೆಯನ್ನು ಹೊರ ಹಾಕಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

IQAC ಸಂಚಾಲಕ ವಿಜಯ್ ಕುಮಾರ್, ಕಛೇರಿ ಅಧೀಕ್ಷಕ ಪುಟ್ಟಬುದ್ಧಿ ಎನ್, ಕ್ರೀಡಾ ಸಂಚಾಲಕ ಪುಟ್ಟರಾಜು ಎಸ್.ಜೆ, ರಾಸೇಯೋ ಸಂಚಾಲಕ ಕೃಷ್ಣಮೂರ್ತಿ, ರೋವರ್ಸ್, ಸಂಚಾಲಕ ಡಾ. ತುಳಸಿ ರಾಮ್ ಎಸ್, ರೇಂಜರ್ಸ್ ಘಟಕದ ಸಂಚಾಲಕಿ ದಿವ್ಯಾ ಭಾರತಿ ಜೆ, ರೆಡ್ ಕ್ರಾಸ್ ಘಟಕದ ಸಂಚಾಲಕ ಸಂಯುಕ್ತ ಸಿಂಗ್.ಟಿ ಗ್ರಂಥಪಾಲಕ ಶ್ರೀನಿವಾಸ ನಾಯಕ, ಅಧ್ಯಾಪಕರು ಅಧ್ಯಾಪಕೇತರ ವರ್ಗದವರು ಇದ್ದರು. ಡಾ. ರಶ್ಮಿ ಜೆ.ಆರ್ ಕಾರ್ಯಕ್ರಮ ನಿರೂಪಿಸಿದರು,

ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸಚಿವ ಕೆ.ವೆಂಕಟೇಶ್ ಸೂಚನೆ


ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಚಾಮರಾಜನಗರ, ನ.12–ಜಿಲ್ಲೆಯ ಯಾವುದೇ ಭಾಗದಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ ನೀಡಿದ್ದಾರೆ

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ನಡೆದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀ ಲನಾ ಸಭೆಯಲ್ಲಿ ಮಾತನಾಡಿದ ಅವರು, ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆ ಇರುವ ಪಂಚಾಯಿತಿಗಳನ್ನು ಗುರುತಿಸಬೇಕು. ಎಲ್ಲೆಲ್ಲಿ ನೀರಿನ ಸಮಸ್ಯೆ ಕಂಡು ಬರುವುದೋ ಅಲ್ಲಿನ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳ ಜೊತೆಗೆ ನಿರಂತರವಾಗಿ ಸಂಪರ್ಕ ಸಾಧಿಸಿ. ಬೋರ್‌ವೆಲ್ ಲಭ್ಯವಿಲ್ಲದಿದ್ದರೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಮೂಲಕ ಸಮರ್ಪಕವಾಗಿ ನಿಭಾಯಿಸಲು ಮುಂದಾಗುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಶಾಲೆಗಳ ಕಟ್ಟಡಗಳು ಸುಸ್ಥಿತಿಯಲ್ಲಿರುವ ಬಗ್ಗೆ ಅಧಿಕಾರಿಗಳು ಖಚಿತಪಡಿ ಸಿಕೊಳ್ಳಬೇಕು. ದುರಸ್ಥಿ ಅಗತ್ಯವಿರುವ ಶಾಲಾ ಕಟ್ಟಡಗಳನ್ನು ಪಟ್ಟಿ ಮಾಡಬೇಕು. ದುರಸ್ಥಿ ಸಾಧ್ಯವಿಲ್ಲದೇ ಶಿಥಿಲಾವಸ್ಥೆ ತಲುಪಿದ್ದರೆ ಹೊಸ ಶಾಲಾ ಕಟ್ಟಡಗಳಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದರೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರಲು ಅವಶ್ಯ ಕ್ರಮಗಳನ್ನು ಕೈಗೊಳ್ಳ ಬೇಕು. ಅಧಿಕಾರಿಗಳು ಶಾಲೆಗಳಿಗೆ ಖುದ್ದು ಭೇಟಿ ಕೊಟ್ಟು ಮಕ್ಕಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಲ್ಲಿನ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರಿಯಬೇಕು ಎಂದು ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಭೂ ಸ್ವಾಧೀನ ಸಂಬಂಧ ಬದನಗುಪ್ಪೆ ಗ್ರಾಮದಲ್ಲಿ ಪ್ರತಿ ಗುಂಟೆಗೆ 7 ಲಕ್ಷ, ಪಕ್ಕದಲ್ಲಿರುವ ಮುತ್ತಿಗೆ ಗ್ರಾಮದಲ್ಲಿ ಗುಂಟೆಗೆ 1ಲಕ್ಷ ನಿಗದಿ ಪಡಿಸಿರುವ ದರ ಕ್ರಮಬದ್ಧವಾಗಿಲ್ಲದಿರುವ ಬಗ್ಗೆ ದೂರು ಬಂದಿದ್ದು, ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ, ಭೂ ದಾಖಲೆಗಳ ಅಧಿಕಾರಿಗಳು ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಭೂದರ ಪರಿಶೀಲಿಸಿ ಅಗತ್ಯ ಕ್ರಮ ವಹಿಸಬೇಕು ಎಂದರು

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಜಿಲ್ಲೆಯಲ್ಲಿ ತೆರೆಯಲಾಗಿರುವ ಕರ್ನಾಟಕ ಪಬ್ಲಿಕ್ ಶಾಲೆಗಳ ಫಲಿತಾಂಶ ಉತ್ತಮವಾಗಿದೆ. ಜಿಲ್ಲೆಗೆ ಇನ್ನೂ ಹೆಚ್ಚಿನ ಪಬ್ಲಿಕ್ ಶಾಲೆಗಳ ಅವಶ್ಯವಿದೆ. ಹಾಸ್ಟೆಲ್‌ಗಳಲ್ಲಿರುವ ಮೂಲ ಸೌಕರ್ಯಗಳ ಕೊರತೆ ಬಗೆಹರಿಸಬೇಕು. ಹಾಸ್ಟಲ್‌ಗಳಲ್ಲಿ ದಿನನಿತ್ಯದ ಊಟದ ಮೆನು ಪ್ರದರ್ಶಿಸಬೇಕು. ಶನಿವಾರ, ಭಾನುವಾರಗಳಂದು ವಿದ್ಯಾರ್ಥಿಗಳು ಹಾಸ್ಟಲ್‌ನಲ್ಲಿ ಉಳಿಯುವಂತಾಗಬೇಕು ಎಂದು ತಿಳಿಸಿದರು.

ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್, ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಅಧಿಕಾರೇತರ ಕೆಡಿಪಿ ಸದಸ್ಯರಾದ ಸೈಯದ್ ಮುಸ್ಸೆಯೀಜ್, ಎಂ.ಶಂಕರಪ್ಪ, ಜಿ.ಪಂ ಸಿಇಓ ಮೋನಾರೋತ್, ಎಸ್‌ಪಿ ಡಾ.ಬಿ.ಟಿ. ಕವಿತಾ, ಎಡಿಸಿ ಟಿ.ಜವರೇಗೌಡ, ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಮಹಿಳೆಯ ಮಾಂಗಲ್ಯ ಸರ ಕಳವು


ಚಾಮರಾಜನಗರ, ನ.12–ಮಹಿಳೆಯೊಬ್ಬರ ಮಾಂಗಲ್ಯ ಸರವನ್ನು ಕಳವು ಮಾಡಿರುವ ಘಟನೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ನಗರದ 23ನೇ ವಾರ್ಡ್‌ನ ಶಂಕರಪುರದ ನಿವಾಸಿ ಬಂಗಾರನಾಯಕ ಅವರ ಪತ್ನಿ ಸುಬ್ಬಲಕ್ಷ್ಮೀ ಸರ ಕಳೆದುಕೊಂಡವರು. ಇವರು ಮಹದೇಶ್ವರ ಬೆಟ್ಟಕ್ಕೆ ತೆರಳಲೆಂದು ಬಸ್ ನಿಲ್ದಾಣಕ್ಕೆ ಬಂದು ಬಸ್ ಹತ್ತುವ ಸಮಯದಲ್ಲಿ ಇವರ ಕತ್ತಿನಲ್ಲಿದ್ದ ಸುಮಾರು 6 ಲಕ್ಷ ಮೌಲ್ಯದ 50ಗ್ರಾಂ. ತೂಕದ ಚಿನ್ನ ಮಾಂಗಲ್ಯ ಸರವನ್ನು ಕಳ್ಳರು ಅಪಹರಿಸಿದ್ದಾರೆ.

ಬಸ್ ನಿಲ್ದಾಣ ಬಿಟ್ಟು ತೆರಳಿದಾಗ ಟಿಕೆಟ್ ಪಡೆಯಲು ಸುಬ್ಬಲಕ್ಷ್ಮೀ ಅವರು ತಮ್ಮ ಆಧಾರ್ ಕಾರ್ಡ್ ಕೊಡುವ ವೇಳೆ ಸರ ಕಳವಾಗಿರುವ ಬಗ್ಗೆ ತಿಳಿದಿದೆ. ಇದರಿಂದ ಗಾಬರಿಗೊಂಡ ಅವರು ಸ್ಥಳದಲ್ಲಿ ಹುಡುಕಾಡಿದ್ದಾರೆ. ಬಳಿಕ ಬಸ್‌ನಿಂದ ಇಳಿದು ಬಂದು ನಗರದ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ

ಚಾಮರಾಜನಗರ, ನ.12–ಕಾರ್ತಿಕ ಮಾಸದ ಪ್ರಯುಕ್ತ ನಗರದ ಭ್ರಮರಾಂಭ ಬಡಾವಣೆಯಲ್ಲಿರುವ ಶ್ರೀಮಹಾಗಣಪತಿ ದೇವಸ್ಥಾನದಲ್ಲಿ ನ.15 ಹಾಗೂ 16ರಂದು ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ.



ನ.15ರಂದು ಸಂಜೆ 6.30ಕ್ಕೆ ಕಳಶ ಸ್ಥಾಪನೆ, ಪವಮಾನ ಸೂಕ್ತ ಪಾರಾಯಣ ಮಹಾ ಮಂಗಳಾರತಿ ನೆರವೇರಲಿದೆ. ನ.16ರಂದು ಬೆಳಗ್ಗೆ 9.00 ಗಂಟೆಗೆ ಆರಂಭವಾಗಿ ಮಧ್ಯಾಹ್ನ 12 ಗಂಟೆಗೆ ಮಹಾ ಪೂರ್ಣಾಹುತಿ ಮಹಾ ಮಂಗಳಾರತಿ ನೆರವೇರಲಿದೆ ಎಂದು ದೇವಸ್ಥಾನದ ಅರ್ಚಕ ಪಲಾಶ ಭಾರದ್ವಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮಾಪುರದಲ್ಲಿ ಇಂದು ಮಕ್ಕಳ ಹಕ್ಕುಗಳ ದತ್ತು ಮಾಸಾಚರಣೆ

ಚಾಮರಾಜನಗರ, ನ.12–ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ, ಸಮುದಾಯ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯಾಧಿಕಾರಿಗಳು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳಿಗೆ ಮಕ್ಕಳ ಹಕ್ಕುಗಳ ಮಾಸ ಪ್ರಯುಕ್ತ ದತ್ತು ಮಾಸಾಚರಣೆಯ ಕಾರ್ಯಕ್ರಮವನ್ನು ನ. 13ರ ಬೆಳಿಗ್ಗೆ 10.30 ಗಂಟೆಗೆ ಹನೂರು ತಾಲೂಕಿನ ರಾಮಾಪುರದ ಮಲೆ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ ಕವಿತಾ ಉಪಸ್ಥಿತಿ ವಹಿಸುವರು. ರಾಮಾಪುರ ಗ್ರಾ. ಪಂ. ಅಧ್ಯಕ್ಷ ರವಿ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಅಧಿಕಾರಿಗಳು, ಗ್ರಾಪಂ ಸದಸ್ಯರು, ಶಾಲಾ– ಕಾಲೇಜು ವಿದ್ಯಾರ್ಥಿಗಳು ಹಾಗೂ ಪೋಷಕರು, ಸಮುದಾಯ ಮುಖಂಡರು, ವಿವಿಧ ಸಂಘಟನೆಯ ಮುಖಂಡರು, ಅರೆವೈದ್ಯಕೀಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಸಮುದಾಯ ಕಾರ್ಯಕರ್ತರು, ವೈದ್ಯಕೀಯ ಸಿಬ್ಬಂದಿವರ್ಗದವರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ವಯಂ ಸಂಸ್ಥೆಯ ಮುಖ್ಯಸ್ಥರುಗಳು ಭಾಗವಹಿಸುವರು.

ಪ್ರತಿ ವರ್ಷ ನವೆಂಬರ್ ತಿಂಗಳನ್ನು ಮಕ್ಕಳ ಹಕ್ಕುಗಳ ಮತ್ತು ರಾಷ್ಟ್ರೀಯ ದತ್ತು ಮಾಸಾಚರಣೆ" ಎಂದು ಗುರುತಿಸಿ ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು, ಮಕ್ಕಳ ಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನ, ಬಾಲಕಾರ್ಮಿಕರು ಹಾಗೂ ಶಾಲೆ ಬಿಟ್ಟ ಮಕ್ಕಳ ಗುರುತಿಸುವಿಕೆ ಮತ್ತು ರಕ್ಷಣೆ, ಮಕ್ಕಳ ರಕ್ಷಣಾ ಸಮಿತಿಗಳ ಬಲವರ್ಧನೆ, ಅನಾಥ ಹಾಗೂ ಸಂಕಷ್ಟದಲ್ಲಿರುವ ಮಕ್ಕಳ ಗುರುತಿಸಿ ಪುನರ್ವಸತಿಗೊಳಿಸುವ ಕಾರ್ಯದಲ್ಲಿ ಜಿಲ್ಲಾಡಳಿತವು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಆಯುಷ್ಮಾನ್ ಆರೋಗ್ಯ ಕೇಂದ್ರ ಕಟ್ಟಡ ಉದ್ಘಾಟನೆ

ಚಾಮರಾಜನಗರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ದೊಡ್ಡಮೋಳೆ ಗ್ರಾಮದಲ್ಲಿ ನಿರ್ಮಿಸಿರುವ ಆಯುಷ್ಮಾನ್ ಆರೋಗ್ಯ ಕೇಂದ್ರ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ನ. 13ರ ಬೆಳಿಗ್ಗೆ 10 ಗಂಟೆಗೆ .ತಾಲೂಕಿನ ದೊಡ್ಡಮೋಳೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತಿ ವಹಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು, ದೊಡ್ಡಮೋಳೆ ಗ್ರಾ.ಪಂ. ಅಧ್ಯಕ್ಷೆ ನಿರ್ಮಲ ರಂಗನಾಥ್, ಉಪಾಧ್ಯಕ್ಷ ಮಹದೇವಶೆಟ್ಟಿ, ಸದಸ್ಯರಾದ ಡಿ.ಎನ್.ಲೋಕೇಶ್, ಡಿ.ವಿ. ಶಾಂತರಾಜು, ಮೇಘ ಮುಖ್ಯ ಅತಿಥಿಗಳಾಗಿರುವರು.

ನಾಳೆ ಮ.ಬೆಟ್ಟಕ್ಕೆ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ

ಚಾಮರಾಜನಗರ, ನ.12– ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ನ.14 ರಿಂದ ಮೂರು ದಿನಗಳ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ನವೆಂಬರ್ 14 ರ ರಾತ್ರಿ 10 ಗಂಟೆಗೆ ಮಲೆಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ವಾಸ್ತವ್ಯ ಹೂಡುವರು. 15ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯೋಜಿಸಿರುವ ಪೂರ್ವ ನಿಯೋಜಿತ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಅಲ್ಲಿಯೇ ವಾಸ್ತವ್ಯ ಹೂಡುವರು. ನ. 16ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಸಕಾಲಕ್ಕೆ ಬಾರದ ಬಸ್; ಕಾನೂನು ಕಾಲೇಜಿನ ವಿದ್ಯಾರ್ಥಿಗಳ ಪ್ರತಿಭಟನೆ


ಕೊಳ್ಳೇಗಾಲ ಬಸ್ ನಿಲ್ದಾಣದಲ್ಲಿ ಅಧಿಕಾರಿಗಳ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸಿದರು.

ಕೊಳ್ಳೇಗಾಲ, ನ.12–ಪಟ್ಟಣದ ಬಸ್ ನಿಲ್ದಾಣದಿಂದ ಚಾ.ನಗರಕ್ಕೆ ತೆರಳಲು ಸಕಾಲದಲ್ಲಿ ಬಸ್ ಸಿಗುತ್ತಿಲ್ಲ, ಎಂದು ಸಾರಿಗೆ ವ್ಯವಸ್ಥೆ ವಿರುದ್ಧ ಕಿಡಿ ಕಾರಿ ವಿದ್ಯಾರ್ಥಿಗಳು ಕೆಲಕಾಲ ಪ್ರತಿಭಟಿಸಿದ ಘಟನೆ ಬುಧವಾರ ಬೆಳಗ್ಗೆ ಬಸ್ ನಿಲ್ದಾಣದಲ್ಲಿ ಜರುಗಿತು

ಜಿಲ್ಲಾ ಕೇಂದ್ರದಲ್ಲಿನ ಕಾನೂನು ಕಾಲೇಜು ಸೇರಿದಂತೆ ಇನ್ನಿತರೆ ವಿಭಾಗಗಳಿಗೆ ಅಧ್ಯಯನಕ್ಕಾಗಿ ತೆರಳುವ ವಿದ್ಯಾರ್ಥಿಗಳು ತಮಗೆ ಸಕಾಲ ದಲ್ಲಿ ಬಸ್ ಸಿಗದೆ ಹಿನ್ನೆಲೆ ಕಾದು ಕಾದು ಬೇಸತ್ತು, ಬಸ್ ಬಾರದ ಹಿನ್ನೆಲೆ ವಿದ್ಯಾರ್ಥಿಗಳೆಲ್ಲರೂ ಜಮಾವಣೆಗೊಂಡು ಬಸ್ ನಿಲ್ದಾಣದ ಬಳ ಸಂಬಂಧಿಸಿದ ಅಧಿಕಾರಿಗಳಿಗೆ ಧಿಕ್ಕಾರ ಕೂಗುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದರು

ನಾವೆಲ್ಲರೂ ಪ್ರತಿದಿನ ಕಾಲೇಜಿಗೆ ತೆರಳಬೇಕು, ಆದರೆ ಸಕಾಲಕ್ಕೆ ಬಸ್‌ಗಳಿಲ್ಲದಿರುವುದರಿಂದ ನಿತ್ಯ ತೊಂದರೆ ಉಂಟಾಗುತ್ತಿದೆ. ನಾನ್‌ಸ್ಟಾಪ್ ಬಸ್‌ಗಳು ನಮಗೆ ಬಸ್ ಪಾಸ್ ಸೌಕರ್ಯ ನೀಡುತ್ತಿಲ್ಲ. ಈ ಬಗ್ಗೆ ಹಲವಾರು ಬಾರಿ ಕೆಎಸ್‌ಆರ್‌ಟಿಸಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಿಲ್ಲ ಎಂದು ಆಕ್ರೋಶ ಹೊರಹಾಕಿದರು

ಸಾರಿಗೆ ಅಧಿಕಾರಿಗಳು ಹಾಗೂ ಪೊಲೀಸರು ಆಗಮಿಸಿ ವಾತಾವರಣ ತಿಳಿಗೊಳಿಸಿದರು. ಈವೇಳೆ ವಿದ್ಯಾರ್ಥಿಗಳಾದ ದರ್ಶನ್, ಸುಜಯ್, ಉದಯ್, ಮನೋಜ್, ಮಹೇಶ್, ಶ್ರೇಯಸ್, ರಾಘವೇಂದ್ರ ಇನ್ನಿತರಿದ್ದರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
(MUDA Approved)
30x40
Srirampura Ring Road, near 1 km, Mysuru.
Mob: 8050345574

ಮಳಿಗೆ ಬಾಡಿಗೆಗೆ ಇದೆ
10x15 E & F Block Ramakrishnanagar, Opp. Church, near Kuvempunagar Police Station
Mob: 9980500026 9844624629

WANTED
BRAHMIN COOK
Required for a vegetarian family of 8. Morning (7 AM) till afternoon; and evening (5?6 PM) duty. Location: Panchvati circle, KD road.
8861985202

House for Sale
20x30, North face, Bogadhi 2nd Stage North near Nirmithi Kendra. 60 Lakh.
Mob: 7892595158

WANTED CAR DRIVERS
Saraswathipuram Local area Driver are priority.
Contact: Anantharamu
9663503333

ಫಂಕ್ಷನ್ ಹಾಲ್ ತಿಂಗಳ ಬಾಡಿಗೆಗೆ / ಭೋಗ್ಯಕ್ಕೆ
ಸರ್ಕಾರಿ ಆಸ್ಪತ್ರೆ ಮುಖ್ಯ ರಸ್ತೆ, ಪ್ರೈವೇಟ್ ಬಸ್ ಸ್ಟ್ಯಾಂಡ್ ಹತ್ತಿರ, ತಿ. ನರಸೀಪುರ



9448390643

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಬೇಕಾಗಿದ್ದಾರೆ
ಪುರುಷರು ಮಾತ್ರ ಬೇಕಾಗಿದ್ದಾರೆ. ಹೆಲ್ಪರ್ ಕೆಲಸಕ್ಕೆ ಯಾವುದೇ ವಿದ್ಯಾಭ್ಯಾಸ ಬೇಕಿಲ್ಲ. ಸಂಬಳ: 17,500 + ESI, PF. ವಯಸ್ಸು: 18–45 Maintenance ಗೆ ITI candidates ಬೇಕು. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಬಂದು ಸಂಪರ್ಕಿಸಿ:
Mob: 99868 74574
ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಕೆ.ಜಿ. ಕೊಪ್ಪಲು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಸಂಬಳ: ಸೂಪರ್‌ವೈಸರ್ : 22,000. ಗಾರ್ಡ್: 20,000. ಊಟ, ತಿಂಡಿ ಸೌಲಭ್ಯವಿರುತ್ತದೆ. ವಿದ್ಯಾರ್ಹತೆ: SSLC ಮೇಲ್ಪಟ್ಟು. ವಯೋಮಿತಿ: 45 ವರ್ಷದೊಳಗೆ.
9620777819 / 9620667819

FOR SALE
Brindavan Extension 40x60 East facing, ground floor, 3 BHK and 1st floor 3 BHK two floor house for sale and Gokulam 45x60 house for sale.
Mob: 9620607232

RERA APPROVED · RAI ESTATES · MUDA APPROVED · E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಸುವರ್ಣ ಯಾತ್ರಾ
6 ದಿನಗಳ ದುಬೈ, ಬುರ್ಜ್ ಖಲೀಫಾ ದುಬೈ ಫ್ರೇಮ್ ಡೆಸರ್ಟ್ ಸಫಾರಿ ಗ್ಲೋಬಲ್ ವಿಲೇಜ್ ಇತರೆ 12–12–25, 6 ದಿನಗಳ ಶ್ರೀಲಂಕಾ ಪ್ರವಾಸ 19–01–26.
9008381022 / 9019462508

SITE FOR SALE
No. 22/1A, North face, 30x40, near New Court, 3rd Cross, 4th Main, Jayanagar, Mysore.
Mob: 98800 47018

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸೆಲ್ ಹೋಟೆಲ್‌ಗೆ ಕಿಚನ್ ಹೆಲ್ಪರ್ಸ್ ಬೇಕಾಗಿದ್ದಾರೆ. ಸಮಯ: 9 ರಿಂದ 3 ಮತ್ತು 5 ರಿಂದ 10. 12,000 ಸಂಬಳದೊಂದಿಗೆ ಊಟ, ವಸತಿ ಉಚಿತ.
Mob: 7204404170

MUDA SITE FOR SALE
40x60, W/F, Clear Title @ Sathagalli 'B' Zone, near VTU College, very close to Ring Road, Mysore.
Mob: 72049 47966

OLD AGE HOME
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರಿಕರನ್ನು, ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
Mob: 9607172737

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

MUDA & RERA Approved
Site For Sale
Shree Sapthamathruka Layout, E-Khata & Bank Loan Available, 30x40 West Facing -30Lakhs* South & Park Facing - 32Lakhs*
Call: 7795609173

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular/ Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ– Rs. 11,200 (24 CT)
9108146123

ಸೈಟ್ ಮಾರಾಟಕ್ಕೆ ಇದೆ
30x40 ಉತ್ತರ ದಕ್ಷಿಣ 40x60 ಉತ್ತರ ಪಶ್ಚಿಮ, ಪೂರ್ವ ಯುನಿವರ್ಸಿಟಿ ಲೇಔಟ್, ರಿಂಗ್ ರೋಡ್ ಹತ್ತಿರ 40x60 MIT ಕಾಲೇಜ್ ಹತ್ತಿರ 30x40 ATM ಕಾಲೇಜ್ ಹತ್ತಿರ ವರುಣ, ಬನ್ನೂರು ರೋಡ್, ದಡದಹಳ್ಳಿ ಹತ್ತಿರ. ಸಂಪರ್ಕಿಸಿ :
Ph: 9900372792

IMMEDIATE REQUIREMENT
DATA ENTRY OPERATOR
with MS-Office
Qualification: Any Degree with minimum 2 years experience
0821-4148888/ 9164608888

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
GRAPHIC DESIGNER
(Expertise in Photoshop, Illustrator and CorelDraw)
& OFFICE BOY
Salary Based on Experience
Contact : 6362422664
Location : Near Shanthala Theater, NS Road, Mysore.

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ಬೇಕಾಗಿದ್ದಾರೆ WANTED
ಕಾಫಿ ಕೆಫೆಗೆ ಕೆಲಸಕ್ಕೆ ಬೇಕಾಗಿದ್ದಾರೆ
WORKERS FOR COFFEE CAFE
ಸಂಪರ್ಕಿಸಿ/CONTACT
8884595783, 7829020402

IMMEDIATE REQUIREMENT
MANAGER
(Minimum 3 Years Experience in Administration Preferred. VRS Persons within 55 Years age). Contact:
0821-4148888/ 9164608888

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಸಂಸ್ಥೆಗಳಿಗೆ 4th SSLC, PUC, ITI, Any Degree ಪಾಸ್/ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿ ಇರುತ್ತದೆ. ಸಂಬಳ + ಓಟಿ 15200 – 86000
Mob: 7892046990

ಕೆಲಸ ಖಾಲಿ ಇದೆ
ಮೈಸೂರಿನಲ್ಲಿರುವ ಮಹಿಳೆಯರಿಗೆ ಪುರುಷರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಫೀಸ್ ಕೆಲಸಗಳಿಗೆ ನೇರವಾಗಿ ಆಯ್ಕೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹವರಿಗೆ. ಸಂಬಳ: 20,000 ದಿಂದ 45,000. ಸಂಪರ್ಕಿಸಿ:
Mob: 80951 33188

ಉದ್ಯೋಗವಕಾಶ
ಕಂಪನಿ ಮತ್ತು ಆಫೀಸ್‌ಗಳಿಗೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹ ಯುವಕರು, ಯುವತಿಯರಿಗೆ 20,000 ದಿಂದ 45,000 + ಓಟಿ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಯೂಟವಿದೆ. ಸಂಪರ್ಕಿಸಿ:
Mob: 99167 44622

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Civil Construction
SKANDA PROPERTIES
Civil Construction starts Rs. 1,799* per sft.
Mob: 8310008208

ಬೇಕಾಗಿದ್ದಾರೆ
ಹೊಸ ಹೋಟೆಲ್‌ಗೆ ದೋಸೆ ಭಟ್ಟರು, ತಂದೂರಿ ಕುಕ್ ಬೇಕಾಗಿದ್ದಾರೆ.
Mob: 9900171642

IMMEDIATE REQUIREMENT
PERSONAL ASSISTANT
Qualification: Any Degree with good communication in English and hands on MS-Office. minimum 2 years experience
0821-4148888/ 9164608888

ನಿವೃತ್ತರಿಗೆ ಉದ್ಯೋಗವಕಾಶ
ನಿವೃತ್ತರು (VRS, ರಾಜ್ಯ, ಕೇಂದ್ರ, ಬ್ಯಾಂಕ್, ಖಾಸಗಿ, ಇತರೆ) ವಿದ್ಯಾವಂತ ಮಹಿಳೆಯರು ಹಾಗೂ ಬಿಸಿನೆಸ್ ವಲಯ ಇವರಿಗೆ ಆಹ್ವಾನ. ದಿನಾಂಕ 15–11–2025 ಶನಿವಾರ 11 am ಸೆಮಿನಾರ್. ಸ್ಥಳ: ಹೋಟೆಲ್ ಮಯೂರ ಹೊಯ್ಸಳ, ಜೆಎಲ್‌ಬಿ ರಸ್ತೆ (Metropole Hotel ಎದುರು), ಮೈಸೂರು. ತಪ್ಪದಿಂದ salary, ಪ್ರತಿಫಲಗಳು ಮನ್ನಣೆಗಳ ಬಗ್ಗೆ ಮಾಹಿತಿ, ರಾಜ್ಯೋತ್ಸವ ಪ್ರಯುಕ್ತ ಗೌರವಪೂರಕ ಸನ್ಮಾನವಿದೆ. Lunch arranged.
ಸಂಪರ್ಕಿಸಿ: 7349052084, 9448188504/7406904930

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108048064

ಉದ್ಯೋಗಾವಕಾಶ
ತಿಂಗಳಿಗೆ ಕನಿಷ್ಠ 50 ಸಾವಿರಕ್ಕೂ ಅಧಿಕ ಹಣಸಂಪಾದಿಸುವ ಸುವರ್ಣಾವಕಾಶ, ನಿವೃತ್ತ ನೌಕರರು, ಗೃಹಿಣಿಯರು, ಮಾರ್ಕೆಟಿಂಗ್, ಪಿಗ್ಮಿ, ಆರ್.ಡಿ., ಕಲೆಕ್ಷನ್ ಮಾಡುವವರಿಗೆ ಟೀಮ್ ಲೀಡರ್ ಕೆಲಸ
ಸಂಪರ್ಕಿಸಿ:
80501 06154

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

Solar Water Heaters built for Modern Living
JUPITER SOLAR
Solar Water Heater SALES & SERVICE
20 ವರ್ಷಗಳ ವ್ಯಾರಂಟಿ



SUNZONE SOLAR SYSTEM
VM Double Road, Kuvempunagar, Mysuru
9845175443

ಸದ್ಗುರು ಮ್ಯಾರೇಜಸ್
ಶೀಘ್ರ ವಿವಾಹಕ್ಕೆ ನೀವು ಎಷ್ಟೇ ಪ್ರಯತ್ನ ಮಾಡಿದರೂ ಮದುವೆ ಯೋಗವಿಲ್ಲವೇ? ಚಿಂತಿಸಬೇಡಿ ಗುರೂಜಿಯನ್ನು ಸಂಪರ್ಕಿಸಿ: ಎಲ್ಲಾ ಜಾತಿಯ ವಧುವರರಿಗೆ ಕೂಡಲೇ ಕರೆ ಮಾಡಿ.
9448229184 / 7899625268

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ / 12 ಗಂಟೆಗಳು, 24,000/ +W/o ಸೆಕ್ಯೂರಿಟಿ ಸೂಪರ್‌ವೈಸರ್ / 12 ಗಂಟೆಗಳು, 26,000 /+W/o ಹೌಸ್‌ಕೀಪಿಂಗ್ ಮಾರ್ಕೆಟಿಂಗ್, ಸೆಕ್ಯೂರಿಟಿ ಫೀಲ್ಡ್ ಆಫೀಸರ್, ಫೀಲ್ಡ್ ವರ್ಕ್ ಆಫೀಸರ್ ಬೇಕಾಗಿದ್ದಾರೆ. ಊಟ + ವಸತಿ ಇರುತ್ತದೆ.
Mob: 9632049421

SITE FOR SALE
Towards Mysore to Hunsur Bilikere, DC Conversion, 'E' North face 50x80, 4569 sq.ft. 20 km from Mysore City. Bank loan available.
8861930882 / 8197526707

FOR RENT
Shop: 1800 sq.ft. Also 1 & 2 BHK house in 2nd floor (Lift available) # 670D, 'M' Block, Kuvempunagar, beside SBI Branch.
Mob: 94480 47419

Sites For Sale 30/40 MUDA
South Face & North Face
JSS Layout 2nd Stage
IPS Nagar Ring Road
3 Sites are available
Call: 9380284276

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ವಯೋಮಿತಿ: 18 ರಿಂದ 45
ESI & PF ಸೌಲಭ್ಯವಿರುತ್ತದೆ. ಹೌಸ್‌ಕೀಪಿಂಗ್‌ಗೆ ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ಲಲಿತಾದ್ರಿಪುರಂ.
7676948164 / 9611618227

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
PUC, BA, MA, MBA, M.Com., M.Sc., MBBS, BE, M.Tech, B.Ed., D.Ed., M.Ed. etc.
ವಿವಾಹ ನೋಂದಣಿಗೆ ಕರೆ ಮಾಡಿ.
(2nd Marriage also)
9164124499 / 9035565773

ಉದ್ಯೋಗವಕಾಶ
ಮಹಿಳೆಯರು, ಯುವತಿಯರು, ಹಾಗೂ ಯುವಕರು ನಮ್ಮ ಸಂಸ್ಥೆಯಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ, ಉಚಿತ ಊಟ ಮತ್ತು ವಸತಿಯೊಂದಿಗೆ ಆಕರ್ಷಕ ಸಂಬಳ ಇರುತ್ತದೆ
Day/ night shift ಹಾಗೂ 24hr
Mob: 9739292222

CHANGE OF NAME
I, Basavaraja, W/o Late H.V. Channegowda, residing at Door No. MIG 31, Nrupatunga Road, Kuvempunagar, Mysore-570 023, have changed my name from Basavaraj to Basavaraja vide affidavit sworn before Notary S.V. Nagendra, Mysuru, dated 27-10-2025.
Sd/- Basavaraja

SITE FOR SALE
30x40 NF, 40 ft. road, KHB Colony, Chikka Mandya.
MoB: 8660532926

ಕೆಲಸಕ್ಕೆ ಬೇಕಾಗಿದ್ದಾರೆ
ಅಂಬಾರಿ ರೆಸ್ಟೋರೆಂಟ್
ಜೆ.ಕೆ. ಟೈರ್ಸ್ ರೇಡಿಯಲ್ ವಿಕ್ರಾಂತ್ ಎದುರು, ಹೆಬ್ಬಾಳ್. ಸಪ್ಲೈಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ: 16,500 ತಿಂಗಳಿಗೆ. ಊಟ, ವಸತಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ.
9611415014 / 9591408601

WANTED
Duplex House for Sale
Measuring 20 ft x 40 ft at Vinayaka Enclave Hootagalli, Mysore.
Mob: 89718 41767

WANTED
Required Honda two wheeler Senior Technician.
Workplace: Gokulam.
Salary: 20,000 + incentives.
Call: 93800 10600

ಮನೆ ಬಾಡಿಗೆಗೆ ಇದೆ
30x40, 2 BHK (ಇಂಡಿಪೆಂಡೆಂಟ್) ಸೋಲಾರ್, ಗೀಸರ್, ಸಸ್ಯಾಹಾರಿಗಳಿಗೆ ಆದ್ಯತೆ. ಶ್ರೀ ಭೈರವೇಶ್ವ ಲೇಔಟ್, ನ್ಯಾಯಾಂಗ ಬಡಾವಣೆ ಪಕ್ಕ, ಬೆಂಚ್ ಕಟ್ಟೆ ಮಾರಮ್ಮನ ದೇವಸ್ಥಾನ ಪಾರ್ಕ್ ಹತ್ತಿರ, ಮೈಸೂರು.
9480482815 / 9482063693

ಸುವರ್ಣ ಯಾತ್ರಾ
7 ದಿನಗಳ 2 ಜ್ಯೋತಿರ್ಲಿಂಗದೊಂದಿಗೆ ಕಾಶಿ, ಅಯೋಧ್ಯಾ, ಬಾಬಾ ವೈದ್ಯನಾಥ, ಗಯಾ, ಬುದ್ಧಗಯಾ, ನೈಮಿಶರಣ್ಯ ಪ್ರವಾಸ 29/11/25
7 ದಿನಗಳ ಕಾಮಾಕ್ಯ, ಶಿಲ್ಲಾಂಗ್, ಕಾಜಿರಂಗ ಮೇಘಾಲಯ ಪ್ರವಾಸ 25/12/25
10 ದಿನಗಳ ಕಾಶಿ, ಅಯೋಧ್ಯಾ, ನೇಪಾಳ, ಮುಕ್ತಿನಾಥ, ಮನೋಕಾಮನ, ಪೋಕ್ರ, ಕಠ್ಮಂಡು ಪ್ರವಾಸ 8/12/25
6 ದಿನಗಳ 9 ನವಗ್ರಹಗಳು ಮತ್ತು ರಾಮೇಶ್ವರಂ ಪ್ರವಾಸ 25/12/25
9008381022/9019462508

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ ಮಾವಿನಹಳ್ಳಿ ಗ್ರಾಮದಲ್ಲಿ 3 ಎಕರೆ 7 ಗುಂಟೆ ಜಮೀನು ಬೀಳೂರು ಮುಖ್ಯ ರಸ್ತೆಯಲ್ಲಿ 1 ಎಕರೆ 4 ಗುಂಟೆ ಜಮೀನು ಮತ್ತು ಹಾರೋಹಳ್ಳಿ ಹೈವೇ ರಸ್ತೆಯಲ್ಲಿ 10 ಗುಂಟೆ ಹಾಗೂ 12 ಗುಂಟೆ ಕಲ್ಲಹಳ್ಳಿ ಗ್ರಾಮದಲ್ಲಿ 35 ಗುಂಟೆ ಹಾಗೂ ಮದ್ದೂರು ಗ್ರಾಮದಲ್ಲಿ 25 ಗುಂಟೆ ಜಮೀನು ಮಾರಾಟಕ್ಕಿದೆ ಹಾಗೂ ಹಂಪಾಪುರ ಹೋಬಳಿಯಲ್ಲಿ ಹಿರೇ ನಂದಿ ಗ್ರಾಮದಲ್ಲಿ 35 ಗುಂಟೆ ಹಾಗೂ ಚಿಕ್ಕ ನಂದಿ ಗ್ರಾಮದಲ್ಲಿ 1 ಎಕರೆ 10 ಗುಂಟೆ ಹಾಗೂ ಕೆಂಚನಹಳ್ಳಿ ಮುಖ್ಯ ರಸ್ತೆಯಲ್ಲಿ 1 ಎಕರೆ 30 ಗುಂಟೆ ಜಮೀನು ಮಾರಾಟಕ್ಕಿದೆ.
Mob: 9945661696

WANTED FEMALE TELECALLER
for Reputed Real Estate Marketing Office. Good Comunication Skills. Attractive Salary and Incensitive
Gangothri Layout, Mysuru.
Call 9964923399

ಡ್ರೈವರ್ ಬೇಕಾಗಿದ್ದಾರೆ
ಗೂಡ್ಸ್ ಗಾಡಿಗೆ ಡ್ರೈವರ್ ಬೇಕಾಗಿದ್ದಾರೆ
ಸಂಬಳ: 15000ದಿಂದ 20000
ಊಟ ವಸತಿ ಉಚಿತ
8884179981

ಸೈಟ್ ಮಾರಾಟಕ್ಕೆ ಇದೆ
20×30 ದಕ್ಷಿಣ ಮುಖ ಸೈಟ್ ಮಾರಾಟಕ್ಕೆ ಇದೆ. ರಮಾಬಾಯಿ ನಗರ ಆಶ್ರಯ ಬಡಾವಣೆ, ಬ್ಲಾಕ್ ನಂ : 02, 25 ಲಕ್ಷ.
Mob: 7019917646

ಸೈಟುಗಳು ಮಾರಾಟಕ್ಕಿವೆ
30x50 N/F DTCP 11A Khatha, RERA Approved ಸೈಟುಗಳು ಮಾರಾಟಕ್ಕಿವೆ. 23 ಲಕ್ಷದ 50 ಸಾವಿರಗಳು. ಅಮೃತ್ ಕೊಕೊ, GSS Layout, (Opp. Park) ತಳೂರು ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು.
Mob: 9742198093

ಕೇರಳ ಪ್ರವಾಸ
ಒಟ್ಟು 4 ದಿನಗಳು. ಹೊರಡುವ ದಿನಾಂಕ: 25–12–2025. ವೀಕ್ಷಿಸುವ ಸ್ಥಳಗಳು: ಅಲ್ಲೆಪಿ, ಕೋವಲಂ, ಗುರುವಾಯೂರು, ಕೊಚ್ಚಿನ್ ಡಿಜೆ ಬೋಟ್, ಜಟಾಯು ಅರ್ಥ್ ಸೆಂಟರ್, ಅನಂತಪದ್ಮನಾಭ ದೇವಸ್ಥಾನ, ಅತೀರಪಿಲ್ಲಿ ಜಲಪಾತ, ಎಲಿಫೆಂಟ್ ಕ್ಯಾಂಪ್. ಊಟ, ತಿಂಡಿ ಸೇರಿರುತ್ತದೆ. ಪ್ರತ್ಯೇಕ ರೂಂಗಳು. ಈ ಮೇಲಿನ ಎಲ್ಲಾ ಸವಲತ್ತುಗಳು ಸೇರಿ ಒಬ್ಬರಿಗೆ 9000 ರೂಪಾಯಿಗಳು ಮಾತ್ರ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 70222 71023

ಸೈಟು ಮಾರಾಟಕ್ಕಿದೆ
30x50 N/F, KBL Silicon City, Phase-2, BEML ಹತ್ತಿರ, ಕೆಆರ್‌ಎಸ್ ರೋಡ್.
Mob: 92435 36373

ಬೇಕಾಗಿದ್ದಾರೆ
1) ಡ್ರೈವರ್ ಬೇಕಾಗಿದ್ದಾರೆ Ape Goods Auto Driver.
2) Xerox ಅಂಗಡಿಗೆ Computer knowledge ಇರುವವರು ಬೇಕಾಗಿದ್ದಾರೆ.
3) FMCG Distributors ಗೆ Salesman ಬೇಕಾಗಿದ್ದಾರೆ.
Mob: 96868 91690

REQUIRED FEMALE ACCOUNTS EXECUTIVE
Qualification: B.Com
Salary: 12,000 Rs - 16,000 Rs based on experience and knowledge. Location: VV MOHALLA, Mysore.
88610 88684, 77601 99462

Properties for Sale
@ Jayanagar, J.L. Puram, Kuvempunagar, S.S. Puram, Vijayanagar & surroundings.
Mob: 93421-25252

SITES WANTED
@ Nagawala, Yelwala, Anandasagara, Nithyananda Sagara & Mysore surroundings.
Quick Regn.
Mob: 95388-39926

ಕೆಮ್ಮಣ್ಣು ಮತ್ತು Gravell ಮಣ್ಣು ದೊರೆಯುತ್ತದೆ
ಇಲವಾಲದ ಬಳಿ 5 ಗುಂಟೆ ಜಮೀನು ಮಾರಾಟಕ್ಕಿದೆ
Call: 8310220458 7259407518

WANTED
Office Sales Executive For Housing Loan with knowing computer skills. Age between 24 years to 30 years
Contact:
Mob: 9986144999

ಬೇಕಾಗಿದ್ದಾರೆ
ಕೊರಿಯರ್ಸ್ ಸಂಸ್ಥೆಗೆ Part Time ಮತ್ತು Full Time ಕೆಲಸಕ್ಕೆ ಡೆಲಿವರಿ ಬಾಯ್ಸ್ ಹಾಗೂ Pick up ಮಾಡಲು ಹಾಗೂ ಬೆಳಗ್ಗೆ 8.30 to 2.30 ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಹೊಂದಿರುವ ಹುಡುಗರು ಬೇಕಾಗಿದ್ದಾರೆ
ಸಮಯ: 10 AM to 6 PM
Mob: 9449871790

Required Driver cum Delivery Boys
NO PART TIME. OWN VEHICLE NOT REQUIRED
Age : 20-35yrs. Salary: based on experience. Location: VV MOHALLA, Mysore
88610 88684, 77601 99462

ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ನಿಲಯ (K.G.B.V.-IV)
ಇಲ್ಲಿನ ವಿದ್ಯಾರ್ಥಿಗಳಿಗೆ ಟ್ಯೂಷನ್ ಮಾಡಲು B.Sc., B.Ed. ಆಗಿರುವ ಗಣಿತ ಶಿಕ್ಷಕರು ಮತ್ತು B.A., B.Ed. ಆಗಿರುವ ಇಂಗ್ಲೀಷ್ ಶಿಕ್ಷಕರು ಬೇಕಾಗಿರುತ್ತಾರೆ. ಇದು ಅತಿಥಿ ಶಿಕ್ಷಕರ ಹುದ್ದೆಗಳಾಗಿರುತ್ತವೆ. ಆಸಕ್ತರು ಹಾಸ್ಟೆಲ್ ವಾರ್ಡನ್ ಅಥವಾ ಮುಖ್ಯ ಶಿಕ್ಷಕರನ್ನು ಸಂಪರ್ಕಿಸಲು ಕೋರಿದೆ.
9591933060, 9740835124

ಹೊಸ ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ 3 ಬೆಡ್ ರೂಂ, ಇಟಾಲಿಯನ್ ಕಿಚನ್, ಆಲ್ ಟೀಕ್ ವುಡ್ ಮತ್ತು ಗ್ರಾನೈಟ್, ಸ್ನಾನದ ಟಬ್ ಹೊಂದಿರುವ ಮನೆ. 90 ಲಕ್ಷ.
Mob: 86184 95118

Hotel Sneha Kunja
ಹೋಟೆಲ್ ಕೆಲಸಕ್ಕೆ ಹುಡುಗರು / ಹೆಂಗಸರು ಬೇಕಾಗಿದ್ದಾರೆ. ಪಾರ್ಸೆಲ್ ಕೌಂಟರ್ ಬೇಕಾಗಿದ್ದಾರೆ. ದೋಸೆ, ಟೀ.
9606238790, 9986998606

ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದರೆ, (18k -38k), SSLC, PUC, DEGREE.
63667 18368, 9739121355

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ರಸ್ತೆ ದುರಸ್ಥಿಗೆ ಆಗ್ರಹಿಸಿ ಮುಳ್ಳೂರಿಂದ ನಂ.ಗೂಡಿಗೆ ಪಾದಯಾತ್ರೆ

ಅಂಬೇಡ್ಕರ್ ವೃತ್ತದ ಬಳಿ ಪ್ರತಿಭಟನೆ, ಶಾಸಕರು, ಅಧಿಕಾರಿಗಳ ವಿರುದ್ಧ ಆಕ್ರೋಶ

ನಂಜನಗೂಡು: ತಾಲೂಕಿನ ಮುಳ್ಳೂರು ಗ್ರಾಮದ ಮುಖ್ಯ ರಸ್ತೆ ಸಂಪೂರ್ಣ ಹಾಳಾಗಿದ್ದು, ರಸ್ತೆ ಅಭಿವೃದ್ಧಿ ಪಡಿಸುವಂತೆ ಆಗ್ರಹಿಸಿ ನೂರಾರು ಮಂದಿ ಗ್ರಾಮಸ್ಥರು ನಂಜನಗೂಡಿನಲ್ಲಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಂಜನಗೂಡು ನಗರಕ್ಕೆ ಪಾದಯಾತ್ರೆ ಮೂಲಕ ಆಗಮಿಸಿದ ನೂರಾರು ಮಂದಿ ಬುಧವಾರ ಬೆಳಗ್ಗೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಂಘಟಿತರಾಗಿ ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ಚುನಾಯಿತ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಮುಳ್ಳೂರು ಗ್ರಾಮದ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವಂತೆ ಒತ್ತಾಯಿಸಿ ಸ್ಥಳೀಯ ಗ್ರಾಮಸ್ಥರು ನಂಜನಗೂಡು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಸಂದೇಶ್ ಮಾತನಾಡಿ ಮುಳ್ಳೂರು ಗ್ರಾಮದ ಬೋಧಿ ವೃಕ್ಷ ವೃತ್ತದಿಂದ ತಿ.ನರಸೀಪುರ ಮುಖ್ಯ ರಸ್ತೆವರೆಗಿನ ಮಾರ್ಗ ಸಂಪೂರ್ಣ ಹಾಳಾಗಿದೆ. ಇದೇ ರಸ್ತೆಯಲ್ಲಿ ಹೊರಳವಾಡಿ, ಕುಳ್ಳಂಕನ ಹುಂಡಿ ಹಾಗೂ ಮುಳ್ಳೂರು ಗ್ರಾಮಸ್ಥರು ನಿತ್ಯ ಸಂಚರಿಸುತ್ತಿದ್ದು ಕೆಲ ವಾಹನ ಸವಾರರು ಅಪಘಾತಕ್ಕೀಡಾಗಿ ಗಾಯಗೊಂಡಿದ್ದಾರೆ. ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳೆದ ಎರಡೂವರೆ ವರ್ಷಗಳಿಂದಲೂ ಈ ಬಗ್ಗೆ ಸ್ಥಳೀಯ ಶಾಸಕರ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದರು.

ಚುನಾವಣೆಗೂ ಮುನ್ನ ಗ್ರಾಮದ ಅಭಿವೃದ್ಧಿಗೆ ನೆರವಾಗುವುದಾಗಿ ಭರವಸೆ ನೀಡಿದ್ದ ಅವರು ಈಗ ಮುಳ್ಳೂರು ಗ್ರಾಮದ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಈಗಲಾದರೂ ಎಚ್ಚೆತ್ತು ತಕ್ಷಣ ರಸ್ತೆ ಅಭಿವೃದ್ಧಿಗೆ ಮುಂದಾಗಬೇಕು. ಇಲ್ಲವಾದಲ್ಲಿ ಚುನಾಯಿತ ಜನಪ್ರತಿನಿಧಿಗಳ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಬಳಿಕ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮಾಡಲಾಗಿರುವ ಮನವಿ ಪತ್ರವನ್ನು ತಹಸೀಲ್ದಾರರಿಗೆ ಸಲ್ಲಿಸುವ ಮೂಲಕ ಪ್ರತಿಭಟನೆ ಅಂತ್ಯಗೊಳಿಸಿದರು.

ಪ್ರತಿಭಟನೆಯಲ್ಲಿ ಮುಳ್ಳೂರು ಸಿದ್ದರಾಜು, ಬಸವರಾಜು, ಶಿವಕುಮಾರ್, ಶಿವಣ್ಣ ಶರತ್, ಮಹೇಶ್, ಗಿರೀಶ್, ಶಂಕರಪುರ ಮಹದೇವಸ್ವಾಮಿ ಸೇರಿದಂತೆ ವಿಶ್ವರತ್ನ ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು ಹಾಗೂ ಸ್ಥಳೀಯ ಗ್ರಾಮಸ್ಥರು ಭಾಗವಹಿಸಿದ್ದರು.

ನಂ.ಗೂಡಲ್ಲಿ ನ.15ರಂದು ರೈತರ ಪ್ರತಿಭಟನೆ



ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಸತೀಶ್ ರಾವ್ ಮಾತನಾಡುತ್ತಿರುವುದು.

ನಂಜನಗೂಡು: ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ಮಶಾನ ಅಭಿವೃದ್ಧಿ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನ.15 ರಂದು ಬೆಳಿಗ್ಗೆ 10 ಗಂಟೆಗೆ ನಗರದ ತಾಲೂಕು ಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಸಂಘದ ಜಿಲ್ಲಾ ಅಧ್ಯಕ್ಷ ಸತೀಶ್ ರಾವ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸ್ಮಶಾನ ಅಭಿವೃದ್ಧಿ ಕಾಣದೆ ಇನ್ನೂ ಕೂಡ ಗ್ರಾಮೀಣ ಜನರು ಪರಿತಪಿಸುವಂತಾಗಿದೆ ಜೊತೆಗೆ ಕೆಲವು ಗ್ರಾಮಗಳಲ್ಲಿ ಸ್ಮಶಾನವಿಲ್ಲದೆ ಪರದಾಡುವಂತಾಗಿದೆ, ಹಲವಾರು ಗ್ರಾಮಗಳಲ್ಲಿ ರಸ್ತೆ, ಚರಂಡಿ, ವಿದ್ಯುತ್ ದೀಪ ಮತ್ತು ಮೂಲಭೂತ ಸೌಕರ್ಯವಿಲ್ಲದೆ, ಚರಂಡಿಗಳ ಸ್ವಚ್ಛತಾ ಕಾರ್ಯವಿಲ್ಲದೆ ಪರದಾಡುತ್ತಿದ್ದಾರೆ, ಕೆರೆ ಅಭಿವೃದ್ಧಿ, ಕೆರೆ ಒತ್ತುವರಿ ತೆರವು, ಈ–ಖಾತಾ ಸಮಸ್ಯೆ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಈಗಾಗಲೇ ಕರ್ನಾಟಕ ರಾಜ್ಯ ರೈತ ಸಂಘ ಗ್ರಾಪಂ ಅಧಿಕಾರಿಗಳು ಮತ್ತು ಗಾಪಂ ಸಿಇಓಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಸಹ, ಅಧಿಕಾರಿಗಳು ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ ಆದ್ದರಿಂದ ಅಧಿಕಾರಿಗಳ ಧೋರಣೆಯನ್ನು ಖಂಡಿಸಿ ರೈತ ಸಂಘ ನಗರದ ತಾಪಂ ಕಚೇರಿಯ ಮುಂಭಾಗ ಬೃಹತ್ ಪ್ರತಿಭಟನಾ ಧರಣಿ ಯನ್ನು ನಡೆಸಲಾಗುವುದು ಎಂದು ಹೇಳಿದರು.

ಮಹಿಳಾ, ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದಡಿ

ಹೈದರಾಬಾದ್ ಗ್ರಾಪಂಗೆ ಹೊಸಕೋಟೆ ಗ್ರಾಪಂ ಅಧ್ಯಕ್ಷೆ, ಪಿಡಿಒ ಅಧ್ಯಯನ ಪ್ರವಾಸ

ತಿ.ನರಸೀಪುರ, ನ.12– ರಾಜ್ಯದಾದ್ಯಂತ ಜಿಲ್ಲೆಗೆ ಒಂದು ಪಂಚಾಯಿತಿಯಂತೆ ಪಂಚಾಯಿತಿ ಅಭಿವೃದ್ಧಿ ಸೂಚ್ಯಂಕ(PAI) ಆಧಾರಿಸಿ ಮಹಿಳಾ ಮತ್ತು ಹೆಣ್ಣು ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದಡಿ ಮೊದಲನೇ ಹಂತದಲ್ಲಿ ತಿ.ನರಸೀಪುರ ತಾಲೂಕು ಹೊಸಕೋಟೆ (ಹಳೆಕೆಂಪಯ್ಯನಹುಂಡಿ) ಗ್ರಾಮ ಪಂಚಾಯಿತಿ ಆಯ್ಕೆಯಾಗಿದೆ.

ಈ ಅಭಿಯಾನದಡಿ ಕ್ಷೇತ್ರ ಭೇಟಿ ಅಧ್ಯಯನ ಪ್ರವಾಸವನ್ನು ನ.6ರಿಂದ 8ರವರೆಗೆ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್ಮೆಂಟ್ ಮತ್ತು ಪಂಚಾಯತ್ ರಾಜ್ ಸಂಸ್ಥೆ(NIRD & PR, HYDERBHAD) ಹೈದರಾಬಾದ್‌ನಲ್ಲಿ ಆಯೋಜಿಸಿದ್ದ ಪ್ರವಾಸದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಶೋಭಾ ಲೋಕೇಶ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪೂರ್ಣಿಮ ವಿ.ಎನ್ ಭಾಗವಹಿಸಿದ್ದರು.



ಅಧ್ಯಕ್ಷೆ ಶೋಭ ಅಲ್ಲಿನ ಎರಡು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿದ್ದು ಮಹಿಳಾ ಸಬಲೀಕರಣ ಕಾರ್ಯಕ್ರಮಗಳು, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ನರ್ಸರಿ ಗ್ರಾಮೀಣ ಉದ್ಯಾನವನ, ರಸ್ತೆ ಬದಿ ಅವೆನ್ಯೂ ಪ್ಲಾಂಟೇಷನ್ ಕಂಡು ಸಂತಸ ವ್ಯಕ್ತಪಡಿಸಿದರು. ಹಾಗೆ ಅಲ್ಲಿಯ ರೀತಿಯಲ್ಲಿ Mgnregs ಯೋಜನೆ ಅನುಷ್ಠಾನ ಮಾಡಲು ಮುಂದಾಗಿದ್ದು, ಹಸಿರೀಕರಣ, ಪರಿಸರ ಸಂರಕ್ಷಣೆ ಹಾಗೂ ಮಹಿಳಾ ಸಬಲೀಕರಣದಲ್ಲಿ ಯೋಜನೆಯನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬಹುದೆಂದು ಮನವರಿಕೆ ಮಾಡಿಕೊಂಡು ನಮ್ಮ ಗ್ರಾಮ ಪಂಚಾಯಿತಿಯಲ್ಲೂ ಅನುಷ್ಠಾನ ಮಾಡಲು ಹಾತೊರೆಯುತ್ತಿರುವುದಾಗಿ ಆಶಯ ವ್ಯಕ್ತಪಡಿಸಿದ್ದಾರೆ.

ಮುಂದಿನ ದಿನಗಳಲ್ಲಿ ಸಿಕ್ಕಿಂ ರಾಜ್ಯದಲ್ಲಿ ಇದೇ ರೀತಿಯ ಅಧ್ಯಯನ ಪ್ರವಾಸ ಹಮ್ಮಿಕೊಂಡಿದ್ದು ಆಸಕ್ತಿ ಇದ್ದವರು ರಾಜ್ಯ ಸರ್ಕಾರದ ಅನುಮತಿಯೊಂದಿಗೆ ಭಾಗವಹಿಸಲು ಅಲ್ಲಿನ ಅಧಿಕಾರಿ ವೃಂದದವರು ಸೂಚಿಸಿದ್ದು ಅಲ್ಲಿಗೆ ತೆರಳಿ ಕ್ಷೇತ್ರ ಅಧ್ಯಯನ ನಡೆಸಲು ಅಧ್ಯಕ್ಷರು ಹಾಗೂ ಪಿಡಿಓ ಉತ್ಸುಕರಾಗಿದ್ದಾರೆ. ಈ ರೀತಿ ಅಧ್ಯಯನ ಪ್ರವಾಸದಲ್ಲಿ ಕಲಿಯುವುದು ಬಹಳಷ್ಟಿದ್ದು ನಮ್ಮ ಗಾಪಂನಲ್ಲಿ ಅನುಷ್ಠಾನ ಮಾಡಲು ಅನುಕೂಲವಾಗುತ್ತದೆ ಎಂದು ಪಿಡಿಓ ತಿಳಿಸಿದರು.

30 ಕೋಟಿ ರೂ. ವೆಚ್ಚದಲ್ಲಿ ಕಪಿಲಾ ನದಿಗೆ ನೂತನ ಸೇತುವೆ

ವಾಲ್ಮೀಕಿ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ಅನಿಲ್ ಚಿಕ್ಕಮಾದು ಭರವಸೆ

ಸರಗೂರು, ನ.12– ತಾಲೂಕಿನ ತುಂಬಸೋಗೆ ಗ್ರಾಮದ ಬಳಿ ಕಪಿಲ ನದಿಗೆ ಅಡ್ಡಲಾಗಿ ಸೇತುವೆಯನ್ನು 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಸಮೀಪದ ತುಂಬಸೋಗೆ ಗ್ರಾಮದಲ್ಲಿ ಮಂಗಳವಾರ 35 ಲಕ್ಷ ರೂ. ವೆಚ್ಚದ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕಬಿನಿ ಜಲಾಶಯ ನಿರ್ಮಾಣದ ವೇಳೆ ನಿರ್ಮಿಸಲಾದ ಸೇತುವೆ ತುಂಬಾ ಹಳೆಯದಾಗಿದ್ದು, ಶಿಥಿಲಗೊಂಡಿದೆ. ಹೀಗಾಗಿ ನೂತನವಾಗಿ ಸೇತುವೆ ನಿರ್ಮಾಣ ಮಾಡಲು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರಕಾರದಲ್ಲಿ 30 ಕೋಟಿ ರೂ. ಅನುದಾನ ನೀಡಿದ್ದು, ಎರಡು ಬಸ್ ಹೋಗುವಂತೆ ಸೇತುವೆ ಅಗಲೀಕರಣ ಮಾಡಲಾಗುವುದು. ಇದಲ್ಲದೆ ಸರಗೂರು ಹ್ಯಾಂಡ್ ಪೋಸ್ಟ್ ರಸ್ತೆಯನ್ನು ದ್ವಿಪಥ ರಸ್ತೆ ಮಾಡಲು ಸರಕಾರ ಗಮನಕ್ಕೆ ತರಲಾಗಿದೆ ಎಂದರು.



ವಾಲ್ಮೀಕಿ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ಅನಿಲ್ ಚಿಕ್ಕಮಾದು.

ಹೈಟೆಕ್ ಭವನ: ಮೈಸೂರಿನಲ್ಲಿ ನಿರ್ಮಾಣಗೊಂಡಿರುವ ವಾಲ್ಮೀಕಿ ಭವನ ಮಾದರಿಯಲ್ಲಿಯೇ ಗ್ರಾಮದಲ್ಲಿ ಭವನ ನಿರ್ಮಾಣಗೊಳ್ಳಬೇಕು. ಶುಭ, ಸಮಾರಂಭಗಳು ನಡೆಯುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಸುರಕ್ಷಿತ ಭವನ ನಿರ್ಮಾಣ ಮಾಡಬೇಕು. ಕೋಟೆ ವಾಲ್ಮೀಕಿ ಭವನಕ್ಕೆ 2 ಕೋಟಿ ರೂ.ಅನುದಾನ ತರಲಾಗಿದೆ. ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಗ್ರಾಮದಲ್ಲಿ ಭವನ ನಿರ್ಮಾಣಕ್ಕೆ 1 ಕೋಟಿ ರೂ.ಅನುದಾನ ಕೇಳಿದ್ದೀರಿ. ಸದ್ಯ ಮುಖ್ಯಮಂತ್ರಿಗಳ ಅನುದಾನ 20 ಲಕ್ಷ ರೂ., ಸಂಸದರ ಅನುದಾನ 10 ಲಕ್ಷ ರೂ., ಶಾಸಕರ ಅನುದಾನ 5 ಲಕ್ಷ ರೂ. ಒಟ್ಟಾರೆ 35 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ. ಗ್ರಾಮಸ್ಥರು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಇದಲ್ಲದೆ ಬಸ್ ನಿಲ್ದಾಣಕ್ಕೆ 6 ಲಕ್ಷ ರೂ., ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು ಅನುದಾನ ನೀಡಲಾಗುವುದು ಎಂದರು.

ಹಿರಿಯ ಮುಖಂಡ ಬಿ.ಪಿ.ಬಸಪ್ಪ, ಆದಿ ಕರ್ನಾಟಕ ಮಹಾಸಭಾದ ತಾಲೂಕು ಅಧ್ಯಕ್ಷ ಇಟ್ನ ರಾಜಣ್ಣ ಮಾತನಾಡಿದರು. ತುಂಬಸೋಗೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮಿ, ಸದಸ್ಯರಾದ ನಾಗೇಂದ್ರ, ಚೆನ್ನನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಾಮರಾಜು, ಕಾಂಗ್ರೆಸ್ ಮುಖಂಡರಾದ ಬಿ.ಸಿ.ಬಸಪ್ಪ, ಶಂಭುಲಿಂಗನಾಯಕ, ಜಿನ್ನಹಳ್ಳಿ ರಾಜನಾಯಕ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ನಂಜಪ್ಪ ತಾಪಂ ಮಾಜಿ ಸದಸ್ಯ ಅಂಕಪ್ಪ, ಬಿದರಹಳ್ಳಿ ರಾಜು, ಪ್ರಕಾಶ್, ಜಕ್ಕಹಳ್ಳಿ ಮಲ್ಲೇಶ್, ಸಿದ್ದನಾಯಕ ಬಾಚೇಗೌಡನಹಳ್ಳಿ, ಆದಿ ಕರ್ನಾಟಕ ಮಹಾಸಭಾದ ತಾಲೂಕು ಅಧ್ಯಕ್ಷ ಇಟ್ನ ರಾಜಣ್ಣ, ತುಂಬಸೋಗೆ ನಾಗಣ್ಣ, ಹಳೆಯೂರು ಚಿನ್ನಯ್ಯ, ಶಿವಲಿಂಗು, ಸೋಮಣ್ಣ, ನಿರ್ಮಿತಿ ಕೇಂದ್ರದ ಸುಪ್ರೀತ್, ವಸಂತ್, ಅಶೋಕ್, ಆಪ್ತ ಸಹಾಯಕರಾದ ಮಂಜುನಾಥ್, ಸುದರ್ಶನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ನಾಳೆ ಹದಿನಾರು ಗ್ರಾಮದ ಶ್ರೀ ಬಿಳಿಕೆರೆ ಮಾದಪ್ಪ ದೇವಸ್ಥಾನ ಉದ್ಘಾಟನೆ

ನಂಜನಗೂಡು: ನಂಜನಗೂಡು ತಾಲೂಕು ಹದಿನಾರು ಗ್ರಾಮದಲ್ಲಿ ಶಿಥಿಲಗೊಂಡಿದ್ದ ಶ್ರೀ ಬಿಳಿಕೆರೆ ಮಾದಪ್ಪ ದೇವಸ್ಥಾನವು ಮರು ನಿರ್ಮಾಣಗೊಂಡಿದ್ದು, ನ.14 ರಂದು ಉದ್ಘಾಟನೆಗೊಳ್ಳಲಿದೆ.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಸ್ವಗ್ರಾಮವಾದ ಹದಿನಾರು ಗ್ರಾಮದಲ್ಲಿ ಶ್ರೀ ಬಿಳಿಕೆರೆ ಮಾದಪ್ಪ ದೇವಸ್ಥಾನವು ಶಿಥಿಲಗೊಂಡಿತ್ತು, ಸಚಿವ ಮಹದೇವಪ್ಪರವರ ತಾಯಿ ಹಾಗೂ ಗ್ರಾಮಸ್ಥರ ಕೋರಿಕೆಯ ಮೇರೆಗೆ ದೇವಸ್ಥಾನದ ಸಮಿತಿಯವರ ನಿರ್ದೇಶನದಲ್ಲಿ ಶಿಥಿಲಗೊಂಡಿದ್ದ ಶ್ರೀ ಬಿಳಿಕೆರೆ ಮಾದಪ್ಪ ದೇವಸ್ಥಾನವನ್ನು ಹೆಚ್ಚಿನ ಕಾಳಜಿ ವಹಿಸಿ ಪುನರ್ ನಿರ್ಮಾಣಗೊಳಿಸಿದ್ದಾರೆ. ರಾಜಗೋಪುರ, ಕಲ್ಯಾಣ ಮಂಟಪ, ಶೌಚಾಲಯ, ಕಛೇರಿ, ಕಲ್ಯಾಣಿ, ವಿಶ್ರಾಂತಿ ಗೃಹ ಹಾಗೂ ಇನ್ನಿತರ ಕಾಮಗಾ



ರಿಗಳನ್ನು ವಿವಿಧ ಇಲಾಖೆಗಳ ಸುಮಾರು 7 ಕೋಟಿ ರೂಗಳ ಅನುದಾನದಲ್ಲಿ ಜೀರ್ಣೋದ್ಧಾರಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಪ್ರವಾಸಿ ತಾಣವಾಗಲಿದೆ.

ಕಾರ್ಯಕ್ರಮದ ಮೊದಲ ದಿನವಾದ ನ.14ರಂದು ದೇವಾಲಯ ಉದ್ಘಾಟನೆಗೊಳ್ಳಲಿದ್ದು, ನ.16ರಂದು ಸಾಮೂಹಿಕ ವಿವಾಹ, 17 ರಂದು ಹಾಲರವಿ ಉತ್ಸವ, ರಥೋತ್ಸವ, ಹಾಗೂ ತೆಪ್ಪೋತ್ಸವ ಮತ್ತು ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿದೆ.

ಪ್ರತಿಭಾ ಕಾರಂಜಿ ಕಾರ್ಯಕ್ರಮ



ಕಂಪ್ಲಾಪುರ ಸಮೀಪದ ಸುಂಡವಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಡಾ ಪ್ರಶಾಂತ್ ಮಾತನಾಡಿದರು. ಮುಖ್ಯ ಶಿಕ್ಷಕ ರವಿ, ಎಸ್‌ಡಿಎಂಸಿ ಅಧ್ಯಕ್ಷ ಸುರೇಶ್, ಇತರರು ಹಾಜರಿದ್ದರು .

ನಾಗರಹೊಳೆ ಕಾಡಿನಲ್ಲಿ ಮುಂದುವರೆದ ಹುಲಿಯ ಅರ್ಭಟ

ದೇವರ ಬಸವ, ಹಸು ಬಲಿ ಪಡೆದ ಹುಲಿ, ಆತಂಕದಲ್ಲಿ ಗ್ರಾಮಸ್ಥರು



ಹುಲಿ ದಾಳಿಗೆ ಬಲಿಯಾದ ಹಸು.



ಹುಲಿ ದಾಳಿಗೆ ಬಲಿಯಾದ ಬಸವನ ಅಂತ್ಯಕ್ರಿಯೆ ನೆರವೇರಿಸುತ್ತಿರುವುದು.

ಹೆಚ್.ಡಿ.ಕೋಟೆ/ಹನಗೋಡು, ನ.12– ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ಹುಲಿಯ ಆರ್ಭಟ ಮುಂದುವರೆದಿದ್ದು, ದೇವರಿಗೆ ಬಿಟ್ಟ ಗೂಳಿ ಸೇರಿದಂತೆ ಎರಡು ಹಸುಗಳನ್ನು ಪ್ರತ್ಯೇಕ ಪ್ರಕರಣದಲ್ಲಿ ಬಲಿ ಪಡೆದಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಬಸವೇಶ್ವರ ದೇವರ ಗೂಳಿ ಬಲಿ ಪಡೆದ ಹುಲಿ: ಬಸವೇಶ್ವರ ದೇವರಿಗೆ ಬಿಟ್ಟಿದ್ದ ಗೂಳಿಯನ್ನ ಹುಲಿ ಕೊಂದು ಹಾಕಿದ್ದು, ಗ್ರಾಮಸ್ಥರಲ್ಲಿ ತೀವ್ರ ಬೇಸರವನ್ನುಂಟುಮಾಡಿದೆ.

ಹೆಚ್.ಡಿ.ಕೋಟೆ ತಾಲೂಕಿನ ಮಳಲಿ ಗ್ರಾಮದಲ್ಲಿ ಘಟನೆ ಸಂಭವಿಸಿದೆ. ಗ್ರಾಮಸ್ಥರು ಪೂಜಿಸುತ್ತಿದ್ದ ಬಸವೇಶ್ವರ ಗೂಳಿಯನ್ನು ಕೊಂದು ಹಾಕಿದೆ.

ಮಳಲಿ ಗ್ರಾಮದಲ್ಲಿ ಬಸವೇಶ್ವರ ದೇವರಿಗೆ ಎಂದು ಬಿಟ್ಟಿದ್ದ ಗೂಳಿ, ಪಕ್ಕದ ಎನ್. ಬೆಳ್ತೂರು ಗ್ರಾಮದ ಬಳಿ ಮೇಯಲು ತೆರಳಿದ್ದ ಸಂದರ್ಭದಲ್ಲಿ ಹುಲಿ ದಾಳಿ ನಡೆಸಿ ಗೂಳಿಯ ಅರ್ಧ ಭಾಗವನ್ನೇ ತಿಂದು ಹಾಕಿದೆ.

ವಿಚಾರ ತಿಳಿಯುತ್ತಿದ್ದಂತೆ ಗ್ರಾಮದ ಜನರು ಸ್ಥಳಕ್ಕೆ ತೆರಳಿ ಇದನ್ನು ಕಂಡು ಮರುಗಿದರು. ನಂತರ ಪೂಜೆ ಸಲ್ಲಿಸಿ ಸಾಂಪ್ರದಾಯದಂತೆ ಅಂತ್ಯ ಸಂಸ್ಕಾರ ನೆರವೇರಿಸಿದರು.

ಹಸು ಬಲಿ: ಬುಧವಾರ ಶೆಟ್ಟಳ್ಳಿ–ಲಕ್ಕಪಟ್ಟಣ ಗಿರಿಜನ ಪುನರ್ವಸತಿ ಕೇಂದ್ರದ ಬಳಿಯ ಜಮೀನಿನಲ್ಲಿ ಹಸುವಿನ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ.

ಕಚುವಿನಹಳ್ಳಿಯ ರಾಮೇಗೌಡರಿಗೆ ಸೇರಿದ ಹಸು ಸಾವನ್ನಪ್ಪಿದ್ದು, ಶೆಟ್ಟಳ್ಳಿ–ಲಕ್ಕಪಟ್ಟಣ ಅರಣ್ಯ ಪ್ರದೇಶದ ಬಳಿಯ ಜೋಳದ ಹೊಲದಲ್ಲಿ ಮೇಯಲು ಬಿಟ್ಟಿದ್ದ ಹಸುವಿನ ಮೇಲೆರಗಿ ಕೊಂದು ಹಾಕಿದೆ. ಜಮೀನಿನಲ್ಲಿದ್ದ ರಾಮೇಗೌಡ ಹಾಗೂ ಅಕ್ಕಪಕ್ಕದ ಜಮೀನಿನ ರೈತರು ಕೂಗಿಕೊಂಡಿದ್ದರಿಂದ ಹಸುವನ್ನು ಬಿಟ್ಟು ಪಕ್ಕದ ಕಾಡು ಸೇರಿಕೊಂಡಿದೆ.

ಸ್ಥಳದಲ್ಲೇ ಪರಿಹಾರಕ್ಕೆ ಪಟ್ಟು: ಘಟನಾ ಸ್ಥಳಕ್ಕಾಗಮಿಸಿದ ಪ್ರಭಾರ ಆರ್.ಎಫ್.ಓ. ದೇವರಾಜ್ ಹಾಗೂ ಸಿಬ್ಬಂದಿಗಳೊಂದಿಗೆ ವಾಗ್ವಾದಕ್ಕಿಳಿದ ರೈತರು ಹುಲಿ ದಾಳಿಯಿಂದ ಹಸು ಸಾವನ್ನಪ್ಪಿದ್ದು, ಈ ಭಾಗದಲ್ಲಿ ನಿರಂತರವಾಗಿ ಹುಲಿ ಕಾಟವಿದೆ. ನಿತ್ಯ 10 ಲೀಟರ್ ಹಾಲು ಕೊಡುತ್ತಿದ್ದ ಲಕ್ಷಾಂತರ ಬೆಲೆ ಬಾಳುವ ನಮ್ಮ ಹಸುವನ್ನು ಕೊಂದಿದೆ. ಇಲಾಖೆ ಅಷ್ಟು ಪರಿಹಾರ ಕೊಡಲ್ಲಾ. ಹುಲಿ ಸೆರೆ ಹಿಡಿಯಲು ನಿಮ್ಮಿಂದಾಗುತ್ತಿಲ್ಲಾ. ತಡವಾಗಿ ಪರಿಹಾರ ನೀಡುತ್ತೀರಾ, ಹಿರಿಯ ಅಧಿಕಾರಿಗಳು ಸ್ಥಳಕ್ಕಾಗಮಿಸಬೇಕು, ಹುಲಿ ಸೆರೆ ಹಿಡಿಯುವ ಜೊತೆಗೆ ಸ್ಥಳದಲ್ಲೇ ಪರಿಹಾರ ನೀಡುವಂತೆ ಪಟ್ಟುಹಿಡಿದರು.

ಕೊನೆಗೆ ಮನವೊಲಿಸಿದ ಆರ್‌ಎಫ್‌ಓ ಶೀಘ್ರ ಪರಿಹಾರ ಕೊಡಿಸಲಾಗುವುದು, ಹುಲಿ ಸೆರೆಗೆ ಟ್ರ್ಯಾಪಿಂಗ್ ಕ್ಯಾಮರಾ ಅಳ ವಡಿಸಲಾಗಿದೆ. ಹುಲಿ ಸೆರೆಗೆ ಕ್ರಮವಹಿಸ ಲಾಗುವುದೆಂಬ ಭರವಸೆ ಮೇರೆಗೆ ಹಸುವಿನ ಶವ ಪರೀಕ್ಷೆ ನಡೆಸಲು ಅನುವು ಮಾಡಿಕೊಟ್ಟರು.

ಹುಣಸೂರು ಶಬ್ಬೀರ್ ನಗರದ ಕೊಲೆ ಪ್ರಕರಣ

ಪ್ರಮುಖ ಆರೋಪಿ ಸೇರಿ ಮೂವರ ಬಂಧನ

ಹುಣಸೂರು.ನ.12– ಗುರುವಾರ (ನ.6)ಸಂಜೆ ಶಬ್ಬಿರ್ ನಗರದಲ್ಲಿ ನಡೆದಿದ್ದ ಬರ್ಬರ ಕೊಲೆ ಪ್ರಕರಣದ ಪ್ರಮುಖ ಅರೋಪಿ ಸೇರಿದಂತೆ ಉಳಿದ ಮೂವರು ಅರೋಪಿಗಳನ್ನು ಬಂಧಿಸುವಲ್ಲಿ ಹುಣಸೂರು ನಗರ ಪೊಲಿಸರ ತಂಡ ಯಾಶಸ್ವಿಯಾಗಿದೆ.




ಖಿಜರ್ ಪಾಷ

ಕೊಲೆ ಪ್ರಕರಣದ ಪ್ರಮುಖ ಅರೋಪಿ ಏಜಾಜ್ ಪಾಷ , ಮುಜೀಬ್ ಮತ್ತು ಅಬ್ದುಲ್ಲಾ ಇವರನ್ನು ಹಾಸನ ಜಿಲ್ಲೆ ಕೊಣನೂರು ಬಳಿ ಮಂಗಳವಾರ ಬಂಧಿಸಿ ಕರೆತಂದು ವಿಚಾರಣೆಗೆ ಒಳಪಡಿಸಿ ನಂತರ ನಿನ್ನೆ ರಾತ್ರಿ ನ್ಯಾಯಾದೀಶರ ಮುಂದೆ ಹಾಜರ್ಪಡಿಸಲಾಗಿ ಅರೋಪಿಯನ್ನು ನ.25ರ ವರಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ತಿಳಿಸಿದ್ದಾರೆ.

ನ.6ರ ರಂದು ಸಂಜೆ ನಗರದ ಶಬ್ಬಿರ್ ನಗರಕ್ಕೆ ಗುರುಗಳ ಅಶೀರ್ವಾದ ಮತ್ತು ಪ್ರಾರ್ಥನೆ ಗೆಂದು ಬಂದಿದ್ದ ಸಾಲಿಗ್ರಾಮದ ಹೊನ್ನೇನಹಳ್ಳಿ ಗ್ರಾಮದ ಖಿಜರ್ ಪಾಷ ಅವರನ್ನು ಈ ಐದು ಜನರ ತಂಡ ಲಾಂಗ್‌ಗಳಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಪರಾರಿಯಾಗಿತ್ತು ಅರೋಪಿಗಳ ಪತ್ತೆಗಾಗಿ ಎಸ್‌ಪಿ ವಿಷ್ಣುವರ್ಧನ್ ಅಡಿಷನಲ್ ಎಸ್ಪಿ ಮಲೀಕ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ರವಿ ಅವರ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಪಿ.ಎಸ್.ಐ ಜಮೀರ್ ಅಹಮದ್, ಸಿಬ್ಬಂದಿಗಳಾದ ಅರುಣ್ ಕುಮಾರ್, ಅಶೋಕ್, ಇರ್ಫಾನ್, ರಾಘು, ಯೋಗೇಶ್ ರವರುಗಳ ತಂಡ ರಚಿಸಿದ್ದು, ಅರೋಪಿಗಳನ್ನು ಬೆನ್ನತ್ತಿ ಹಿಡಿಯುವಲ್ಲಿ ಯಾಶಸ್ವಿಯಾಗಿದ್ದಾರೆ

ತೆನೆ ಇಳಿಸಿ ಕೈ ಹಿಡಿದ ಪಪಂ ಸದಸ್ಯೆ



ಸರಗೂರು ಪಟ್ಟಣ ಪಂಚಾಯಿತಿ 2ನೇ ವಾರ್ಡಿನ ಸದಸ್ಯೆ ಚೈತ್ರಸ್ವಾಮಿ ಜೆಡಿಎಸ್ ತೊರೆದು ಶಾಸಕ ಅನಿಲ್ ಚಿಕ್ಕಮಾದು ಅವರ ಮಾರ್ಗದರ್ಶನದಂತೆ ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸರಗೂರು ಟೌನ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎನ್.ನಾಗರಾಜು ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ. ಈ ವೇಳೆ ಕಾಂಗ್ರೆಸ್ ನಾಯಕರು ಪಕ್ಷದ ಧ್ವಜ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು. ಇನ್ನಷ್ಟು ಜನರು ಬೇರೆ ಬೇರೆ ಪಕ್ಷಗಳನ್ನು ಬಿಟ್ಟು ಕಾಂಗ್ರೆಸ್ ಸೇರುತ್ತಾರೆ ಎಂದು ತಿಳಿಸಲಾಯಿತು.

ಕುಸಿದು ಬಿದ್ದ ನಟ ಗೋವಿಂದ; ಆಸ್ಪತ್ರೆಗೆ ದಾಖಲು

ಮುಂಬೈ: ಬಾಲಿವುಡ್‌ನ ನಂಬರ್ ಒನ್ ಹೀರೋ ಗೋವಿಂದಾ ಅವರ ಆರೋಗ್ಯ ಸ್ಥಿತಿ ತೀರ ಹದಗೆಟ್ಟಿದೆ. ನಟ ಗೋವಿಂದ ಮಂಗಳವಾರ ರಾತ್ರಿ ತಮ್ಮ ಜುಹು ಮನೆಯಲ್ಲಿ ಹಠಾತ್ತನೆ ಕುಸಿದು ಬಿದ್ದಿದ್ದಾರೆ. ನಂತರ ಅವರನ್ನು ತಕ್ಷಣ ಜುಹು ಕ್ರಿಟಿಕಲ್ ಕೇರ್ ಆಸ್ಪತ್ರೆಗೆ ದಾಖಲಿಸಲಾಯಿತು.

ರಾತ್ರಿ 8.30ಕ್ಕೆ ಇದ್ದಕ್ಕಿದ್ದಂತೆ ಪ್ರಜ್ಞೆ ತಪ್ಪಿತು. ಮನೆಯಲ್ಲೇ ವೈದ್ಯರನ್ನು ಕರೆಸಿ ಔಷಧಿ ನೀಡಿದರು. ಸ್ಥಿತಿ ಸ್ವಲ್ಪ ಸುಧಾರಿಸಿತು. ಆದರೆ ಮತ್ತೆ 12.30 ಸುಮಾರಿಗೆ ಮತ್ತೆ ಅಸ್ವಸ್ಥತೆ ಶುರುವಾಯಿತು. ಹೀಗಾಗಿ 1 ಗಂಟೆಗೆ ಆಸ್ಪತ್ರೆಗೆ ದಾಖಲಿಸಿದ್ದೇವೆ. ಹಲವು ಪರೀಕ್ಷೆಗಳು ನಡೆದಿವೆ

ನಾವು ಕೇಳಿದಷ್ಟು ಅನುದಾನ ಸಿಗದೆ ತೊಂದರೆಯಾಗುತ್ತಿದೆ

ಜನ ಸಂಪರ್ಕ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಬೇಸರ

ಕೆ.ಆರ್.ನಗರ, ನ.12– ಕ್ಷೇತ್ರದ ಅಭಿವೃದ್ಧಿಗಾಗಿ ಈಗಾಲೇ ಸಾಕಷ್ಟು ಅನುದಾನ ತಂದು ಕೆಲಸ ಮಾಡಿದ್ದೇನೆ. ನಾವು ಕೇಳಿದಷ್ಟು ಸಾಕಷ್ಟು ಅನುದಾನ ಸಿಗದೇ ಇರುವುದರಿಂದ ತೊಂದರೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ಮತ್ತಷ್ಟು ಅನುದಾನ ತಂದು ಗ್ರಾಮಗಳ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ತಾಲೂಕಿನ ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದನಕೊಪ್ಪಲು ಗ್ರಾಮದಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮಸ್ಥರ ಬೇಡಿಕೆಯಂತೆ ಗ್ರಾಮದಲ್ಲಿನ ವಿವಿಧ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೊಳಿಸಲಾಗುತ್ತದೆ, ಸಮುದಾಯ ಭವನ, ಜಮೀನಿಗೆ ಹೋಗುವ ರಸ್ತೆ ದುರಸ್ಥಿಗೊಳಿಸಲಾಗುತ್ತದೆ, ಬಸ್ ತಂಗು ನಿಲ್ದಾಣ ನಿರ್ಮಿಸಲಾಗುತ್ತದೆ ಎಂದು ಭರವಸೆ ನೀಡಿದರು. ಕುಡಿಯುವ ನೀರಿಗಾಗಿ ಗ್ರಾಮದಲ್ಲಿ ಬೋರ್‌ವೆಲ್ ಕೊರೆಸಿದರೂ ಸಹ ಬೋರ್‌ವೆಲ್‌ನಲ್ಲಿ ನೀರು ಬರದೇ ಇರುವುದರಿಂದ ತಜ್ಞರ ಮೂಲಕ ನೀರಿನ ಅಂತರ್ಜಲ ಪರೀಕ್ಷೆ ಮಾಡಿಸಿ ಬಳಿಕ ಬೋರ್ ವೆಲ್ ಕೊರೆಸಿ ಗ್ರಾಮಕ್ಕೆ ನೀರು ಸರಬರಾಜು ಆಗುವಂತೆ ನೋಡಿಕೊಳ್ಳಲಾಗುತ್ತದೆ. ಸ್ಮಶಾನಕ್ಕೆ ಕೆರೆ ಬಳಿ ಜಾಗ ಗುರುತಿಸಿ ಅಭಿವೃದ್ಧಿಗೊಳಿಸಲಾಗುತ್ತದೆ ಎಂದರು.

ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮಾತನಾಡಿ, ಹಲವು ವರ್ಷಗಳಿಂದ ಸರ್ಕಾರಿ ಮತ್ತು ಖಾಸಗಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ಇ–ಸ್ವತ್ತು ಮಾಡಿಸಿಕೊಳ್ಳಲು ರಾಜ್ಯ ಸರ್ಕಾರ 94ಡಿ ಅಡಿಯಲ್ಲಿ ಹೊಸ ಯೋಜನೆ ಜಾರಿಗೆ ತಂದಿದೆ. ಸಿದ್ದನಕೊಪ್ಪಲು ಗ್ರಾಮದಲ್ಲಿ ಈಗಾಗಲೇ 116 ಹಕ್ಕು ಪತ್ರ ನೀಡಲಾಗಿದೆ. ಹಿತ್ತಲಿನ ಜಾಗ ಸೇರಿಸಿಕೊಳ್ಳದೇ ಇರುವುದರಿಂದ ಮನೆ ಮಾಲೀಕರಿಗೆ ತೊಂದರೆಯಾಗಿದೆ. ಶಾಸಕರ ನಿರ್ದೇಶನದಂತೆ ಹಿತ್ತಲು ಜಾಗ ಮತ್ತೊಮ್ಮೆ ಸರ್ವೆ ಮಾಡಿ ಅಳತೆ ಗೊಂದಲ ನಿವಾರಿಸಲಾಗುತ್ತದೆ ಎಂದರು.

ಹಲವು ವರ್ಷಗಳಿಂದ ಪೌತಿ ಖಾತೆ ಮಾಡಿಸಿಕೊಳ್ಳದೇ ಇರುವುದರಿಂದ ತಾಲೂಕಿನಲ್ಲಿ ಸುಮಾರು 12470 ಪ್ರಕರಣಗಳಲ್ಲಿ ಬ್ಯಾಂಕ್ ಸಾಲ, ಸಬ್ಸಿಡಿ ಸೇರಿದಂತೆ ಸರ್ಕಾರದ ಯಾವೊಂದು ಸೌಲಭ್ಯ ಪಡೆದುಕೊಳ್ಳಲು ವಾರಸುದಾರರಿಗೆ ಸಾಧ್ಯವಾಗುತ್ತಿಲ್ಲ. ತಾಲೂಕಿನಲ್ಲಿ ಕಂದಾಯ ಇಲಾಖೆಯಿಂದ ಇ–ಪೌತಿ ಆಂದೋಲನ, ಪಿಂಚಣಿ ಅದಾಲತ್ ಮಾಡಲಾಗುತ್ತಿದ್ದು, ವಾರಸುದಾರರು ವಂಶವೃಕ್ಷ, ಇ–ಕೆವೈಸಿ, ಆಧಾರ್ ಸೀಡಿಂಗ್ ಮಾಡಿಸಿಕೊಂಡು ಸರ್ಕಾರದ ಸವಲತ್ತುಗಳನ್ನು ಬಳಸಿಕೊಳ್ಳಬೇಕು ಎಂದರು.



ಜನ ಸಂಪರ್ಕ ಸಭೆಯಲ್ಲಿ ಜನರಿಂದ ಅಹವಾಲು ಸ್ವೀಕರಿಸುತ್ತಿರುವ ಶಾಸಕ ರವಿಶಂಕರ್.

ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಿ.ಪಿ.ಕುಲದೀಪ್, ಗ್ರಾ.ಪಂ. ಅಧ್ಯಕ್ಷ ಈರಮ್ಮ, ಉಪಾಧ್ಯಕ್ಷೆ ಎಸ್.ಆರ್. ಭಾಗ್ಯ, ಸದಸ್ಯರಾದ ರಂಜಿತಾ, ನಾರಾಯಣಸ್ವಾಮಿ, ಮಹದೇವ,ಕುಮಾರಿ, ರೇಖಾ, ರಮೇಶ್, ಈಶ್ವರ್ ರಾವ್, ಛಾಯಾ, ಪಿಡಿಓ ಕೆ.ವಿ.ಮಹೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಘಟಕದ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯಶಂಕರ್, ಕಾಂಗ್ರೆಸ್ ವಕ್ತಾರ ಸಯ್ಯದ್ ಜಾಬೀರ್, ಮುಖಂಡರಾದ ಎಸ್.ಕೆ.ಗೌತಮ್, ಯಜಮಾನ್ ಗಣೇಶ್, ಮಾದೇಗೌಡ, ರಾಘವೇಂದ್ರ, ಜಲೇಂದ್ರ, ವಿವಿಧ ಇಲಾಖೆಗಳ ಅಧಿಕಾರಿಗಳು, ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮೈಸೂರು ಮಿತ್ರ

ಸೆಕ್ಯೂರಿಟಿ ಗಾರ್ಡ್ ಸಂಶಯಾಸ್ಪದ ಸಾವು

ಸೆಕ್ಯೂರಿಟಿ ಏಜೆನ್ಸಿ ಕಿರುಕುಳ ಆರೋಪ; ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂದೆ ಪ್ರತಿಭಟನೆ

ಮೈಸೂರು, ನ.12(ಬಿಎಲ್‌ಯು)– ಮೈಸೂರಿನ ಓರಿಯೆಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ಕರ್ತವ್ಯ ನಿರತ ಸೆಕ್ಯೂರಿಟಿ ಗಾರ್ಡ್ ಸಂಶಯಾಸ್ಪದವಾಗಿ ಸಾವನ್ನಪ್ಪಿದ್ದಾರೆ. ಸೆಕ್ಯೂರಿಟಿ ಏಜೆನ್ಸಿಯವರು ರಜೆ ನೀಡದೇ, ನಿರಂತರವಾಗಿ ಕೆಲಸ ಮಾಡಿಸುತ್ತಿದ್ದು, ಹಾಗಾಗಿ ಮಾನಸಿಕ ಹಾಗೂ ದೈಹಿಕ ಒತ್ತಡದಿಂದ ಆತ ಸಾವನ್ನಪ್ಪಿದ್ದಾನೆ ಎಂದು ಹಲವು ಸಂಘಟನೆಗಳು ಇಂದು ಮೈಸೂರು ವಿಶ್ವವಿದ್ಯಾಲಯದ ಮುಂದೆ ಪ್ರತಿಭಟನೆ ನಡೆಸಿದವು.

ಮೈಸೂರಿನ ಜಯನಗರದ ಸಂಜಯ್ ಕುಮಾರ್ (43) ಮೃತಪಟ್ಟ ಸೆಕ್ಯೂರಿಟಿ ಗಾರ್ಡ್. ಇವರು ಓರಿಯೆಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಆವರಣದ ಮೆಟ್ಟಿಲ ಮೇಲೆ ಮೃತಪಟ್ಟಿದ್ದಾರೆ. ಸಂಜಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೋ ಇಲ್ಲ ಸಹಜ ಸಾವೋ ಎಂಬುದು ಇನ್ನು ಸ್ಪಷ್ಟವಾಗಿಲ್ಲ.



ಸೆಕ್ಯೂರಿಟಿ ಗಾರ್ಡ್ ಸಂಜಯ್‌ಕುಮಾರ್ ಸಾವಿಗೆ ಕಾರಣರಾದ ಸೆಕ್ಯೂರಿಟಿ ಏಜೆನ್ಸಿ ವಿರುದ್ಧ ಕ್ರಮ ಕೈಗೊಂಡು, ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿ ಎಐಟಿಯುಸಿ ನೇತೃತ್ವದಲ್ಲಿ ಹಲವು ಸಂಘಟನೆಗಳು ಬುಧವಾರ ಕ್ರಾಫರ್ಡ್ ಭವನದ ಮುಂದೆ ಪ್ರತಿಭಟನೆ ನಡೆಸಿದವು.

ಆದರೆ ಆತನ ಸಾವಿಗೆ ಸೆಕ್ಯೂರಿಟಿ ಏಜೆನ್ಸಿ ಹಾಗೂ ಆ ಏಜೆನ್ಸಿಗೆ ಗುತ್ತಿಗೆ ನೀಡಿರುವ ಮೈಸೂರು ವಿಶ್ವವಿದ್ಯಾಲಯ ಕಾರಣ ಎಂದು ಕ್ರಾಫರ್ಡ್ ಭವನದ ಮುಂದೆ ಎಐಟಿಯುಸಿ ಸೇರಿದಂತೆ ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮೈಸೂರು ವಿಶ್ವ ವಿದ್ಯಾನಿಲಯ ವ್ಯಾಪ್ತಿಯ ಹಲವು ಸ್ಥಳಗಳಲ್ಲಿ ಇವರು ಕೆಲಸ ಮಾಡುತ್ತಿದ್ದರು. ಆದರೆ ಕಳೆದ 11 ತಿಂಗಳಿಂದ ರಜೆ ನೀಡದೆ ಒಂದು ಶಿಫ್ಟ್‌ನಲ್ಲಿ 12 ಗಂಟೆಗಳ ಕಾಲ ಕೆಲಸ ಮಾಡಿಸುತ್ತಿದ್ದರು. ಹಾಗಾಗಿ ಇವರು ದೈಹಿಕ ಹಾಗೂ ಮಾನಸಿಕವಾಗಿ ಬಳಲಿದ್ದರು ಎಂದು ಪ್ರತಿಭಟನಾಕಾರರು ಆರೋಪಿಸಿದರು.

ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಹೊರ ಹೋಗುವ ದ್ವಾರದ ಬಳಿ ಕಾವಲಿದ್ದ ಇವರಿಗೆ ಕೂರಲು ಚೇರ್ ಕೂಡ ನೀಡದೆ ಕಿರುಕುಳ ನೀಡಲಾಗಿತ್ತು. ಇವರು 12 ಗಂಟೆಗಳ ಕಾಲ ನಿಂತೇ ಕೆಲಸ ಮಾಡಬೇಕಾದ ಪರಿಸ್ಥಿತಿ ಇತ್ತು. ಹೀಗೆ ಸೆಕ್ಯೂರಿಟಿ ಏಜೆನ್ಸಿಯವರು ಕಿರುಕುಳ ನೀಡುತ್ತಿದ್ದದ್ದೇ ಇವರ ಸಾವಿಗೆ ಕಾರಣ ಎಂದು ಆಪಾದಿಸಿದರು.

ಈ ವೇಳೆ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಲು ಬಂದ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಎಂ.ಕೆ.ಸವಿತಾ ಅವರಿಗೆ ಸಂಜಯ್ ಸಾವಿನ ಕಾರಣವನ್ನು ವಿವರಿಸಿದರು. ಅಲ್ಲದೆ ಸೂಕ್ತ ಪರಿಹಾರ ನೀಡುವಂತೆಯೂ ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸವಿತಾ ಅವರು, ಮೊದಲಿದ್ದ ಸೆಕ್ಯೂರಿಟಿ ಏಜೆನ್ಸಿಯವರ ಕಾರ್ಯ ವೈಖರಿ ಸರಿ ಇಲ್ಲವೆಂದು ಅವರ ಗುತ್ತಿಗೆ ರದ್ದು ಮಾಡಿ ಹೊಸ ಏಜೆನ್ಸಿಗೆ ಗುತ್ತಿಗೆ ನೀಡಿದ್ದೇವೆ. ಹೊಸ ಏಜೆನ್ಸಿಯವರು ಸಂಜಯ್‌ಕುಮಾರ್‌ನನ್ನು ಕಳೆದ 7 ದಿನಗಳ ಹಿಂದೆ ನೇಮಕಾತಿ ಮಾಡಿ ಕೊಂಡಿದ್ದರು. ಇಂತಹ ಏನೇ ಸಮಸ್ಯೆ ಇದ್ದರೂ ನಮ್ಮ ಗಮನಕ್ಕೆ ತಂದರೆ ಅದನ್ನು ಪರಿಹಾರ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಈ ವಿಚಾರವಾಗಿ ಕಾರ್ಮಿಕ ಇಲಾಖೆಯವರು ನಿಮ್ಮ ಸಮಸ್ಯೆ ಇತ್ಯರ್ಥ ಮಾಡುತ್ತಾರೆ. ಹಾಗಾಗಿ ನೀವು ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಅವರಲ್ಲಿ ನಿಮ್ಮ ಅಹವಾಲು ಸಲ್ಲಿಸಿ ಎಂದು ಸಲಹೆ ನೀಡಿದ ಸವಿತಾ, ಇನ್ನು ಮುಂದೆ ಇಂತಹ ಏನೇ ಸಮಸ್ಯೆ ಇದ್ದರೂ ನಮ್ಮ ಗಮನಕ್ಕೆ ತನ್ನಿ ಎಂದು ಹೇಳಿದರು.

ಸಂಜಯ್‌ಕುಮಾರ್ ಸಾವಿನ ಸಂಬಂಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮರಣೋತ್ತರ ಪರೀಕ್ಷೆ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಕುಟುಂಬಸ್ಥರಿಗೆ ಭರವಸೆ ನೀಡಿದ್ದಾರೆ.

ಎಐಟಿಯುಸಿ ಅಧ್ಯಕ್ಷ ಚಂದ್ರಶೇಖರ್, ಸೆಕ್ಯೂರಿಟಿ ಗಾರ್ಡ್ ಸಂಘದ ಅಧ್ಯಕ್ಷ ನಾರಾಯಣ, ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ಅಧ್ಯಕ್ಷ ನವೀನ, ಮುಖಂಡರಾದ ರವಿಕುಮಾರ್, ಶಂಕರ್ ಕೋಟೆ ಹಾಗೂ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಸ್ ಜಾತರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬೈಸನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ದಿ ಗರ್ಲ್‌ಫ್ರೆಂಡ್ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ಕೋಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಪಂಜ ಕುಸ್ತಿಯಲ್ಲಿ ಚೈತ್ರಾಗೆ ಕಂಚಿನ ಪದಕ



ಮೈಸೂರು, ನ. 12– ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಪೈಥಿಯನ್ ಗೇಮ್ಸ್‌ನಲ್ಲಿ ಮೈಸೂರಿನ ಚೈತ್ರ ಅವರು ಪಂಜ ಕುಸ್ತಿಯ 90 ಕೆಜಿ ವರ್ಗದಲ್ಲಿ ಕಂಚಿನ ಪದಕ ಗಳಿಸಿದ್ದಾರೆ. ಚೈತ್ರ ಅವರು ನ.26 ರಂದು ಥಾಯ್ಲೆಂಡ್‌ನ ಪಟಾಯಾನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ ಭಾರತದ ತಂಡಕ್ಕೆ ಆಯ್ಕೆಗೊಂಡಿದ್ದಾರೆ. ಇವರು ಮೈಸೂರು ಪೊಲೀಸ್ ಲೇಔಟ್ ಹರಿಟೇಜ್ ಫಿಟ್‌ನೆಸ್‌ನಲ್ಲಿ ಕೆ.ವಿಶ್ವನಾಥ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಅವಿರತ ಪಿಯು ಕಾಲೇಜಲ್ಲಿ ಪೋಷಕರಿಗೆ ಪಾದಪೂಜೆ!

ಮೈಸೂರು, ನ.12– ನಗರದ ಅವಿರತ ಮೈಸೂರು ಸೆಂಟ್ರಲ್ ಪಿಯು ಕಾಲೇಜಿನಲ್ಲಿ ನಡೆದ ಪಾದಪೂಜೆ ಕಾರ್ಯಕ್ರಮವು ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಈ ವಿಶಿಷ್ಟ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ಪೋಷಕರ ಪಾದಗಳನ್ನು ತೊಳೆದು ಅವರ ಆಶೀರ್ವಾದ ಪಡೆಯುವ ಮೂಲಕ ಪೋಷಕರಿಗೆ ಗೌರವ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರಿ ರಶ್ಮಿ ಹಾಗೂ ಮಾಜಿ ಕಾರ್ಪೊರೇಟರ್ ಎಂ.ಶಿವಣ್ಣ ಮುಖ್ಯ ಅತಿಥಿಗಳಾಗಿದ್ದರು.


ಮೈಸೂರಿನ ಅವಿರತ ಮೈಸೂರು ಸೆಂಟ್ರಲ್ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳು ಪೋಷಕರಿಗೆ ಪಾದಪೂಜೆ ಮಾಡಿದರು.

ಮುಖ್ಯ ಅತಿಥಿ ಬಿಕೆ ರಶ್ಮಿ ಮಾತನಾಡಿ, ಪೋಷಕರು ನಮ್ಮ ಜೀವನದ ಮೊದಲ ಗುರುಗಳು. ಅವರ ತ್ಯಾಗ ಮತ್ತು ಪ್ರೀತಿ ನಮ್ಮ ಬದುಕಿನ ಮೂಲ. ಅವರ ಆಶೀರ್ವಾದದಿಂದಲೇ ವಿದ್ಯಾರ್ಥಿಗಳು ಯಶಸ್ಸಿನ ಶಿಖರ ತಲುಪುತ್ತಾರೆ. ನಮ್ಮ ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಏಕಾಗ್ರತೆ, ಶಿಸ್ತು ಮತ್ತು ಜೀವನದ ಮೌಲ್ಯಗಳು ವೃದ್ಧಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಮಾಜಿ ಕಾರ್ಪೊರೇಟರ್ ಎಂ.ಶಿವಣ್ಣ ಮಾತನಾಡಿ, ಇಂದಿನ ಪೀಳಿಗೆಗೆ ಪೋಷಕರ ಪ್ರತಿ ಕೃತಜ್ಞತೆ ಹಾಗೂ ಪ್ರೀತಿ ಅತ್ಯಗತ್ಯ. ಈ ರೀತಿಯ ಕಾರ್ಯಕ್ರಮಗಳು ಯುವಕರಲ್ಲಿ ಮೌಲ್ಯಾಧಾರಿತ ಚಿಂತನೆ ಬೆಳೆಯುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷ ಎಂ.ಪಿ.ಹರೀಶ್, ಪ್ರಾಚಾರ್ಯ ಡಾ.ಪ್ರದೀಪ್ ಡಿ.ಕುನ್ಹಾ, ಉಪ ಪ್ರಾಚಾರ್ಯ ಶಶಿಕುಮಾರ್ ಹಾಗೂ ಬೋಧಕವೃಂದ ಉಪಸ್ಥಿತರಿದ್ದರು. ಮೇಘನಾ ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರೆ, ಡಾ.ಪ್ರದೀಪ್ ಡಿ.ಕುನ್ಹಾ ಅತಿಥಿಗಳನ್ನು ಪರಿಚಯಿಸಿದರು. ಸಹನ ವಂದಿಸಿದರೆ, ತೇಜಸ್ವಿನಿ ಕೆ.ಎನ್. ನಿರೂಪಿಸಿದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಸೇವಾ ಸೌಲಭ್ಯ ಕುರಿತು ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮ

ಮೈಸೂರು, ನ.12– ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿರುವ ಸೇವಾ ಸೌಲಭ್ಯಗಳ ಕುರಿತು ನ.13 (ಗುರುವಾರ)ರ ಬೆಳಗ್ಗೆ 11.30ರಿಂದ 12.30 ರವರೆಗೆ ಮೈಸೂರು ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್ ಅವರ ಜೊತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಮೈಸೂರಿನ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಲಾಗಿದ್ದು, ಸಾರ್ವಜನಿಕರು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿರುವ ಸೇವಾ ಸೌಲಭ್ಯಗಳ ಕುರಿತು ಯಾವುದೇ ಪ್ರಶ್ನೆಗಳು ಇದ್ದಲ್ಲಿ ಅಥವಾ ಸಲಹೆಗಳು ಬೇಕಾದ್ದಲ್ಲಿ ಕರೆಮಾಡಿ ನೇರವಾಗಿ ಮಾತನಾಡಬಹುದು.

ದೂರವಾಣಿ ಸಂಖ್ಯೆ: 8296725912, 0821–2546563 ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕವೂ ವಿಶ್ವದ ಯಾವುದೇ ಮೂಲೆಯಲ್ಲಾದರು ಆಲಿಸಬಹುದು.

ಶ್ರೀ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಭಕ್ತಿ ಗೀತೆಗಳ ಗಾಯನ


ಶ್ರೀ ಸಿದ್ದಪ್ಪಾಜಿ ದೇವಸ್ಥಾನದಲ್ಲಿ 15ನೇ ವರ್ಷದ ಕುಂಭಾಭಿಷೇಕದ ಪ್ರಯುಕ್ತ ಭಕ್ತಿ ಗೀತೆಗಳ ಗಾಯನ ನಡೆಸಲಾಯಿತು.

ಮೈಸೂರು, ನ.12– ಮೈಸೂರಿನ ಪೈಲ್ವಾನ್ ಬಸವಯ್ಯನವರ ವೃತ್ತ ಕನ್ನೇಗೌಡನ ಕೊಪ್ಪಲಿನಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದಲ್ಲಿ 15ನೇ ವರ್ಷದ ಕುಂಭಾಭಿಷೇಕದ ಪ್ರಯುಕ್ತ ಮೈಸೂರಿನ ಗಾಯನ ತಂಡದಿಂದ ನವಗಾನ ಮಿಲನ ಟ್ರಸ್ಟ್‌ನ ಸದಸ್ಯರು ಭಕ್ತಿ ಗೀತೆಗಳ ಗಾಯನ ಸುಧೆ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ತಂಡದ ಕಾಳಿಹುಂಡಿ ಶಿವಕುಮಾರ್, ಕುದೇರು ಎಸ್.ಪರಶಿವಮೂರ್ತಿ, ಯಡಿಯೂರು ಮಹದೇವ್, ಗುಂಬಳ್ಳಿ ನಂದೀಶ್, ಟಿ.ಪಿ.ಗೌರಿಶಂಕರ್ ನೆರೆದಿದ್ದ ಭಕ್ತಾದಿಗಳ ಮುಂದೆ ಭಕ್ತಿ ಪ್ರಧಾನ ಗೀತೆಗಳನ್ನು ಸಾದರಪಡಿಸಿದರು. ಈ ಒಂದು ಕಾರ್ಯಕ್ರಮದ ಅಂತಿಮದಲ್ಲಿ ಇವರನ್ನು ಸನ್ಮಾನ ಮಾಡಿದರು.

ಈ ಸಂದರ್ಭದಲ್ಲಿ ಸಿದ್ದಪ್ಪಾಜಿ ಸೇವಾ ಸಮಿತಿಯ ಅಧ್ಯಕ್ಷ ಬೋರಪ್ಪ, ಉಪಾಧ್ಯಕ್ಷ ಕುಮಾರ್, ಕಾರ್ಯದರ್ಶಿ ಬಾಬು, ಖಜಾಂಚಿ ದೀಪು, ಸಹ ಕಾರ್ಯದರ್ಶಿ ಮಹದೇವ್, ಕನ್ನೆಗೌಡನ ಕೊಪ್ಪಲಿನ ಗ್ರಾಮಸ್ಥರು ಹಾಜರಿದ್ದರು.


ಮಾಜಿ ಸಂಸದ ಪ್ರತಾಪ್ ಸಿಂಹ ಎಂಡಿಎ ಆಯುಕ್ತ ರಕ್ಷಿತ್ ಭೇಟಿ



ಮೈಸೂರು, ನ. 12– ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂಬರ್ 21ರಲ್ಲಿನ ಮಾನಸ ನಗರ ಕುದುರೆಮಾಳ ನಿವಾಸಿಗಳಿಗೆ ಅನುಮೋದನೆಗೊಂಡಿದ್ದ ಯೂತ್ ಹಾಸ್ಟೆಲ್ ಸಮೀಪದ ಜಾಗದ ವಿಚಾರವಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ಬಿಜೆಪಿ ಮುಖಂಡ ಬೊ.ಉಮೇಶ್, ಆರ್ ಪರಮೇಶ ಗೌಡ, ದೇವರಾಜ್, ನಂಜಪ್ಪ, ಶ್ರವಣ್ ಮಾಲಿ, ಅಶೋಕ್, ಪ್ರಮೋದ್ ಹಾಗೂ ಮಾನಸ, ನಗರ ಕುದುರೆಮಾಳ ಮುಖಂಡರಾದ ಮಹದೇವ್, ಮಹೇಂದ್ರ, ಕೃಷ್ಣ, ರಾಮು, ಗೌತಮ್ ಹಾಗೂ ಮುಖಂಡರು ಉಪಸ್ಥಿತರಿದ್ದರು.

ಉದ್ಯೋಗಿಯೋ ಇಲ್ಲವೇ ಉದ್ಯಮಿಯೋ- ಆಯ್ಕೆ ನಿಮ್ಮದು

ಮೈಸೂರು, ನ. 12– ಉದ್ಯಮಿಯಾಗಿ ಉತ್ತಮ ಜೀವನವನ್ನು ರೂಪಿಸಿಕೊಳ್ಳುವಂತಹ ಶಕ್ತಿ ವಿದ್ಯಾರ್ಥಿನಿಯರಿಗೆ ಸಾಧ್ಯ ಎಂದು ಮೈಸೂರಿನ ಅರ್ಥಮ್ ಬ್ರೋಕಿಂಗ್ ಮತ್ತು ಕನ್ಸಲ್ಟಿಂಗ್‌ನ ನಿರ್ದೇಶಕ ಎಸ್ ಎಸ್ ಮೂರ್ತಿ ತಿಳಿಸಿದರು.



ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಉದ್ಯಮಶೀಲತಾ ದಿನಾಚರಣೆಯ ಅಂಗವಾಗಿ ಉದ್ಯಮಶೀಲತಾ ಅಭಿವೃದ್ಧಿ ಕೋಶದ ವತಿಯಿಂದ ಮಹಿಳಾ ಉದ್ಯಮಿಗಳಿಗಾಗಿ ಸರ್ಕಾರಿ ಯೋಜನೆಗಳು ಎನ್ನುವಂತಹ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಎಸ್ ಎಸ್ ಮೂರ್ತಿ ಮಾತನಾಡಿ, ಉದ್ಯಮಿ ಮತ್ತು ಉದ್ಯೋಗಿ ನಡುವಿನ ಗಮನಾರ್ಹ ವ್ಯತ್ಯಾಸಗಳನ್ನು ಕುರಿತಂತೆ ವಿವರಿಸಿದರು. ಜೊತೆಗೆ ವಿವಿಧ ಸರ್ಕಾರಿ ಯೋಜನೆಗಳಾದ ಕಲ್ಯಾಣಿ ಯೋಜನೆ,ಅಟಲ್ ನಾವಿನ್ಯತೆಯ ಯೋಜನೆ, ಒಎನ್‌ಡಿಸಿ, ಸಿಜಿಟಿಎಂಎಸ್‌ಇ, ಇಂತಹ ಯೋಜನೆಗಳಿಂದ ಮಹಿಳಾ ಉದ್ಯಮಿಗಳಿಗೆ ನೆರವು ಸಿಗಲಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ವಿವಿಧ ಹಣಕಾಸು ಸಂಸ್ಥೆಗಳು ಮತ್ತು ಪ್ರಮಾಣೀಕರಣಗಳ ಬಗ್ಗೆ ವಿಸ್ತೃತವಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ವಿದ್ಯಾರ್ಥಿಗಳಿಗೆ ಕ್ರಿಯಾ ಚಟುವಟಿಕೆಗಳನ್ನು ನಡೆಸುವ ಮೂಲಕ ಉದ್ಯಮಿಯ ಅಗತ್ಯ ಕೌಶಲ್ಯ ಮತ್ತು ಗುಣಗಳ ಬಗ್ಗೆ ಅರಿವು ಮೂಡಿಸಿದರು. ವೇದಿಕೆಯಲ್ಲಿ ಪ್ರಾಚಾರ್ಯರಾದ ಡಾ. ರೇಚಣ್ಣ, ಉದ್ಯಮಶೀಲತಾ ಅಭಿವೃದ್ಧಿ ಕೋಶದ ಸಂಚಾಲಕಿ ಡಾ.ಶಿಲ್ಪಾ ಎಸ್ ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು.

ಶ್ರೀಮತಿ ವಿದ್ಯಾ ಮತ್ತು ವೃಂದದವರು ಪ್ರಾರ್ಥಿಸಿದರು. ಕು.ಕೀರ್ತನ, ದ್ವಿತೀಯ ಎಂ.ಕಾಂ ಗಣ್ಯರನ್ನು ಸ್ವಾಗತಿಸಿದರು. ಕು.ಅಮೃತ ಎನ್ ದ್ವಿತೀಯ ಎಂ.ಕಾಂ ವಿದ್ಯಾರ್ಥಿನಿ ವಂದಿಸಿದರು. ಕು.ಕೀರ್ತನ ಎಸ್ ಅರಸ್ ದ್ವಿತೀಯ ಎಂ.ಕಾಂ ವಿದ್ಯಾರ್ಥಿನಿ ಕಾರ್ಯಕ್ರಮ ನಿರೂಪಿಸಿದರು.

ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಉದ್ಯೋಗ ಮೇಳ

ಮೈಸೂರು, ನ. 12– ಮೈಸೂರಿನ ಹೆಬ್ಬಾಳ ವರ್ತುಲ ರಸ್ತೆಯಲ್ಲಿರುವ ಶೇಷಾದ್ರಿಪುರಂ ಪದವಿ ಕಾಲೇಜು ಮತ್ತು ಸಮರ್ಥನಂ ಅಂಗವಿಕಲರ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿತ್ತು.

ಮೇಳದಲ್ಲಿ ಮಾತನಾಡಿದ ಸಮರ್ಥನಂ ಅಂಗವಿಕಲರ ಸಂಸ್ಥೆಯ ಕೇಂದ್ರೀಯ ಮುಖ್ಯಸ್ಥ ಎಸ್. ಸುಭಾಷ್ ಚಂದ್ರ, ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ಹುಡುಕುವ ಬದಲು ಸಿಗುವ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಅನುಭವ ಗಳಿಸುವುದೇ ಮುಂದಿನ ಯಶಸ್ಸಿಗೆ ದಾರಿ ಎಂದು ಸಲಹೆ ನೀಡಿದರು. ಸ್ಪರ್ಧಾತ್ಮಕ ಯುಗದಲ್ಲಿ ಕಾಲಹರಣ ಮಾಡದೇ, ವೇಗಕ್ಕೆ ತಕ್ಕಂತೆ ನಿಮ್ಮಲ್ಲೂ ಹೊಂದಾಣಿಕೆ ಮಾಡಿಕೊಂಡು ಬೆಳೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಉದ್ಯೋಗಾಧಿಕಾರಿ ವೀರಭದ್ರ ಪಟೇಲ್, ಕನ್ನಡ ವಿಭಾಗದ ಮುಖ್ಯಸ್ಥೆ ಸಿ.ಪಿ. ಲಾವಣ್ಯ, ಆರ್. ಸುಬ್ರಮಣಿ, ಸ್ಪರ್ಶ, ಲತಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಮೇಳದಲ್ಲಿ 24 ಕಂಪನಿಗಳು ಭಾಗವಹಿಸಿದ್ದವು. 300ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ನೋಂದಾಯಿಸಿಕೊಂಡು ವಿವಿಧ ಹುದ್ದೆಗಳಿಗಾಗಿ ಸಂದರ್ಶನದಲ್ಲಿ ಪಾಲ್ಗೊಂಡಿದ್ದರು.


ಜೆಡಿಎಸ್ ಕೋರ್ ಕಮಿಟಿಗೆ ಸಿ.ಎಸ್. ಪುಟ್ಟರಾಜು ನೇಮಕ; ಅರಕಲಗೂಡು ಶಾಸಕ ಎ. ಮಂಜು ಸಂಚಾಲಕ

ಡಿ.ಸಿ. ತಮ್ಮಣ್ಣ, ಹೆಚ್.ಡಿ. ರೇವಣ್ಣ, ಹೆಚ್.ಕೆ. ಕುಮಾರಸ್ವಾಮಿ ಇತರರೂ ಸದಸ್ಯರು

ಮಂಡ್ಯ ನ 12– ಜೆಡಿಎಸ್ ಕೋರ್ ಕಮಿಟಿಯ ಸದಸ್ಯರನ್ನಾಗಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರನ್ನು ನೇಮಕ ಮಾಡಲಾಗಿದೆ.

ಮಾಜಿ ಡೆಪ್ಯುಟಿ ಸ್ಪೀಕರ್ ಎಂ. ಕೃಷ್ಣಾರೆಡ್ಡಿ ಅಧ್ಯಕ್ಷತೆಯ ಈ ಕೋರ್ ಕಮಿಟಿಯ ಸಂಚಾಲಕರನ್ನಾಗಿ ಶಾಸಕ ಅರಕಲಗೂಡು ಎ. ಮಂಜು ಅವರನ್ನು ನೇಮಿಸಲಾಗಿದೆ. ಉಳಿದಂತೆ ಮಾಜಿ ಸಚಿವರಾದ ಡಿ.ಸಿ. ತಮ್ಮಣ್ಣ, ಹೆಚ್.ಡಿ. ರೇವಣ್ಣ, ಹನುಮಂತಪ್ಪ ವೈ ಆಲ್ಕೋಡ್, ಹೆಚ್.ಕೆ. ಕುಮಾರಸ್ವಾಮಿ, ಶಾಸಕರಾದ ಶ್ರೀಮತಿ ಕರೆವ್ವಾ ಜಿ. ನಾಯಕ್, ಕೆ. ನೇಮಿರಾಜ್ ನಾಯಕ್, ಸಮೃದ್ಧಿ ಮಂಜುನಾಥ್, ಶರಣ ಗೌಡ ಕಂದಕೂರ, ವಿಧಾನಪರಿಷತ್ ಸದಸ್ಯ ಗೋವಿಂದ ರಾಜು, ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ್ ದೊರೆ, ಹೆಚ್.ಎಸ್. ಶಿವಶಂಕರ್, ಕೆ.ಎಂ. ತಿಮ್ಮರಾಯಪ್ಪ, ಎ. ಮಂಜುನಾಥ್, ದೊಡ್ಡಪ್ಪಗೌಡ ಎಸ್. ಪಾಟೀಲ್ ನರಿಬೋಳ್,


ಪುಟ್ಟರಾಜು


ಎ. ಮಂಜು

ಕೆ.ಜಿ. ಪ್ರಸನ್ನಕುಮಾರ್, ಸಂಸದ ಎಂ. ಮಲ್ಲೇಶ್ ಬಾಬು, ಮುಖಂಡ ಸಿ.ವಿ. ಚಂದ್ರಶೇಖರ್ ಅವನ್ನು ನೇಮಕ ಮಾಡಲಾಗಿದೆ.

ಈ ಸಮಿತಿಯು ಎಲ್ಲಾ ಜಿಲ್ಲಾ ಮತ್ತು ತಾಲೂಕುಗಳಲ್ಲಿ ಪ್ರವಾಸ ಕೈಗೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿದೆ. ಅಲ್ಲದೇ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವತಿಯಿಂದ ಐದು ನಗರಪಾಲಿಕೆಗಳಿಗೆ ನಡೆಯಲಿರುವ ಚುನಾವಣೆಗೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಿದೆ.

ಮುಂದಿನ ವರ್ಷ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲಿದ್ದು, ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಸ್ಥೆಗಳು, ಎಪಿಎಂಸಿ ಗಳಿಗೆ ನಡೆಯುವ ಚುನಾವಣೆಗಳಿಗೆ ಸಂಭ ವೀಯ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ರಾಜ್ಯ ಕಚೇರಿಗೆ ಒಪ್ಪಿಸಲಿದೆ.

ಅಲ್ಲದೇ, ಎನ್‌ಡಿಎ ಮೈತ್ರಿ ಕೂಟದ ಸಮನ್ವಯತೆ ಹಾಗೂ ಹೊಂದಾಣಿಕೆ ಸಂಬಂಧ ರೂಪುರೇಷೆಗಳನ್ನು ನಿರ್ಧರಿಸಲಿದೆ. ಇದರ ಜೊತೆಗೆ ಮಹತ್ವದ ವಿಷಯಗಳ ವಿಚಾರವಾಗಿ ತೆಗೆದುಕೊಳ್ಳಬೇಕಾದ ನಿರ್ಣಗಳ ಬಗ್ಗೆ ತೀರ್ಮಾನಿಸುವುದು ಪ್ರಮುಖ ನೇಮಕಾತಿ ಗಳ ಸಂಬಂಧ ಮುಖಂಡರ ಹೆಸರನ್ನು ಶಿಫಾರಸು ಮಾಡಲಿದೆ. ಅನಿವಾರ್ಯವಾದಲ್ಲಿ ಸಮಿತಿಗೆ ಪ್ರಮುಖ ಮುಖಂಡ ರನ್ನು ಸೇರ್ಪಡೆ ಮಾಡಿಕೊಳ್ಳಲಿದೆ.

ಆಂಬುಲೆನ್ಸ್‌ಗಳ ನಿರ್ವಹಣೆಗೆ ಎನ್‌ಜಿ–ಇಆರ್‌ಎಸ್‌ಎಸ್ ತಂತ್ರಾಂಶ ಬಳಸಿ

ಮೈಸೂರು, ನ.12(ಎಸ್‌ಪಿಎನ್)– ರಾಜ್ಯದಲ್ಲಿ ಸುಮಾರು 1270 ಆಂಬುಲೆನ್ಸ್‌ಗಳ ನಿಗಾ, ತುರ್ತು ಪ್ರಕರಣಗಳಲ್ಲಿ ರೋಗಿಗಳನ್ನು ಸಾಗಿಸುವ ಕುರಿತು ಹಾಗೂ ಆಸ್ಪತ್ರೆಯಿಂದ ಉನ್ನತ ದರ್ಜೆಯ ಆಸ್ಪತ್ರೆಗೆ ರೋಗಿಗಳನ್ನು ರವಾನಿಸಲು ಎನ್‌ಜಿ–ಇಆರ್‌ಎಸ್‌ಎಸ್ 112 ತಂತ್ರಾಂಶವನ್ನು ಅಳವಡಿಸಿಕೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ಪವಿತ್ರ ಆದೇಶಿಸಿದ್ದಾರೆ. ಆಂಬುಲೆನ್ಸ್ ನಿಗಾವಣೆ ಮಾಡಲು ಅವಶ್ಯಕತೆವಿರುವ ಮೊಬೈಲ್ ಡೇಟಾ ಟರ್ಮಿನಲ್ ಗಳನ್ನು ಪ್ರತಿ ಉಪಕರಣಕ್ಕೆ ಅಂದಾಜು ವೆಚ್ಚಕ್ಕೆ 35,000ಗಳತೆ ಒಟ್ಟು ರೂ.4,44,50,000 ಗಳ ಅನುದಾನವನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿಯ 2025–26ನೇ ಸಾಲಿನ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನ ಭರಿಸುವಂತೆ ಆದೇಶಿಸಿದ್ದಾರೆ.

ನ.14ರಿಂದ ಮೈಸೂರು ಜಿಲ್ಲೆಯಲ್ಲಿ ಸಹಕಾರ ಸಪ್ತಾಹ ಆಚರಣೆ

ನಾನಾ ವಿಷಯದಡಿ ಜಿಲ್ಲಾದ್ಯಂತ ಅರ್ಥಪೂರ್ಣ ಕಾರ್ಯಕ್ರಮಗಳ ಆಯೋಜನೆ

ಮೈಸೂರು, 12(ಎಂಕೆ)– ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ 'ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು' ಧ್ಯೇಯವಾಕ್ಯದೊಂದಿಗೆ ನ.14 ರಿಂದ 20ರವರೆಗೆ ಜಿಲ್ಲೆಯ ವಿವಿಧೆಡೆ '72ನೇ ಅಖಿಲ ಭಾರತ ಸಹಕಾರ ಸಪ್ತಾಹ–2025' ಆಚರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಉಪಾಧ್ಯಕ್ಷ ಬಿ.ಎನ್. ಸದಾನಂದ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ ಮಾತನಾಡಿದರು. ಮೈಮುಲ್ ಅಧ್ಯಕ್ಷ ಈರೇಗೌಡ, ಸಹಕಾರಿಗಳಾದ ಬಿ.ವಿ.ಗುರುರಾಜ್, ಸಿದ್ದೇಗೌಡ, ಉಮಾಶಂಕರ್ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನ.14 ರಂದು ಬೆಳಗ್ಗೆ 10 ಗಂಟೆಗೆ ಹೆಚ್.ಡಿ.ಕೋಟೆಯ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ 'ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು' ವಿಷಯದಡಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಲಿದ್ದಾರೆ ಎಂದರು.

ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ: ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ ವಿಷಯದಡಿ ನ.15ರಂದು ಬೆಳಗ್ಗೆ 10 ಗಂಟೆಗೆ ನಂಜನಗೂಡು ಖಾಸಗಿ ಬಸ್‌ನಿಲ್ದಾಣದ ಹತ್ತಿರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನ ಹಾಗೂ 'ಸಹಕಾರ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿ ಬಲವರ್ಧನೆ' ವಿಷಯದಡಿ ನ.16ರಂದು ಬೆಳಗ್ಗೆ 10 ಗಂಟೆಗೆ ಟಿ.ನರಸೀಪುರ ಎಪಿಎಂಸಿ ಆವರಣದ ಮೈಮುಲ್ ಉಪಕಚೇರಿ ಸಭಾಂಗಣದಲ್ಲಿ ಸಹಕಾರ ಸಪ್ತಾಹ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಹಾಗೆಯೇ ನ.17ರಂದು ಬೆಳಗ್ಗೆ 10 ಗಂಟೆಗೆ ಕೆ.ಆರ್.ನಗರದ ಅಗ್ನಿಶಾಮಕ ಠಾಣೆ ಮುಂಭಾಗದ ಎಸ್.ಆರ್.ಎಂ.ಕನ್ವೆನ್ಷನ್ ಹಾಲ್, ನ.18ರಂದು ಬೆಳಗ್ಗೆ 10 ಗಂಟೆಗೆ ಪಿರಿಯಾಪಟ್ಟಣ ತಾಲೂಕು ಕಿತ್ತೂರಿನ ಹೊಸಟ್ಟಿ ಸಮುದಾಯ ಭವನ, ನ.19ರಂದು ಬೆಳಗ್ಗೆ 10 ಗಂಟೆಗೆ ಹುಣಸೂರಿನ ಶ್ರೀ ಮುನೇಶ್ವರ ಕಾವಲ್ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.

ನ.20ರಂದು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಕಾರ್ಯಕ್ರಮನ್ನು ಆಯಾ ಸ್ಥಳಿಯ ಶಾಸಕರು ಉದ್ಘಾಟಿಸಲಿದ್ದಾರೆ. ಈ ವೇಳೆ ಸಹಕಾರ ಕ್ಷೇತ್ರದಲ್ಲಿ ಕೊಡುಗೆ ನೀಡುತ್ತಿರುವ ಉತ್ತಮ ಸಹಕಾರ ಸಂಘಗಳ ಮುಖ್ಯಸ್ಥರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಮುಲ್ ಅಧ್ಯಕ್ಷ ಈರೇಗೌಡ, ಸಹಕಾರಿಗಳಾದ ಬಿ.ವಿ. ಗುರುರಾಜ್, ಸಿದ್ದೇಗೌಡ, ಉಮಾಶಂಕರ್ ಉಪಸ್ಥಿತರಿದ್ದರು.

ಸಿಎಫ್‌ಟಿಆರ್‌ಐನಲ್ಲಿ ಕನ್ನಡ ರಾಜ್ಯೋತ್ಸವ

ಬಾಂಧವ್ಯ ಬೆಸೆಯುವ ಜಾನಪದ ಹಾಡುಗಳು: ಸಿಎಫ್‌ಟಿಆರ್‌ಐ ಮುಖ್ಯ ವಿಜ್ಞಾನಿ ಆರ್.ಎಸ್.ಮಾಚೆ

ಮೈಸೂರು, ನ.12(ವಿವಿಹೆಚ್)– ಜನರ ಗಟ್ಟಿ ದನಿ, ಹಳ್ಳಿ ಜನರ ಮನ, ರೈತರ ಶ್ರಮ ಮತ್ತು ಪ್ರಕೃತಿಯೊಂದಿಗೆ ಮಾನವನ ನಿರಂತರ ಬಾಂಧವ್ಯ ವಿರುವುದು ನಮ್ಮ ಜನಪದ ಹಾಡುಗಳಲ್ಲಿ ಮಾತ್ರ ಎಂದು ಸಿಎಫ್‌ಟಿಆರ್‌ಐ ಮುಖ್ಯವಿಜ್ಞಾನಿ ಆರ್.ಎಸ್.ಮಾಚೆ ತಿಳಿಸಿದರು.

ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಮತ್ತು ಕನ್ನಡ ಸಹೃದಯ ಬಳಗದ ವತಿಯಿಂದ ಸಿಎಸ್‌ಐಆರ್–ಸಿಎಫ್‌ಟಿಆರ್ ಐನ ಚೆಲುವಾಂಬ ಅರಮನೆ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ–2025ರ ಪ್ರಯುಕ್ತ ಬುಧವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಮತ್ತು ತಂಡದವರಿಂದ 'ಕನ್ನಡ ಗಾನ ವೈಭವ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಜನಪದ ಗೀತೆಗೆ ಎಲ್ಲವನ್ನು ಮರೆಸುವ ಶಕ್ತಿಯಿದೆ. ಜಾನಪದ ಎಂಬುದು ಮಾನವನಿಗೆ ಅಂತರ್ಗತ ವಾಗಿ ಸಂಪರ್ಕ ಹೊಂದಿರುವುದಾಗಿದೆ. ನಮ್ಮ ಮೂಲ ಸಂಸ್ಕೃತಿ, ಆಚಾರ–ವಿಚಾರ, ತತ್ವಜ್ಞಾನ–ವಿಜ್ಞಾನ ಎಲ್ಲವನ್ನು ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ ವಾಗಿದ್ದು, ಇದು ವಿಜ್ಞಾನ ಮತ್ತು ಕಲೆಯ ಸಂಯೋಜನೆಯಾಗಿದೆ ಎಂದು ಅಭಿಪ್ರಾಯಪಟ್ಟರು.



ವಿಜ್ಞಾನಿ ಆರ್.ಎಸ್ ಮಾಚೆ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕನ್ನಡ ಸಹೃಯದ ಬಳಗದ ಅಧ್ಯಕ್ಷ ಹೆಚ್.ಇ. ಕೃಷ್ಣಯ್ಯ ಮಾತನಾಡಿ,ಭಾಷೆ ಎಂಬುದು ಪ್ರತಿಯೊಬ್ಬರಿಗೂ ಹೆತ್ತ ತಾಯಿಯ ಸಮಾನ. ನಾವು ಪ್ರತಿಯೊಂದು ಭಾಷೆಯನ್ನು ಗೌರವಿಸಬೇಕು. ಜೊತೆಗೆ ನಮ್ಮ ಮೂಲ ಭಾಷೆಯನ್ನು ಪ್ರೀತಿಸಬೇಕು. ಹೆಚ್ಚಾಗಿ ಬಳಸಿ ಉಳಿಸಬೇಕು ಎಂದರು. ಸ್ಥಳೀಯ ರಾಜ್ಯಗಳಲ್ಲಿರುವ ಕೇಂದ್ರ ಸರ್ಕಾರ ಅಧೀನ ಸಂಸ್ಥೆಗಳು ಮತ್ತು ಅಲ್ಲಿ ಕೆಲಸ ಮಾಡುವವರು ಸ್ಥಳೀಯ ಸರ್ಕಾರದ ಭಾಷೆಯನ್ನು ಕಲಿಯುವ ಕೆಲಸ ಮಾಡಬೇಕು. ಆದರೆ ಕೆಲವು ಕುತಂತ್ರಿಗಳು, ಕುಚೇಷ್ಟೆಗಳ ಮಾಡುವವರು ಭಾಷೆ–ಭಾಷೆ ನಡುವೆ ತಂದಿಕ್ಕಿ ತಮಾಷೆ ನೋಡುವವರ ಬಗ್ಗೆ ಎಚ್ಚರ ವಹಿಸಬೇಕು ಎಂದರು.

ಅಂತರರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ ಮತ್ತು ತಂಡದವರಿಂದ ಹಲವು ಜಾನಪದ ಗೀತೆಗಳ ಗಾಯನ ನೆರೆದಿದ್ದವರನ್ನು ಮೋಡಿ ಮಾಡಿತು. ಕೊಂಡಾಡಿರೋ ಚಾಮರಾಜೇಶ್ವರನ... ಬಾರಿಸು ಕನ್ನಡ ಡಿಂಡಿಮವ.... ಕುವೆಂಪು ವಿರಚಿತ ಪಾಪವಿದೆ.. ಪುಣ್ಯವಿದೆ..., ಮರೆಯೋದುಂಟೆ ಮೈಸೂರು ದೊರೆಯ, ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು ಗೀತೆಗಳು ಸೇರಿದಂತೆ ಹತ್ತು ಹಲವು ಕನ್ನಡ ಮತ್ತು ಜಾನಪದ ಗೀತೆಗಳನ್ನು ಹಾಡಿ ರಂಜಿಸಿದರು.

ಇವರಿಗೆ ಜೊತೆಯಾಗಿ ಹಂಸಿಣಿ, ಬಿ. ಬಸವರಾಜು ಸಾಥ್ ನೀಡಿದರು. ಕೀಬೋರ್ಡ್‌ನಲ್ಲಿ ಗಣೇಶ್ ಭಟ್, ತಬಲದಲ್ಲಿ ರಘುನಾಥ್ ಹಾಗೂ ರಿದಂ ಪ್ಯಾಡ್‌ನಲ್ಲಿ ಗುರುದತ್ ಕಮಾಲ್ ಮಾಡಿದರು.

ಕನ್ನಡ ಸಹೃದಯ ಬಳಗದ ಉಪಾಧ್ಯಕ್ಷ ರಾಮ್ ಪ್ರಸಾದ್, ಕಾರ್ಯದರ್ಶಿ ಸುರೇಶ್ ಕುಮಾರ್, ಜಂಟಿ ಕಾರ್ಯದರ್ಶಿ ಹರೀಶ್ ಪ್ರಶಾಂತ್, ಖಜಾಂಚಿ ಸ್ವರೂಪ್ ರಾಣಿ, ಲಕ್ಷ್ಮೀ ನಾರಾಯಣ್ ಸಿಂಗ್, ಜ್ಯೋತಿ.ಕೆ ಇದ್ದರು.

ಜಮ್ಮು–ಕಾಶ್ಮೀರ: ನಿಷೇಧಿತ ಜಮಾತ್–ಎ–ಇಸ್ಲಾಮಿ ವಿರುದ್ಧ ತೀವ್ರ ಕಾರ್ಯಾಚರಣೆ; ಕುಲ್ಗಾಮ್‌ನ 200 ಸ್ಥಳಗಳಲ್ಲಿ ದಾಳಿ

ಶ್ರೀನಗರ: ಹರಿಯಾಣದ ಫರಿದಾಬಾದ್‌ನಲ್ಲಿ ಭಾರಿ ಪ್ರಮಾಣದ ಸ್ಫೋಟಕಗಳು ವಶ ಮತ್ತು ದೆಹಲಿಯಲ್ಲಿ ಸಂಭವಿಸಿದ ಸ್ಫೋಟದ ಬೆನ್ನಲ್ಲೇ ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಬುಧವಾರ ನಿಷೇಧಿತ ಜಮಾತ್–ಎ–ಇಸ್ಲಾಮಿ (ಜೆಇಐ) ವಿರುದ್ಧ ಪೊಲೀಸರು ಬೃಹತ್ ಕಾರ್ಯಾಚರಣೆ ಆರಂಭಿಸಿದ್ದಾರೆ. 200ಕ್ಕೂ ಹೆಚ್ಚು ಸ್ಥಳಗಳ ಮೇಲೆ ದಾಳಿ ನಡೆಸಿ, ಅಪರಾಧ ಸಾಮಗ್ರಿಗಳು ಮತ್ತು ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಂಡಿದ್ದಾರೆ.

ಕಳೆದ ನಾಲ್ಕು ದಿನಗಳಲ್ಲಿ 500ಕ್ಕೂ ಹೆಚ್ಚು ಜನರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಮತ್ತು ಅವರಲ್ಲಿ ಹಲವರನ್ನು ಬಂಧಿಸಲಾಗಿದೆ. ಜಿಲ್ಲೆಯಲ್ಲಿ ಶೋಧ ಕಾರ್ಯಾಚರಣೆಗಳನ್ನು (ಸಿಎಎಸ್‌ಒ) ಭದ್ರತಾ ಸಿಬ್ಬಂದಿ ಪ್ರಾರಂಭಿಸಿದ್ದಾರೆ. ಕುಲ್ಗಾಮ್ ಪೊಲೀಸರು ನಿಷೇಧಿತ ಜಮಾತ್–ಎ–ಇಸ್ಲಾಮಿ ವಿರುದ್ಧ ದೊಡ್ಡ ಪ್ರಮಾಣದ ಕಾರ್ಯಾಚರಣೆ ನಡೆಸಿದ್ದಾರೆ. ಕೇಂದ್ರ ಸರ್ಕಾರವು 2019ರಲ್ಲಿ ಸಂಘಟನೆ ಮೇಲೆ ನಿಷೇಧ ಹೇರಿದ ನಂತರ, ಅದರ ಅನೇಕ ಹಿರಿಯ ನಾಯಕರನ್ನು ಕಾಶ್ಮೀರದ ಒಳಗೆ ಮತ್ತು ಹೊರಗೆ ಬಂಧಿಸಿ ಜೈಲಿನಲ್ಲಿರಿಸಲಾಯಿತು.

ದಾಳಿಯ ಸಮಯದಲ್ಲಿ, ಪೊಲೀಸರು ದಾಖಲೆಗಳು ಮತ್ತು ಎಲೆಕ್ಟ್ರಾನಿಕ್ ಸಾಧನಗಳನ್ನು ವಶಕ್ಕೆ ತೆಗೆದು ಕೊಂಡಿದ್ದಾರೆ. ನಿಷೇಧಿತ ಜೆಇಐಯ ಹಲವಾರು ಸದಸ್ಯರನ್ನು ವಿಚಾರಣೆಗೆ ಒಳಪಡಿಸಲಾಯಿತು. ಭಯೋತ್ಪಾದನೆಯನ್ನು ಬೆಂಬಲಿಸುವ ಜಾಲಗಳನ್ನು ಪತ್ತೆಹಚ್ಚಲು ಮತ್ತು ತಡೆಯಲು ಬಂಧಿಸಲಾಗಿದೆ ಎಂದು ಅವರು ಹೇಳಿದರು.

ದೇಶದ ಶಾಂತಿ, ಭದ್ರತೆ ವಿಚಾರದಲ್ಲಿ ಎಲ್ಲರೂ ಒಂದಾಗಬೇಕು: ಮಂತ್ರಾಲಯ ಶ್ರೀ

ಹೊಸಪೇಟೆ (ವಿಜಯನಗರ): ದೆಹಲಿಯ ಕೆಂಪುಕೋಟೆಯ ಬಳಿ ಮಹಾಸ್ಫೋಟದಿಂದ ಶಾಂತಿ, ಆಸ್ತಿಪಾಸ್ತಿ ಹಾನಿ ಆಗಿದೆ, ಇದನ್ನು ಉಗ್ರವಾಗಿ ಖಂಡಿಸುತ್ತಿದ್ದೇನೆ. ದೇಶದ ಶಾಂತಿ, ಭದ್ರತೆ ವಿಚಾರದಲ್ಲಿ ಎಲ್ಲರೂ ಒಂದಾಗಿ ಕೇಂದ್ರ ಸರ್ಕಾರಕ್ಕೆ ಬೆಂಬಲವಾಗಿ ನಿಲ್ಲಬೇಕು ಎಂದು ಮಂತ್ರಾಲಯ ರಾಘವೇಂದ್ರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದ್ದಾರೆ.



ಸುಬುಧೇಂದ್ರ ಸ್ವಾಮೀಜಿ

ಹಂಪಿಯಲ್ಲಿ ಬುಧವಾರ ಮಾಧ್ಯಮದವರಿಗೆ ಈ ವಿಷಯ ತಿಳಿಸಿದ ಅವರು, ದೇಶದ ಎಲ್ಲ ಪ್ರಜೆಗಳು ಶಾಂತಿ ಭಂಗವಾಗುವಂತಹ ಇಂತಹ ಘಟನೆಗಳು ಸಂಭವಿಸುವ ಸೂಚನೆ ದೊರೆತಲ್ಲಿ ಸೂಕ್ತ ಭದ್ರತಾ ಇಲಾಖೆಗಳಿಗೆ ತಿಳಿಸಬೇಕು, ಜನರು ಇಂತಹ ಘಟನೆಗಳ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು.

ನಮ್ಮ ದೇಶ ಶಾಂತಿಪ್ರಿಯವಾದ ದೇಶ, ಇಲ್ಲಿ ಕ್ಷುದ್ರ ಶಕ್ತಿಗಳು, ಉಗ್ರ ಶಕ್ತಿಗಳು ಶಾಂತಿ, ನೆಮ್ಮದಿ ಕೆಡಿಸಲು ಯತ್ನಿಸುತ್ತಿವೆ. ನಮ್ಮ ದೇಶ ತಾನಾಗೀಯೆ ಹೋಗಿ, ಯುದ್ಧ, ದಬ್ಬಾಳಿಕೆ, ಉಗ್ರವಾದ ಮಾಡುವ ದೇಶವಲ್ಲ. ಯಾವುದೋ ದೇಶದ ಪ್ರೇರಣೆ ಪಡೆದು ಕೆಂಪು ಕೋಟೆಯ ಬಳಿ ಬಂದು ವಿಧ್ವಂಸಕ ಕೃತ್ಯ ಎಸಗಲಾಗಿದೆ. ನಮ್ಮ ದೇಶ ಮತ್ತು ವಿಶ್ವಸಂಸ್ಥೆ ಒಟ್ಟುಗೂಡಿ ಅಪರಾಧಿಗಳಿಗೆ ಶಿಕ್ಷೆ ನೀಡಬೇಕಾಗಿದೆ ಎಂದು ಶ್ರೀಗಳು ಹೇಳಿದರು.

ಇದಕ್ಕೆ ಮೊದಲು ಶ್ರೀಗಳು ಮಂತ್ರಾಲಯಕ್ಕೆ (ವಿದ್ಯಾಮಠ) ಮೂಲ ರಾಮ ದೇವರನ್ನು ಮರಳಿ ತಂದುಕೊಟ್ಟ ರಘನಂದನ ತೀರ್ಥರ ಮಧ್ಯಾರಾಧನೆಯಲ್ಲಿ ಪಾಲ್ಗೊಂಡರು.

ಧರ್ಮಸ್ಥಳ ಬುರುಡೆ ಕೇಸ್: ತಿಮರೋಡಿ, ಮತ್ತವರ ತಂಡಕ್ಕೆ ಹೈಕೋರ್ಟ್ ಶಾಕ್

ಬೆಂಗಳೂರು, ನ. 12– ಧರ್ಮಸ್ಥಳ ಬುರುಡೆ ಕೇಸ್ ತನಿಖೆ ವಿಚಾರವಾಗಿ ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಧರ್ಮಸ್ಥಳ ಠಾಣೆಯ ಎಫ್‌ಐಆರ್ 39/2025 ತನಿಖೆಗೆ ಅ.30ರಂದು ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿದ್ದು, ತನಿಖೆಗೆ ಅನುಮತಿ ನೀಡಿದೆ. ಹೀಗಾಗಿ ಗಿರೀಶ್ ಮಟ್ಟಣ್ಣನವರ್, ಮಹೇಶ್‌ಶೆಟ್ಟಿ ತಿಮರೋಡಿ, ಟಿ.ಜಯಂತ್ ಹಾಗೂ ವಿಠ್ಠಲಗೌಡ ಎಸ್‌ಐಟಿ ತನಿಖೆಯನ್ನ ಮತ್ತೆ ಎದುರಿಸಬೇಕಿದೆ.

ಪ್ರಕರಣ ಸಂಬಂಧ ಎಸ್‌ಐಟಿ ಪರ ವಾದಿಸಿದ್ದ ವಿಶೇಷ ಅಭಿಯೋಜಕ ಬಿ.ಎನ್.ಜಗದೀಶ್, ಮ್ಯಾಜಿಸ್ಟ್ರೇಟ್ ಅನುಮತಿ ಪಡೆದ ನಂತರವೇ ತನಿಖೆ ನಡೆಸಲಾಗುತ್ತಿದೆ.

ಎಸ್‌ಐಟಿ ತನಿಖೆಯನ್ನು ಅರ್ಜಿದಾರರೇ ಹೊಗಳಿದ್ದಾರೆಂದು ನ್ಯಾಯಾಲಯಕ್ಕೆ ತಿಳಿಸಿದ್ದರು. ಈ ಹಿನ್ನಲೆ ತನಿಖೆಗೆ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಿ, ಆರೋಪಿಗಳಿಗೆ ಕಿರುಕುಳ ನೀಡದಂತೆ ಮಧ್ಯಂತರ ಆದೇಶ ವಿಸ್ತರಣೆ ಮಾಡಿ ನ್ಯಾ.ಮೊಹಮ್ಮದ್ ನವಾಜ್ ಅವರಿದ್ದ ಹೈಕೋರ್ಟ್ ಪೀಠದಿಂದ ಆದೇಶ ಮಾಡಲಾಗಿದೆ.

ನಟ ಧರ್ಮೇಂದ್ರ ಆಸ್ಪತ್ರೆಯಿಂದ ಡಿಸ್ಚಾರ್ಜ್

ಮುಂಬೈ: ನಿವಾಸದಲ್ಲಿಯೇ ಚಿಕಿತ್ಸೆ ಮುಂದುವರಿಸುವುದಾಗಿ ಕುಟುಂಬಸ್ಥರು ನಿರ್ಧರಿಸಿ ವೈದ್ಯರಿಗೆ ಹೇಳಿದ ನಂತರ ಇಂದು ಬುಧವಾರ ಬೆಳಗ್ಗೆ ದಕ್ಷಿಣ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಿಂದ ಹಿರಿಯ ನಟ ಧರ್ಮೇಂದ್ರ ಅವರನ್ನು ಡಿಸ್ಚಾರ್ಜ್ ಮಾಡಲಾಗಿದೆ ಎಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.



ಕುಟುಂಬ ಸದಸ್ಯರು ಮತ್ತು ಆಸ್ಪತ್ರೆ ಅಧಿಕಾರಿಗಳು ಬಹಿರಂಗಪಡಿಸದ ಕೆಲವು ಚಿಕಿತ್ಸೆ ಮತ್ತು ವೈದ್ಯಕೀಯ ಪರೀಕ್ಷೆಗಳಿದ್ದು ಇಂದು 89 ವರ್ಷದ ನಟ ಧರ್ಮೇಂದ್ರರನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ.

ಧರ್ಮೇಂದ್ರ ಅವರನ್ನು ಬೆಳಗ್ಗೆ 7.30 ರ ಸುಮಾರಿಗೆ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಕುಟುಂಬ ಸದಸ್ಯರು ಅವರಿಗೆ ಮನೆಯಲ್ಲೇ ಚಿಕಿತ್ಸೆ ನೀಡಲು ನಿರ್ಧರಿಸಿದ್ದಾರೆ" ಎಂದು ಬ್ರೀಚ್ ಕ್ಯಾಂಡಿ ಆಸ್ಪತ್ರೆಯ ಡಾ. ಪ್ರತೀತ್ ಸಮ್ದಾನಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ನಂಬರ್ 203/22, ಗೋಕುಲ ಬಡಾವಣೆ, ಹುಣಸೂರು, ಮೈಸೂರು ಜಿಲ್ಲೆ–571105 ರ ವಾಸಿಯಾದ (1). ದೇವರಾಜ ಬಿನ್. ಲೇಟ್. ಮಹದೇವ ಮತ್ತು (2). ಮಲ್ಲಿಕಾರ್ಜುನ್ ಬಿನ್. ಲೇಟ್. ಮಹದೇವ ಮತ್ತು ನಂಬರ್ 1180, ಕರಿಗೌಡ ಬೀದಿ, ಹುಣಸೂರು, ಮೈಸೂರು ಜಿಲ್ಲೆ–571105 ರ ವಾಸಿಯಾದ (3). ನಾಗರಾಜು ಬಿನ್ ಲೇಟ್. ಮಹದೇವ ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿಬರ್ಂಧಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸರ್ವೆ ನಂಬರ್: 183/2A3 ರಲ್ಲಿನ ಇಪ್ಪತ್ತಾರು ಗುಂಟೆ (0.26.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂಬರ್ 178, ಪಶ್ಚಿಮಕ್ಕೆ : ಸರ್ವೆ ನಂಬರ್ 183/2A4, ಉತ್ತರಕ್ಕೆ : ಸರ್ವೆ ನಂಬರ್: 183/2A2 ದಕ್ಷಿಣಕ್ಕೆ :ಸರ್ವೆ ನಂಬರ್ 183/2B

ಐಟಂ–2

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸರ್ವೆ ನಂಬರ್: 183/2A4 ರಲ್ಲಿನ ಹದಿನೇಳು ಗುಂಟೆ (0.17.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಸರ್ವೇನಂಬರ್ 183/2A3, ಪಶ್ಚಿಮಕ್ಕೆ :ರಸ್ತೆ, ಉತ್ತರಕ್ಕೆ : ಸರ್ವೇ ನಂಬರ್ 183/2A1 ಮತ್ತು 183/2A2, ದಕ್ಷಿಣಕ್ಕೆ: ಸರ್ವೇ ನಂಬರ್: 183/2B

Sd/- Prakash Kalappa.M.N
KAR-1996-2000,
Advocate & Leagal Consultatant
#67/7A, P.R.I. Complex, No.2 &3, 1st Floor,
New Sayyaji Rao Road, Fort Mohalla,
MYSURU-570004, Mob: 9343112535,
ದಿನಾಂಕ : 12/11/2025 Email: mnprakashkalappa@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ. ರಮೇಶ್ ಎಲ್. ರವರು ಮೈಸೂರು ಸಿಟಿ. ಆಲನಹಳ್ಳಿ, ಗಾಯಿತ್ರಿ ಬಡಾವಣೆ, ನಂಬರ್ 67ರ ಮನೆಯಲ್ಲಿ ವಾಸವಾಗಿರುವ ಶ್ರೀ ಎಂ. ಪುಟ್ಟಮಾದಯ್ಯ ರವರ ಮಗನಾದ ಶ್ರೀ.ಸಚಿನ್ .ಪಿ ರವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಒಪ್ಪಿರುತ್ತಾರೆ.

ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಸಾರ್ವಜನಿಕರಿಗಾಗಲೀ, ಸಂಘ ಸಂಸ್ಥೆಗಳಿಗಾಗಲೀ, ಬ್ಯಾಂಕು, ಸೊಸೈಟಿಗಾಗಲೀ, ಹಣಕಾಸು ಸಂಸ್ಥೆಯಲ್ಲಾಗಲೀ ಹಾಗೂ ಕುಟುಂಬಸ್ಥರಿಗಾಗಲೀ, ಮೈನರ್ ಕ್ಲೈಮುಗಳು ಸದರಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಋಣಭಾರಗಳು, ಹಕ್ಕುಗಳು, ಕ್ಲೈಮುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ಹತ್ತು (10) ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಡನೆ ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಸಂಪರ್ಕಿಸಬೇಕಾಗಿ ಕೋರಿಕೆ. ಹಾಗೊಂದು ವೇಳೆ ಯಾವುದೇ ಕರೆ, ಆಕ್ಷೇಪಣೆಗಳು ಬರಲಿಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತನ್ನು ಕ್ರಯಪತ್ರ ಮಾಡಿಕೊಳ್ಳಲು ನನ್ನ ಕಕ್ಷಿದಾರರಿಗೆ ಯಾವುದೇ ಅಭ್ಯಂತರವಿಲ್ಲವೆಂದು ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, "ಕಾರ್ಯ" ಗ್ರಾಮಕ್ಕೆ ಸೇರಿದ ಖುಷ್ಕಿ ಸರ್ವೆ ನಂ. 75/2 ರ 2.00 ಎಕರೆ ಆಕಾರ ರೂ. 3.68 ಉಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆನಂ. 77 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 74 ರ ಜಮೀನು, ಉತ್ತರಕ್ಕೆ: ಸರ್ವೆ ನಂ. 75/1 ರ ಜಮೀನು, ದಕ್ಷಿಣಕ್ಕೆ: ಮಣ್ಣಿನ ದಾರಿ

ಈ ಮಧ್ಯೆ ಇರುವ 2.00 ಎಕರೆ ಜಮೀನು ಈ ಸಾರ್ವಜನಿಕ ಪ್ರಕಟಣೆಗೆ ಒಳಗೊಂಡ ಸ್ವತ್ತಾಗಿರುತ್ತದೆ.

ಸಹಿ/- ಎ.ಕೆ. ಮಂಜುನಾಥ,
ಬಿಕಾಂ. ಎಲ್.ಎಲ್.ಬಿ
ವಕೀಲರು ಹಾಗೂ ನೋಟರಿ
ನಂ. 716, ಡಿ ಬ್ಲಾಕ್ ಕವಿತಾ ಬೇಕರಿ ಸರ್ಕಲ್, ಜೆ.ಪಿ ನಗರ, ಮೈಸೂರು –08,
ದಿ: 11-11-2025 ಮೊ: 9900212239

ಪತ್ರಿಕಾ ಪ್ರಕಟಣೆ
ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ ಶ್ರೀ.ರಮೇಶ್.ಎನ್.ಎಂ ಬಿನ್ ಮಂಚೇಗೌಡ, ನಂ–370, 9ನೇ ಮುಖ್ಯ ರಸ್ತೆ ಆಲನಹಳ್ಳಿ ಬಡಾವಣೆ, ಮೈಸೂರು –570028, ರವರು ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ಖರೀದಿ ಮಾಡಲು ಶ್ರೀಮತಿ.ಶೈಲಜಾ ಸುರೇಶ್ ಕೋಂ ಕೆ.ಎಂ.ಪಿ ಸುರೇಶ್, ನಂ–204, ಸುಳ್ಳ ರಸ್ತೆ, 2ನೇ ತಿರುವು, ಹುಬ್ಬಳ್ಳಿ–580023 ಮತ್ತು ಕುಮುದ್ವತಿ.ಜಿ ಕಾಖಂಡಕಿ ಕೋಂ ಗದಿಗಪ್ಪ ಎಲ್ ಕಾಖಂಡಕಿ, ಪ್ಲಾಟ್ ನಂ–18, ಆಶ್ರಮ್ ರೋಡ್, ವಿಜಯಪುರ, ಶಿವಯೋಗಿನಗರ, ಬಿಜಾಪುರ ಪೋಸ್ಟ್, ವಿಜಯಪುರ–586101, ಇವರುಗಳೊಂದಿಗೆ ದಿನಾಂಕ20.09.2025ರಂದು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಸಾರ್ವಜನಿಕರಿಗೆ ಯಾರಿಗಾದರೂ ಹಕ್ಕು –ಹಿತಾಸಕ್ತಿ ವಗೈರೆಗಳಿದ್ದರೆ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ ಏಳು ದಿನದೊಳಗೆ ಕೆಳಗೆ ನಮೂದಿಸಿರುವ ನಮ್ಮ ಕಛೇರಿ ವಿಳಾಸಕ್ಕೆ ದಾಖಲಾತಿಗಳೊಂದಿಗೆ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸಾರ್ವಜನಿಕರ್ಯಾರಿಗೂ ಯಾವುದೇ ತಕರಾರು ಇಲ್ಲವೆಂದು ಭಾವಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ನಂತರ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಚಾಮುಂಡಿವಿಹಾರ ಬಡಾವಣೆ, ನಿ.ಸಂ–2/ಎಲ್, ಹಳೇ ಸಂಖ್ಯೆ– 670, ಹೊಸ ಸಂಖ್ಯೆ–28, ಸ್ವತ್ತಿನ ಸಂಖ್ಯೆ: 61–3–589–2ಎಲ್, ಅಳತೆ ಪೂ–ಪ 51 ಅಡಿ, ಉ–ದ–39, ಅಡಿ ಒಟ್ಟು 185.01 ಚ.ಮೀ., ಸ್ವತ್ತಿಗೆ ಚೆಕ್ಕುಬಂಧಿ:– ಪೂರ್ವಕ್ಕೆ : ನಿ.ಸಂ–2/ಎಂ.(31/12), ಪಶ್ಚಿಮಕ್ಕೆ: 22.00 ಅಡಿ ರಸ್ತೆ, ಉತ್ತರಕ್ಕೆ : 2/ಜೆ (31/6), ದಕ್ಷಿಣಕ್ಕೆ : ಟಿ.ನರಸೀಪುರ –ಮೈಸೂರು ರಸ್ತೆ.

ಸಹಿ/– ರಾಜೇಶ.ಕೆ.ಕೆ.
ವಕೀಲರು, ನಂ: 1241, ಸಿಹೆಚ್–2/2, 1ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–570004. ಮೊ ನಂ–9343354445.

CHANGE OF NAME

I, VINOD UMARANI, S/o, Basavaraj G. Umarani residing at Door NO. 189, 'Sankhya'. KBL Enclave, Vijayanagar 4th Stage, Mysuru-570032, I have Changed my Daughter Name From Aarna Umarani to Aarna V. Umarani on My Own Free Will Sworn in Before Notary C. Mangala, Mysuru, vide Affidavit Dated 12-11-2025
Sd/- Vinod Umarani

CHANGE OF NAME

I, VINOD UMARANI, S/o, Basavaraj G. Umarani residing at Door NO. 189, 'Sankhya'. KBL Enclave, Vijayanagar 4th Stage, Mysuru-570032, I have Changed my Son Name From Anvith Umarani to Anvith Vinod Umarani on My Own Free Will Sworn in Before Notary C. Mangala, Mysuru, vide Affidavit Dated 12-11-2025
Sd/- Vinod Umarani

ನೇಮಕಾತಿ ಅಧಿಸೂಚನೆ 01/2025

ಕೇಂದ್ರೀಯ ವಿದ್ಯಾಲಯ ಸಂಘಟನ್ ಮತ್ತು ನವೋದಯ ವಿದ್ಯಾಲಯ ಸಮಿತಿಗಳಲ್ಲಿ ವಿವಿಧ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇಮಕಾತಿ

ಕೇಂದ್ರೀಯ ವಿದ್ಯಾಲಯ ಸಂಘಟನ್ (ಕೆವಿಎಸ್) ಮತ್ತು ನವೋದಯ ವಿದ್ಯಾಲಯ ಸಮಿತಿ (ಎನ್‌ವಿಎಸ್) ಪರವಾಗಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಕೆವಿಎಸ್ ಮತ್ತು ಎನ್‌ವಿಎಸ್‌ಗಳಲ್ಲಿ ವಿವಿಧ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ. ವಿವರವಾದ ಅಧಿಸೂಚನೆ, ಅರ್ಜಿ ಸಲ್ಲಿಕೆ ವಿಧಾನ ಮತ್ತು ನೇಮಕಾತಿಗೆ ಸಂಬಂಧಿಸಿದ ಇನ್ನಿತರ ನಿಖರ ಮಾಹಿತಿಗಾಗಿ ಅಭ್ಯರ್ಥಿಗಳು ಕ್ರಮವಾಗಿ ಸಿಬಿಎಸ್‌ಇ. ಕೆವಿಎಸ್ ಮತ್ತು ಎನ್‌ವಿಎಸ್‌ನ ಅಧಿಕೃತ ವೆಬ್‌ಸೈಟ್‌ಗಳಾದ https://www.cbse.gov.in/, https://kvsangathan.nic.in/ ಮತ್ತು https://navodaya.gov.in/ ಗೆ ಮಾತ್ರ ಭೇಟಿ ನೀಡುವಂತೆ ಸಲಹೆ ನೀಡಲಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆಗಾಗಿ ಪೋರ್ಟಲ್ 14ನೇ ನವೆಂಬರ್ 2025 ರಿಂದ ಪ್ರಾರಂಭವಾಗಲಿದ್ದು, ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ 04ನೇ ಡಿಸೆಂಬರ್ 2025 ಆಗಿರುತ್ತದೆ.

ನಿರ್ದೇಶಕರು (CTET)
CBSE
cbc21107/12/0007/2526